# 54. ದೇವದರ್ಶನ

ಆತ್ಮದರ್ಶನ ಮತ್ತು ಆತ್ಮೋದ್ಧಾರಕ್ಕೆ ಮಾರ್ಗಗಳಿವೆ. ಆತ್ಮಧ್ಯಾನ, ಶಾಸ್ತ್ರಸ್ವಾಧ್ಯಾಯ, ಧರ್ಮೋಪದೇಶವನ್ನು ಕೇಳುವುದು, ತತ್ತ್ವಚಿಂತನೆ ಮಾಡುವುದು ಮುಂತಾದುವು ಮತ್ತು ಇವುಗಳೆಲ್ಲಕ್ಕಿಂತ ಭಗವಂತನ ಬಿಂಬ ದರ್ಶನವು ಪರಿಣಾಮಕಾರಿಯಾದ ಮಾರ್ಗ. ಇದು ಸ್ವಾತ್ಮದರ್ಶನದ ಪ್ರಥಮ ಸೋಪಾನ. ಆತ್ಮನು ಜ್ಞಾನಮಯ, ಆನಂದಮಯ, ಶುದ್ಧಚಿನ್ಮಯ ಮತ್ತು ಅವಿನಾಶಿ ಆದವನು. ಇಂತಹ ಆತ್ಮನು ಸರ್ವರಲ್ಲಿದ್ದರೂ ಇರುವಿಕೆಯ ಅರಿವಿಲ್ಲದೆ ಅನೇಕರು ಪರದಾಡುತ್ತಿದ್ದಾರೆ ಅಂಥವರಿಗೆ ಶ್ರೀ ದೇವದರ್ಶನವು ಆತ್ಮದರ್ಶನವನ್ನು ಮಾಡಿಸುತ್ತದೆ.

ನಾವು ನೋಡುವ ಪದಾರ್ಥಗಳು ಜಡವಾಗಲೀ ಚೇತನವಾಗಲೀ ಅದರ ಪ್ರಭಾವದ ಪ್ರತಿರೂಪ ನಮ್ಮ ಹೃದಯದಲ್ಲುಂಟಾಗುವುದು ಸಹಜ. ಅದರಂತೆ ನಮ್ಮ ಗುರಿ ಸ್ವಾತ್ಮೋಪಲಬ್ಧಿ ಅದರಿಂದ ಒದಗುವ ಸ್ಥಿರ ಸೌಖ್ಯಗಳನ್ನು ಸಾಧಿಸಿದಂಥವರ ಮಾರ್ಗದರ್ಶನ ನಮಗೆ ಬೇಕೇ ಬೇಕು. ಅದನ್ನು ತೋರಿಸಿದವರೆ ಅರಹಂತ ಭಗವಾನರು. ಆ ಭಗವಂತನ ಬಿಂಬದರ್ಶನ ಮಾಡಲೇಬೇಕು ಆತ್ಮನಿಗೆ ಮುತ್ತಿದ್ದ ಕರ್ಮಬಂಧನದ ಬಿಡುಗಡೆ ಹೊಂದಿ, ಆದರ್ಶ ಗುಣಗಳನ್ನು ಪ್ರಕಟ ಮಾಡಿಕೊಂಡು ದೋಷರಹಿತರೂ, ಸರ್ವಜ್ಞರೂ, ಹಿತೋಪದೇಶಿಗಳೂ ಆಗಿ ಸಹಜಾನಂದ ಶುದ್ಧರೂಪಿಗಳಾದ ಆತ್ಮರೇ ಪರಮಾತ್ಮರು. ಇವರ ಪ್ರತಿ ರೂಪ ದರ್ಶನವನ್ನು ಭಕ್ತಿಪೂರ್ವಕವಾಗಿ ಮಾಡುವುದಾದರೆ ಅದೇ ವೀತರಾಗ ಶಾಂತಭಾವದ ಕರುಣಾಮುದ್ರೆಯು ಆತ್ಮನಲ್ಲಿ ಅಚ್ಚೊತ್ತಿ ಅಮಿತಾನಂದವಾಗುವುದರಲ್ಲಿ ಸಂಶಯವಿಲ್ಲ. ಈ ದೇವದರ್ಶನವು ಆತ್ಮೋತ್ಥಾನದ ಸಹಜ ಮತ್ತು ಸರಳವಾದ ಸಾಧನ. ಜಿನಧರ್ಮಾವಲಂಬಿಯಾಗಲು ಹೊರಟ ಭವ್ಯರಿಗೆ ಗುರುಗಳಿಂದಾಗುವ ಮೊಟ್ಟ ಮೊದಲ ಉಪದೇಶವೆಂದರೆ "ನಿತ್ಯವೂ ನೀನು ಮಂದಿರಕ್ಕೆ ಹೋಗಿ ದೇವರ ದರ್ಶನ ಮಾಡು. ಬೊಗಸೆಯಲ್ಲಿದ್ದ ನೀರು ಬೆರಳ ಸಂದಿಯಲ್ಲಿ ಸೋರಿಹೋಗುವಂತೆ ದೇವದರ್ಶನದಿಂದ ಕರ್ಮಗಳು ಸೋರಿ ಹೋಗುತ್ತವಲ್ಲದೆ ಸ್ವರ್ಗಾದಿ ಮೋಕ್ಷಸುಖವನ್ನು ದೊರಕಿಸಿಕೊಡುತ್ತದೆ.'' ಎಂಬುದು. ಆಹಾ! ಭಗವಂತನ ಬಿಂಬ ದರ್ಶನದಿಂದ ಇದಕ್ಕಿಂತಲೂ ಮಿಗಿಲಾದದ್ದು ಇನ್ನೇನು ಬೇಕು?

ತನ್ನ ಮುಖವನ್ನು ನೋಡಿಕೊಳ್ಳಲು ಕನ್ನಡಿ ಬೇಕು ಅದರಿಂದ ಮುಖದಲ್ಲಿರುವ ಹುಳುಕು-ಥಳಕು, ಸೌಂದರ್ಯ ಮತ್ತು ಕುರೂಪತನವು ಗೋಚರವಾಗುತ್ತದೆ. ಹಾಗೆಯೇ ಆತ್ಮಸ್ವರೂಪವನ್ನು ನೋಡಿಕೊಳ್ಳಲು ಒಂದು ದರ್ಪಣ ಬೇಕು. ಅದೇ ಅರಹಂತ ಭಗವಾನರ ಶುದ್ಧ, ಶಾಂತ, ನಿರ್ವಿಕಾರ, ನಿರುಪಮ, ನಿರ್ಮಲ, ನಿರಂಜನ, ನಿರಾಮಯ, ನಿಜಗುಣ ಜಿನಬಿಂಬ ಈ ದರ್ಪಣದಿಂದ ಆತ್ಮನ ಕ್ರೋಧಾದಿ ದೋಷಗಳನ್ನಳಿಸಿಕೊಳ್ಳಲೂ ಸಹಜ ಸೌಂದರ್ಯದ ಆತ್ಮ ಚೈತನ್ಯವನ್ನು ಅರಿಯಲೂ ಸಾಧ್ಯವಾಗುವುದು. ಏಕೆಂದರೆ - ಆ ಪರಮಾತ್ಮರು ನಿರ್ದೋಷಿಗಳೂ ಸರ್ವಜ್ಞರೂ ಹಿತೋಪದೇಶಿಗಳೂ ಆಗಿ ಸಹಜಾನಂದದಲ್ಲಿ ಲೀನವಾದವರು. ಅವರ ಪ್ರತಿರೂಪದ ದರ್ಶನದಿಂದ ಅಂತಹ ಗುಣ ಪ್ರಕಟವಾಗುವುದರಲ್ಲಿ ಸಂದೇಹವಿಲ್ಲ.

ಸಾಧುಗಳೂ, ಮುನಿಗಳೂ, ತಪಸ್ವಿಗಳೂ ಆದ ಮಹಾಮಹಿಮರೂ ಇದೇ ಜಿನಬಿಂಬವನ್ನು ಹೃದಯ ಕಮಲದಲ್ಲಿ ರೂಪಿಸಿಕೊಂಡು ಆ ರೂಪದ ಮಂತ್ರವನ್ನೇ ಜಪಿಸಿ, ಕೊನೆಗೊಮ್ಮೆ ತದ್ರೂಪವೇ ತಾವಾಗುತ್ತಾರೆ.ಭಕ್ತನು ಭವಭವಗಳಲ್ಲೂ ಭಗವಂತನಿಗೆ ಬರೀ ವಂದನೆ ಪೂಜೆ ಮಾಡುವುದಷ್ಟೇ ಅಲ್ಲ. ಆ ಪೂಜ್ಯತೆಯನ್ನು ಒಂದಲ್ಲ ಒಂದು ಭವದಲ್ಲಿ ತಾನೂ ಪಡೆಯುವುದಕ್ಕಾಗಿ ಧ್ಯಾನ ವಂದನೆ, ಪೂಜೆ ದರ್ಶನಾದಿಗಳನ್ನು ಮಾಡುವುದು. ದೋಷರಹಿತ ಪರಮಾತ್ಮನ ದರ್ಶನದಿಂದ ತಾವೂ ದೋಷರಹಿತರಾಗಿ ಅನಂತ ಶಕ್ತಿ, ಜ್ಞಾನಾದಿ ಅತಿಶಯಗಳಿಂದ ಕೂಡಿದವರಾಗುತ್ತಾರೆ. ಕೂಡಲೇ ದೇವೇಂದ್ರಾದಿಗಳು ಸಮವಸರಣವೆಂಬ ಅಂಬರ ಮಂದಿರವನ್ನು ನಿರ್ಮಾಣ ಮಾಡುತ್ತಾರೆ. ಅದರ ಮಧ್ಯದ ಉನ್ನತ ವೇದಿಕೆಯ ಮೇಲೆ ಕರ್ಮರಹಿತ ಪರಮಾತ್ಮರಾದ ಅರಹಂತರು ವಿರಾಜಮಾನರಾಗಿ ಜಗತ್ತಿಗೆ ದಿವ್ಯೋಪದೇಶವನ್ನು ಸಾರುತ್ತ ಚರಿಸುತ್ತಾರೆ. ಅಂತಹ ದಿವ್ಯ ಮೂರ್ತಿಯ ಸಾಕ್ಷಾತ್ ದರ್ಶನ ಮಾಡಿ ಉಪದೇಶ ಕೇಳುವುದರಿಂದ ಜೀವಿಗಳಿಗೆ ಅಚಿಂತ್ಯ ಲಾಭವಾಗುವುದು. ಆದರೆ ಆ ಸೌಭಾಗ್ಯದ ಲಬ್ಧಿಯು ಕಳೆದ ಚತುರ್ಥ ಕಾಲದಲ್ಲಿ ಅಂದರೆ 2560 ವರ್ಷಗಳ ಹಿಂದೆ ದೊರೆಯುತ್ತಿತ್ತು. ಈಗ ಪಂಚಮ ಕಾಲದ ಸ್ಥಿತಿ. ಸಾಕ್ಷಾತ್ ಅರಹಂತರ ದರ್ಶನವು ಈ ಕ್ಷೇತ್ರದಲ್ಲಿ ದುರ್ಲಭ. ಆದರೆ ಈಗಲೂ ವಿದೇಹ ಕ್ಷೇತ್ರದಲ್ಲಿ ಸೀಮಂದರ ಸ್ವಾಮಿಯೇ ಮುಂತಾದ ಅರಹಂತರ ಸಮವಸರಣಗಳು ಇವೆ. ಆದರೆ ಈ ನಾವಿರುವ ಕ್ಷೇತ್ರದಲ್ಲಿ ವೃದ್ಧಿಧಾರಿಗಳಲ್ಲದ್ದರಿಂದ ನಾವು ಅಲ್ಲಿ ಹೋಗಿ ದರ್ಶನ ಮಾಡಿ ಆನಂದ ಪಡೆಯುವ ಭಾಗ್ಯವಿಲ್ಲ. ಆದರೆ ಅವರನ್ನು ಭಾವಿಸಿ ಅವರ ಪ್ರತಿರೂಪದ ದರ್ಶನ



ಪಡೆಯಬಹುದು. ಆಗಿನ ಎಲ್ಲ ಅರಹಂತರೂ ಈಗ ಸಿದ್ಧಾಲಯದಲ್ಲಿ ಲೋಕದ ತುತ್ತ ತುದಿಯಲ್ಲಿ ಸಹಜಾನಂದ ಜ್ಞಾನ ಚೇತನ ಸ್ವರೂಪಿಗಳಾಗಿದ್ದಾರೆ. ಆ ಸಿದ್ಧ ಭಗವಾನರ ದರ್ಶನವು ಜೀವಿಗಳ ದೃಷ್ಟಿಗೆ ಅಗೋಚರ. ಹಾಗಿದ್ದ ಮೇಲೆ ನಾವು ಆ ದರ್ಶನಾಭಿಲಾಷೆಯನ್ನು ಹೇಗೆ ಪೂರೈಸಿಕೊಳ್ಳಬೇಕು? ಎಂದರೆ ಸಮಾಧಾನ ಇಷ್ಟೇ. ವಾಸ್ತವಿಕ ಅಂದರೆ ಪ್ರತ್ಯಕ್ಷ ಪದಾರ್ಥದ ಅಭಾವದಲ್ಲಿ ಅದರ ಪ್ರತಿಕೃತಿಯಿಂದಲೂ ನಾವು ಉಪಯೋಗವನ್ನು ಪಡೆದುಕೊಳ್ಳಬಹುದು (True Copy) ಅಂದರೆ ಅಸಲಿ ಕಾಪಿ ಇರುವುದರಿಂದಲೇ ನಕಲಾಗುವುದು. ಹಾಗೆಯೇ ನಕ್ಷೆ, ಚಿತ್ರ, ಫೋಟೋ ಉಂಟಾಗುವುದು. ಆಗ ಇದ್ದ ಅರಹಂತರ ರೂಪ ಲಕ್ಷಣವನ್ನು ಆಗಮದಲ್ಲಿ ಕವಿಗಳೂ, ಕಲಾವಿದರೂ, ಆಚಾರ್ಯರೂ ವರ್ಣಿಸಿ ಉಳಿಸಿಕೊಂಡು ಬಂದಿದ್ದಾರೆ. ಆ ನಿರ್ಣಯದ ಪ್ರಕಾರ ಮೂರ್ತಿ ಮಾಡಿ ದರ್ಶನದ ಲಾಭ ಪಡೆಯುವ ಪದ್ಧತಿಯು ಪ್ರಾಚೀನ ಕಾಲದಿಂದಲೂ ಪ್ರಚಲಿತವಾಯಿತು.

ಹುಲಿ, ಸಿಂಹ, ಆನೆ ಮುಂತಾದ ಪ್ರಾಣಿಗಳನ್ನು ಮಕ್ಕಳೆದುರಿಗೆ ತಂದು ನಿಲ್ಲಿಸಿ ಪಾಠ ಮಾಡಲು ಸಾಧ್ಯವಿಲ್ಲ. ಆದರೂ ಅವುಗಳ ಚಿತ್ರವನ್ನು ತೋರಿಸಿ ಆ ಪ್ರಾಣಿಗಳ ರೂಪ ಮಕ್ಕಳಿಗೆ ವೇದ್ಯವಾಗುವಂತೆ ಮಾಡುವುದಿಲ್ಲವೇ? ಮತ್ತು ಹಿಮಾಲಯ ಪರ್ವತ, ಗಂಗಾ ನದಿ, ಅಮೇರಿಕಾ ಮುಂತಾದ ದೇಶಗಳ ಸ್ಥಾನ ಮಾನಗಳನ್ನು ನಕ್ಷೆಗಳೊಂದಿಗೆ ವರ್ಣಿಸುವುದಿಲ್ಲವೇ? ಹಾಗೇ ಪ್ರತ್ಯಕ್ಷ ಅರಹಂತ ವೀತರಾಗರ ಅಭಾವದಿಂದ ಅವರ ಪ್ರತಿಮೆಯನ್ನು ಮಾಡಿಸಿ, ಅದನ್ನೇ ಭಾವಿಸಿ, ಧ್ಯಾನಿಸುವುದರ ಮೂಲಕ ದರ್ಶನ ಲಾಭ ಪಡೆಯಬಹುದು. ಆಗಮ ಪ್ರಣೀತ ಸುಲಕ್ಷಣ ಸರ್ವಾಂಗ ಸಂಪೂರ್ಣ ಸುಂದರ ವೀತರಾಗ ಜಿನಬಿಂಬದ ದರ್ಶನದಿಂದಲೇ ಪಾಪನಾಶವೂ ಸ್ವರ್ಗಾದಿ ಮೋಕ್ಷ ಪದವಿಯೂ ಲಭಿಸುವುದು. ಅರಹಂತ ಭಗವಾನರು ಸಮವಸರಣದಲ್ಲಿ ಪದ್ಮಾಸನರಾಗಿ ಕುಳಿತು ಅಥವಾ ಖಡ್ಗಾಸನರಾಗಿ ನಿಂತು ನಾಸಿಕಾಗ್ರದಲ್ಲಿ ದೃಷ್ಟಿಯಿಟ್ಟು ಶಾಂತ ಭಾವ ನಿರ್ವಿಕಾರ, ನಿಶ್ಚಲ, ನಿರ್ಭಯ, ನಿರ್ದೋಷ ಮತ್ತು ಗಂಭೀರವಾದ ಪ್ರಸನ್ನ ಮುದ್ರೆಯಲ್ಲಿ ವಿರಾಜಮಾನರಾಗಿರುತ್ತಿದ್ದರು. ತೀರ್ಥಂಕರರಿಗೂ, ಜಿನಕೇವಲಿಗಳಿಗೂ ಆ ಪದವಿಯೊದಗುತ್ತಿತ್ತು. ಆ ಅರಹಂತಾವಸ್ಥೆಯ ಪ್ರತಿರೂಪವಾದ ಯಾವ ಮೂರ್ತಿಯನ್ನು ಮಾಡಲಾಗುತ್ತದೋ ಅದರಲ್ಲಿ ಯಾವ ಯಾವ ತೀರ್ಥಂಕರರ ಲಾಂಛನವಿರುತ್ತದೋ ಅಂತಹ ಮೂರ್ತಿಯು ದರ್ಶನಕ್ಕೂ ಪೂಜೆಗೂ ಯೋಗ್ಯವಾಗಿರುತ್ತದೆ. ಆ ಮೂರ್ತಿಯ ದರ್ಶನದಿಂದ ಅದೇ ಮುದ್ರೆಯನ್ನು ಭಾವಿಸಿ ಆತ್ಮನನ್ನು ಆ ಮುದ್ರೆಯಲ್ಲಿ ಸ್ಥಾಪಿಸಿ ಆ ಭಾವದಲ್ಲೇ ವಿಹರಿಸಿ, ಲೀನವಾಗುವುದೇ

ಮೂರ್ತಿ ದರ್ಶನದಿಂದಾಗುವ ಪ್ರಯೋಜನ. ಆಗಿನ ಸ್ಥಿತಿಯು ಸಾರ್ಥಕವಾದುದು. ದೇವದರ್ಶನದಿಂದ ಸಮ್ಯಕ್ತ್ವಪ್ರಾಪ್ತವಾಗುವುದು.

ಬಿಂಬವು ಸಮವಸರಣದ ಪ್ರತಿಕೃತಿ ರೂಪವಾದ ಮಂದಿರಲ್ಲಿಡಲ್ಪಟ್ಟು ಪಂಚಕಲ್ಯಾಣಾದಿ ವೈಭವದಿಂದ ಪ್ರತಿಷ್ಠಾಪಿಸಲ್ಪಟ್ಟರುತ್ತದೆ. ಈ ಮೂರ್ತಿಯನ್ನು ಅಭಿಷೇಕ, ಅರ್ಚನ, ಸ್ತುತಿ, ವಂದನಾದಿಗಳಿಂದ ದರ್ಶನ ಲಾಭ ಪಡೆದು ಆತ್ಮೋನ್ನತಿಯನ್ನು ಹೊಂದಬಹುದು. ಚೈತನ್ಯವಿರುವ ಭವ್ಯರು ಶಿಥಿಲವಾಗಿರುವ ಮಂದಿರಗಳ ಜೀರ್ಣೋದ್ಧಾರ, ನೂತನ ಮಂದಿರಗಳ ನಿರ್ಮಾಣ ಪ್ರತಿಷ್ಠಾಪನಾದಿ ಪುಣ್ಯ ಕಾರ್ಯಗಳನ್ನು ಮಾಡಿ ಅಜರಾಮರ ಕೀರ್ತಿ ಪಡೆದು ಆತ್ಮೋದ್ಧಾರಕರಾಗಿದ್ದಾರೆ ಅಂತಹ ಪುಣ್ಯಾತ್ಮರು ಈಗಲೂ ಇದ್ದಾರೆ.

## 55. ಪ್ರತಿಕ್ರಮಣ ಅಥವಾ ದೋಷಪರಿಹಾರೋಪಾಯ

ಭಾರತವರ್ಷವು ಯಾವಾಗಲೂ ಬತ್ತಿಹೋಗದ ಆಧ್ಯಾತ್ಮ ತತ್ವಜ್ಞಾನದ ಮಹಾಸಾಗರದಂತೆ ಇದೆ. ಈ ಮಹಾಸಾಗರದಿಂದ ಅನಾದಿ ಕಾಲದಿಂದಲೂ ಅನಂತಾನಂತ ಆತ್ಮರುಗಳು ಸಮ್ಯಗ್ದರ್ಶನ - ಜ್ಞಾನ - ಚಾರಿತ್ರರೂಪವಾದ ಅಮೂಲ್ಯ ರತ್ನಗಳನ್ನು ಹುಡುಕಿ, ಪ್ರಾಪ್ತಮಾಡಿಕೊಂಡು ಅವುಗಳ ಬೆಳಕಿನ ಹೊಳಪಿನ ದರ್ಪಣದಿಂದ ತಮ್ಮ ಸ್ವರೂಪವನ್ನು ಕಂಡುಕೊಂಡು ಚಿರಸುಖಶಾಂತಿಯ ಸುಖವನ್ನೇರಿ, ಅಶಾಶ್ವತವಾದ ಜಗದ ಜಂಜಟದಿಂದ ಪಾರು ಹೊಂದಿ ಶಾಶ್ವತ ಪದವಿಯ ಸ್ಥಳವನ್ನು ಸೇರಿ ಚಿನ್ಮಯರಾಗಿದ್ದಾರೆ. ಅವರು ತಾವು ಪಡೆದುಕೊಂಡ ರತ್ನತ್ರಯ ಸ್ವರೂಪವನ್ನು ಅವುಗಳು ದೊರೆಯುವ ಸ್ಥಳವನ್ನೂ, ಪಡೆದುಕೊಳ್ಳುವ ರೀತಿ, ನೀತಿ, ನಿಯಮಾದಿಗಳನ್ನೂ, ಅವುಗಳಿಂದ ಉಂಟಾಗುವ ಲಾಭವನ್ನೂ ಜಗತ್ತಿಗೆ ತಿಳಿಸಿ ಜಗತ್ಕಲ್ಯಾಣವನ್ನು ಬಯಸಿ ಕೃತಾರ್ಥರಾಗಿದ್ದಾರೆ. ಆ ರತ್ನತ್ರಯವೇ ಧರ್ಮವೆಂದೂ, ಅವುಗಳ ಪ್ರಾಪ್ತಿಯೇ ಮೋಕ್ಷಮಾರ್ಗವೆಂದೂ ತಿಳಿಸಿದರು. - 'ಸದ್ದೃಷ್ಟಿಜ್ಞಾನವೃತ್ತಾನಿ ಧರ್ಮಂ ಧರ್ಮೇಶ್ವರಾ ವಿದುಃ' 'ಸಮ್ಯಗ್ದರ್ಶನಜ್ಞಾನ ಚಾರಿತ್ರಾಣಿ ಮೋಕ್ಷಮಾರ್ಗಃ' ಎಂದು ಮುಂತಾಗಿ.

ಹೀಗೆ ಇವುಗಳ ಪ್ರಾಪ್ತಿಯೇ ಮಾನವ ಜನ್ಮದ ಗುರಿ ಎಂದೂ, ಈ



ರತ್ನತ್ರಯಗಳ ಪ್ರಾಪ್ತಿಯ ಅಭಾವ ಮತ್ತು ಅಸಾಧ್ಯವಾದರೆ "ಭವಂತಿ ಭವ ಪದ್ದತಿಯಾಗಿ" ಮತ್ತೆ ಜನ್ಮ ಜರಾ ಮರಣಗಳಲ್ಲಿ ತೊಳಲಬೇಕಾಗುತ್ತದೆಂದೂ, ಆದುದರಿಂದ ಅವುಗಳ ಪ್ರಾಪ್ತಿ ಮಾಡಿಕೊಂಡು ಜನ್ಮ ಸಾರ್ಥಕ ಪಡಿಸಿಕೊಳ್ಳಿರೆಂದೂ ಜಗಜ್ಜನಕ್ಕೆ ತಿಳಿಸಿದ್ದಾರೆ. ಅಂತಹ ಉಪಕಾರ ಮಾಡಿದ ದೋಷರಹಿತರೂ ಸರ್ವಜ್ಞರೂ, ಹಿತೋಪದೇಶಿಗಳೂ, ವೀತರಾಗ ವಿಜ್ಞಾನಿಗಳೂ ಆದ ಆ ಪರಮಾತ್ಮಸ್ವರೂಪರಾದ ತೀರ್ಥಂಕರನ್ನೇ ನಾವು ಆದರ್ಶವಾಗಿಟ್ಟುಕೊಂಡು ಅವರ ಪೂಜಾ, ಸ್ತುತಿ, ವಂದನೆಗಳನ್ನು ಮಾಡುತ್ತಾ ಬಂದಿದ್ದೇವೆ. ಅವರು ರತ್ನತ್ರಯ ಪ್ರಾಪ್ತಿಗಾಗಿ ಅನೇಕ ಕ್ರಮಗಳನ್ನೂ, ಮಾರ್ಗಗಳನ್ನೂ ಬಹು ಸುಲಭವಾಗಿ ತಿಳಿಸಿದ್ದಾರೆ. ತತ್ತ್ವಾರ್ಥದಲ್ಲಿ, ಧರ್ಮದಲ್ಲಿ, ದೇವ, ಗುರು, ಶಾಸ್ತ್ರದಲ್ಲಿ ಹಾಗೂ ತನ್ನ ಜ್ಞಾನ ಚೇತನ ಶಕ್ತಿರೂಪೀ ಆತ್ಮನಲ್ಲಿ ದೃಢವಿಶ್ವಾಸ, ಶ್ರದ್ಧೆ ಇಡುವುದೇ ಸಮ್ಯಗ್ದರ್ಶನವೆಂದೂ ಅವುಗಳ ಸ್ವರೂಪವನ್ನು ತಿಳಿದು ಜಡ ಚೇತನಗಳ ಭಿನ್ನತೆಯನ್ನರಿತು ಕೊಳ್ಳುವುದೇ ಸಮ್ಯಗ್ ಜ್ಞಾನವೆಂದೂ, ಅವುಗಳ ದರ್ಶನ ಮತ್ತು ಜ್ಞಾನಗಳ ಬಲದಿಂದ ಮಾಡುವ ಕ್ರಿಯಾಸಾಧನೆಗಳೇ ಸಮ್ಯಕ್‌ಚಾರಿತ್ರವೆಂದೂ ಸಾರಿದರು. ಇವುಗಳೆಲ್ಲಕ್ಕೂ ಸತ್‌ಕ್ರಿಯೆ ಮುಖ್ಯ. ಕ್ರಿಯಾಲೋಪವಾದರೆ, ಸಾಧನೆಯಸಿದ್ಧಿಯಾಗದು. ಅದಕ್ಕಾಗಿ ಜೈನಧರ್ಮವು ಆಚಾರ ಪ್ರಧಾನವಾದುದು. ಈ ಆಚಾರವು ಎರಡು ಬಗೆಯಲ್ಲಿದೆ. ಯತಿ ಆಚಾರ ಮತ್ತು ಶ್ರಾವಕಾಚಾರ. ಯತಿಗಳು ಆಚರಿಸುವ ಕ್ರಿಯೆಯು ಶುದ್ಧ ನಿಶ್ಚಯ ಸ್ವಭಾವ ಪೂರ್ಣವೂ ಆಗಿದೆ. ಶ್ರಾವಕರ ಆಚಾರವು ಆ ಮುಂದಿನ ಯತಿ ಆಚಾರಕ್ಕೆ ಪೋಷಕವೂ ವ್ಯವಹಾರಭರಿತವೂ ಅಣುರೂಪವೂ ಆಗಿದೆ. ತ್ಯಾಗಿಗಳಿಗೂ ಗೃಹಸ್ಥರಿಗೂ ಸಮನಾಗಿ ನಿಯಮಿತವಾದ ಕೆಲವು ಕ್ರಿಯೆಗಳುಂಟು.

ಯಾರಾಗಲೀ ಎಷ್ಟೇ ಎಚ್ಚರಿಕೆಯಿಂದ ಇದ್ದರೂ ಅನೇಕ ಪ್ರಮಾದಗಳೂ, ಕ್ರಿಯೆಯಲ್ಲಿ ಲೋಪ ದೋಷಗಳೂ ಆಗಿ ಹೋಗುತ್ತವೆ. ಏಕೆಂದರೆ ಕಲುಷಿತ ವಾತಾವರಣವಾದ ಈ ಜಗಜ್ಜಂಜಡದಲ್ಲಿ ಬಾಳು ಸಾಗಿಸುವಾಗ ರಾಗ-ದ್ವೇಷ ಕಷಾಯಗಳಿಗೆ ಒಳಗಾಗಿ, ಬೇಕು ಬೇಡಗಳುಂಟಾಗಿ ಕ್ರಿಯಾಲೋಪವಾಗಿ ಬಿಡುತ್ತದೆ. ಹೀಗೆ ಉಂಟಾದ ಕ್ರಿಯಾಲೋಪದೋಷದ ಮಲಿನವನ್ನು ಅಂದಂದೇ ಆಗಾಗ್ಗೆ ತೊಳೆದುಕೊಳ್ಳದಿದ್ದರೆ ಅದು ಭವಂತಿ ಭವ ಪದ್ಧತಿಃ ಅಥವಾ ನೀಚಗತಿಗಳಲ್ಲಿ ದುಃಖಾದಿಗಳನ್ನೂ ಅಥವಾ ಇದೇ ಜನ್ಮದಲ್ಲಿ ದುಃಖದ ಅನುಭವವನ್ನೂ ಪಡೆಯಬೇಕಾಗುತ್ತದೆ. ಹೀಗೆ ಜೀವನದಲ್ಲುಂಟಾದ ಎಡರು ತೊಡರುಗಳು ಅಪ್ಪಿ ತಪ್ಪಿ ಮಾಡಿದ ಲೋಪದೋಷಗಳನ್ನು ತಿದ್ದಿ ಪರಿಶುದ್ಧನಾಗಲು ಆಚರಿಸುವ

ಕ್ರಿಯೆಗಳು ಹಲವು ಉಂಟು. ಅವುಗಳಲ್ಲಿ ಷಡಾವಶ್ಯಕ ಕ್ರಿಯೆಗಳೆಂಬ ಆರು ನಿಯಮಗಳು ಮುಖ್ಯವಾದುವುಗಳು. ಅವುಗಳೆಂದರೆ -

೧. **ಸಮತಾ** – ಎಲ್ಲ ಪ್ರಾಣಿ ಹಾಗೂ ಜನತೆಯಲ್ಲಿ ಸಮ ಭಾವದ ದಯೆಯನ್ನಿಡುವುದು.

೨. **ವಂದನಾ** – ಸದ್ದೇವ ಶಾಸ್ತ್ರ ಗುರುಗಳಿಗೆ ನಮಸ್ಕರಿಸುವುದು.

೩. **ಸ್ತವನ** – ಪಂಚಪರಮೇಷ್ಠಿಗಳ ಸ್ತೋತ್ರ ಜಪಗಳನ್ನು ಮಾಡುವುದು.

೪. **ಪ್ರತಿಕ್ರಮಣ** – ತನ್ನಿಂದ ಉಂಟಾದ ದೋಷಗಳನ್ನು ನಿವಾರಣೆ ಮಾಡಿಕೊಳ್ಳುವುದು.

೫. **ಸ್ವಾಧ್ಯಾಯ** – ಶಾಸ್ತ್ರಗಳನ್ನು ಓದುವುದು.

೬. **ಕಾಯೋತ್ಸರ್ಗ** – ನಿಂತು ಧ್ಯಾನಮಾಡುವುದು. (ಶರೀರದ ಬಗ್ಗೆ ಮಮತ್ವವನ್ನು ಕ್ರಮವಾಗಿ ಕಡಿಮೆ ಮಾಡುವುದು.)

ಹೀಗೆ ಈ ಆರು ಕ್ರಿಯೆಗಳಲ್ಲಿ **ಪ್ರತಿಕ್ರಮಣ ಕ್ರಿಯೆಯು ಪ್ರಧಾನವಾದುದು.** ಈ ಕ್ರಿಯೆಯು ಎರಡು ಶ್ರೇಣಿಗಳಲ್ಲಿ ವಿಭಾಜಿತವಾಗಿದೆ. ಮೊದಲನೆಯ ಶ್ರೇಣಿ ಮುನೀಶ್ವರಿಗೂ, ಎರಡನೆಯದು ಶ್ರಾವಕರಿಗೂ ವಿಧಿತವಾಗಿದೆ.

ದಿಗಂಬರ ಜೈನ ಆಮ್ನಾಯದಲ್ಲಿ ಈ ಪ್ರತಿಕ್ರಮಣ ಕ್ರಿಯಾಪದ್ಧತಿಯು ಮುನಿಗಳಲ್ಲೇ ಹೆಚ್ಚು ಆಚರಣೆಯಲ್ಲಿದೆ. ಶ್ರಾವಕರಲ್ಲಿ ವಿರಳ. ಆದರಲ್ಲೂ ದಕ್ಷಿಣ ಭಾರತದ ಒಳನಾಡಿಲ್ಲಿ ಇದರ ಆಚರಣೆ ಇಲ್ಲವೆಂದೇ ಹೇಳಬಹುದು. ಅಂತೂ ವಿರಳ. ಈ ಪ್ರತಿಕ್ರಮಣ ಕ್ರಿಯಾಚರಣೆಯು ಯತಿ ಮತ್ತು ಗೃಹಸ್ಥರಿಬ್ಬರಿಗೂ ನಿಯಮಿತವಾಗಿದೆ. ಮಾಡಿದ ದೋಷ ನಿವಾರಣೆಯನ್ನು ಎಲ್ಲರೂ ಮಾಡಿಕೊಳ್ಳುವ ಅವಶ್ಯಕತೆ ಇದೆ. ರೋಗ ಬರುವುದು ಸಹಜ. ಅದನ್ನು ತರತಮ ಭಾವದಿಂದ ವಾಸಿ (ನಿವಾರಣೆ) ಮಾಡಿಕೊಳ್ಳುವುದೂ ಅವಶ್ಯಕ ಹೇಗೊ ಹಾಗೆ. ಆದರಲ್ಲೂ ಮುನಿಗಳಿಗಿಂತ ಪೂರ್ಣ ವ್ಯವಹಾರದಲ್ಲಿ ಮಗ್ನನಾಗಿ ಹೊಟ್ಟೆ ಬಟ್ಟೆಗಳಿಗಾಗಿ ರಾಗ-ದ್ವೇಷಗಳಿಗೆ ಒಳಗಾಗಿ ಬಾಳುವ ಶ್ರಾವಕನಿಗೆ ಪ್ರಮಾದಜನ್ಯ ದೋಷಗಳು ಉಂಟಾಗುವುದೇ ಹೆಚ್ಚು. ಜ್ಞಾನ ಧ್ಯಾನ ತಪೋನಿರತರಾದ ಮುನಿಗಳಿಗೆ ಕಡಿಮೆ. ಆದುದರಿಂದ ಶ್ರಾವಕರೇ ಹೆಚ್ಚಾಗಿ ಈ ನಿಯಮಾಚರಣೆಯನ್ನು ಮಾಡುವ ಅವಶ್ಯಕವಿದೆ.



ಮುನಿಗಳು (ಯತಿಗಳು, ತ್ಯಾಗಿಗಳು) ತ್ರಿಕಾಲವೂ ಸಾಮಾಯಿಕ ಹಾಗೂ ಪ್ರತಿಕ್ರಮಣವನ್ನು ಮಾಡುತ್ತಾರೆ. ಪ್ರತಿಮಾಧಾರಿಗಳಾದ ನೈಷ್ಠಿಕರೂ (ದಾರ್ಶನಿಕ, ವ್ರತಿಕ ಮುಂತಾದ ಹನ್ನೊಂದು ನೆಲೆಗಳ ಧಾರಿಗಳು) ಮತ್ತು ಪಾಕ್ಷಿಕ ಶ್ರಾವಕರೂ (ಅಷ್ಟ ಮೂಲಗುಣಧಾರಿ, ಸಪ್ತವ್ಯಸನತ್ಯಾಗಿ, ಷಟ್‌ಕ್ರಿಯಾನಿರತ) ಕೂಡ ತನ್ನ ಶಕ್ತಿಗೆ ಅನುಸಾರವಾಗಿ ಪ್ರತಿಕ್ರಮಣವನ್ನು ಮಾಡಿಕೊಳ್ಳಬೇಕು. ಈ ಅಭ್ಯಾಸವು ಕಾಲಾನುಕ್ರಮವಾಗಿ ಸಂಸಾರ ಶರೀರ ಭೋಗಗಳಲ್ಲಿ ವಿರಕ್ತಿಯನ್ನು ಹುಟ್ಟಿಸಿ, ಮತ್ತೆ ಮತ್ತೆ ಲೋಪವನ್ನು ಎಸಗದಂತೆ ಮಾಡಿ ಕ್ರಮೇಣ ಶಿವಸುಖದ ಸನ್ನಿಧಿಗೆ ಸಾಗಿಸಲು ಸಾಧನವಾದ ಯತಿಪದವಿಗೆ ಕಾರಣವಾಗುತ್ತದೆ.

ಪ್ರತಿಕ್ರಮಣ ಕ್ರಿಯಾಚರಣೆಯ ವಿಷಯವನ್ನು ಬೋಧಿಸುವ ಗ್ರಂಥಗಳು ಬಹುಶಃ ಸಂಸ್ಕೃತ, ಪ್ರಾಕೃತಗಳಲ್ಲಿದ್ದು ಅವುಗಳ ಪ್ರಚಾರವಿಲ್ಲದೆ ಸಾಮಾನ್ಯ ಗೃಹಸ್ಥರಿಗೆ ಎಟಕದಂತಾಗಿದೆ. ಕಾಲದೋಷದಿಂದ ಧರ್ಮ ಪ್ರಚಾರ ಕಡಿಮೆಯಾಗಿ ಆದರಲ್ಲೂ ಇಂತಹ ಆಚಾರದ ನಿಯಮ ಬೋಧೆಯನ್ನು ಹೇಳುವ ಕೇಳುವ ಸ್ಮರಣೆ ತಾಳ್ಮೆಗಳು ಜನಕ್ಕೂ ಇಲ್ಲವಾಗಿದೆಯಾದ್ದರಿಂದ ಇಂಥ ಕ್ರಿಯಾಚರಣೆಗಳು ಲೋಪವಾಗಿ ಹೋಗಿವೆ.

ಇಂತಹ ಮಹತ್ವಪೂರ್ಣವಾದ ಈ ಪ್ರತಿಕ್ರಮಣದ ಬಗ್ಗೆ ತಿಳಿಯುವುದು ಅವಶ್ಯವಿದೆ.

ಪ್ರತಿಕ್ರಮಣ, ಆಲೋಚನಾ, ಪ್ರತ್ಯಾಖ್ಯಾನಗಳ ಸೇರಿದ ಕ್ರಿಯಾಚರಣೆಯ ಒಟ್ಟು ವ್ಯಾಖ್ಯೆ ಹೀಗಿದೆ. -

ಹಿಂದಾಗಲೀ, ಇಂದಾಗಲೀ, ತಿಳಿದಾಗಲೀ ಅಥವಾ ತಿಳಿಯದೆಯಾಗಲೀ ಪ್ರಾಯಃ ಅನಿವಾರ್ಯದಿಂದ ನಿತ್ಯ ಜೀವನದಲ್ಲಿ ಸಾಗುವಾಗ ಅಜ್ಞಾನದಿಂದ ಪ್ರಮಾದವಶಾತ್ ಮಾಡಿರುವಂತಹ ಲೋಪ ದೋಷಗಳನ್ನು ನಿವಾರಣೆ ಮಾಡಿಕೊಳ್ಳಲು ಪಶ್ಚಾತ್ತಾಪಪಟ್ಟು, ಪ್ರಾಯಶ್ಚಿತ್ತಾದಿಗಳಿಂದ ತಿದ್ದಿಕೊಂಡು ನಿವಾರಿಸಿಕೊಳ್ಳುವ ವಿಧಿ, ವಿಧಾನ, ಭಾವನೆ, ಚಿಂತನೆಗಳ ಆಚರಣೆಯ ಕ್ರಿಯಾಪದ್ಧತಿಗಳಿಗೆ ಪ್ರತಿಕ್ರಮಣವೆನ್ನುತ್ತಾರೆ. ಇಲ್ಲಿ ಆಲೋಚನಾ ಮತ್ತು ಪ್ರತ್ಯಾಖ್ಯಾನಗಳು ಗೌಣವಾಗಿ ಸೇರಿವೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಉಂಟಾದ ರೋಗವನ್ನು ಗುಣ ಮಾಡಿಕೊಳ್ಳಲು ತಕ್ಕ ಔಷಧಿಯಂತೆ, ಕೊಳೆಯನ್ನು ತೊಳೆಯಲು ಉಪಯೋಗಿಸುವ ಸಾಬೂನು ಸೀಗೇಕಾಯಿಯಂತೆ.

ತಪಃಸಾಧನೆಯಲ್ಲಿ ಅಂತರಂಗ ಮತ್ತು ಬಹಿರಂಗ ಎಂದು ಎರಡು ವಿಧ

ಉಂಟು. ಅಂತರಂಗ ತಪದಲ್ಲಿ ಪ್ರಾಯಶ್ಚಿತ್ತವೆಂಬುದೂ ಒಂದು ಅಂಗ.

ಪ್ರಾಯಶ್ಚಿತ್ತವೆಂದರೆ ಪ್ರಮಾದ ಅಥವಾ ಅಜ್ಞಾನದಿಂದ ಉಂಟಾದ ಕ್ರಿಯಾಲೋಪದ ವಿಶುದ್ಧಿಯನ್ನು ಮಾಡಿಕೊಳ್ಳಲು ಪಶ್ಚಾತ್ತಾಪಾದಿ ಕ್ರಿಯೆಗಳೆಂದರ್ಥ. ಈ ಪ್ರಾಯಶ್ಚಿತ್ತದಲ್ಲಿ ಒಂಬತ್ತು ವಿಧಗಳುಂಟು. ತತ್ತ್ವಾರ್ಥ ಸೂತ್ರದಲ್ಲಿ ಹೇಳಿರುವಂತೆ "**ಆಲೋಚನಾ ಪ್ರತಿಕ್ರಮಣ ತದುಭಯ ವಿವೇಕ ವ್ಯುತ್ಸರ್ಗ ತಪಶ್ಛೇದ ಪರಿಹಾರೋಪ ಸ್ಥಾಪನಾಃ ॥**" ಅಂದರೆ -

೧) **ಆಲೋಚನಾ** - ಪ್ರಮಾದವಶದಿಂದ ಉಂಟಾದ ದೋಷಗಳನ್ನು ಗುರುಸನ್ನಿಧಿಯಲ್ಲಿ ನಿಷ್ಕಪಟದಿಂದ ನಿವೇದನೆ ಮಾಡಿಕೊಳ್ಳುವುದು.

೨) **ಪ್ರತಿಕ್ರಮಣ** - ತಾನು ಮಾಡಿದ ಅಪರಾಧಗಳು ದೂರವಾಗಲೆಂದು ಪ್ರಾರ್ಥನೆ, ಆತ್ಮಚಿಂತನೆ ಮಾಡಿ, ಕ್ಷಮಾಯಾಚನೆ ಮಾಡುವುದು. ಹಾಗೂ ತನ್ನ ಅಜ್ಞಾನ, ಅಜಾಗರೂಕತೆಗೆ ಪಶ್ಚಾತ್ತಾಪಪೂರ್ವಕ ಪ್ರಾಯಶ್ಚಿತ್ತಗಳನ್ನು ಮಾಡಿಕೊಳ್ಳುವುದು.

೩) **ತದುಭಯ** - ತನ್ನಿಂದ ವಿಶೇಷ ದೋಷಗಳಾದ ಸಮಯದಲ್ಲಿ ಆಲೋಚನಾ ಪ್ರತಿಕ್ರಮಣಗಳೆರಡನ್ನೂ ಮಾಡುವುದು.

೪) **ವಿವೇಕ** - ಒಂದು ನಿಯಮಿತ ಸಮಯದವರೆಗೆ ಆಹಾರ ಜಲಾದಿಗಳನ್ನು ತ್ಯಾಗ ಮಾಡುವುದು.

೫) **ಉತ್ಸರ್ಗ** - ಕಾಯೋತ್ಸರ್ಗದಿಂದ ಜಪ ಮಾಡುವುದು. (ಜಲ, ಮಲಾದಿ ವಿಸರ್ಜನೆಯ ಸಮಯದಲ್ಲಿ ನೋಡಿ ಮಾಡುವುದು.)

೬) **ತಪ** - ಉಪವಾಸಾದಿಗಳನ್ನು ಮಾಡುವುದು.

೭) **ಛೇದ** - ದಿನ, ವಾರ, ತಿಂಗಳು ಮೊದಲಾದ ಅವಧಿಯಿಂದ ದೀಕ್ಷೆಯನ್ನು ಬಿಡುವುದು.

೮) **ಪರಿಹಾರ** - ಒಂದು ಅವಧಿಯವರೆಗೆ ಸಂಘದಿಂದ ಬೇರೆ ಇರುವುದು.

೯) **ಉಪಸ್ಥಾಪನಾ** - ಸಂಪೂರ್ಣ ದೀಕ್ಷೆಯನ್ನು ವಿಸರ್ಜಿಸಿ ಪುನರ್ ದೀಕ್ಷೆಯನ್ನು ತೆಗೆದುಕೊಳ್ಳುವುದು.

ಹೀಗೆ ಈ ಒಂಬತ್ತು ವಿಧವಾದ ಪ್ರಾಯಶ್ಚಿತ್ತಗಳು ಮುನಿಗಳಿಗೆ ಮುಖ್ಯವಾದರೂ ಗೃಹಸ್ಥರಿಗೂ ಅಣುವ್ರತ, ಗುಣವ್ರತ, ಶಿಕ್ಷಾ ವ್ರತಗಳೆಂಬ ಹನ್ನೆರಡು



ವ್ರತಗಳಲ್ಲುಂಟಾಗುವ ದೋಷನಿವಾರಣೆಗೆ ಪ್ರಾಯಶ್ಚಿತ್ತಗಳುಂಟು, ಇವುಗಳಿಂದ ತನ್ನ ಪ್ರಮಾದಜನ್ಯ ಅತಿಚಾರಗಳನ್ನು ನಿವಾರಿಸಿಕೊಳ್ಳಬಹುದು.

ಪ್ರಮಾದವೆಂದರೆ ಕ್ರೋಧ, ಮಾನ, ಮಾಯಾ, ಲೋಭಗಳೆಂಬ ಕಷಾಯಗಳ ದುಷ್ಪರಿಣಾಮದಿಂದ ಮನ, ಮಾತು, ಕೆಲಸಗಳು ಕಲುಷಿತವಾಗುತ್ತವೆ. ಆಗ ಚಾರಿತ್ರ ಪಾಲನೆಗೆ ನಿರುತ್ಸಾಹ ಅಥವಾ ಉದಾಸೀನತೆ ಉಂಟಾಗುತ್ತದೆ. ಅದರಿಂದ ಚಾರಿತ್ರಲೋಪವಾಗಿ ದುಃಸ್ಥಿತಿಗೆ ಗುರಿಯಾಗಿ ಇಹಲೋಕದಲ್ಲಿ ಮಾನ ಮರ್ಯಾದೆಯನ್ನು ಕಳೆದುಕೊಂಡು ಪರಲೋಕದಲ್ಲಿ ದುಃಖಭಾಜನನಾಗ ಬೇಕಾಗುತ್ತದೆ. ಇಂತಹ ಪರಿಸ್ಥಿತಿಗೆ ತಳ್ಳುವ ಸನ್ನಿವೇಶ ಅಥವಾ ಸಂದರ್ಭದ ಕಾರ್ಯಗಳಿಗೆ ಪ್ರಮಾದವೆನ್ನುತ್ತಾರೆ. ಇದನ್ನು ಅಜ್ಞಾನದ ಆವರಣ ಅಥವಾ ನೈಜತೆಯ ಮರವನ್ನು ಉಂಟುಮಾಡುವ ಸಂದರ್ಭಗಳೆನ್ನಬಹುದು.

ಈ ಪ್ರಮಾದದಲ್ಲಿ ಹದಿನೈದು ಭೇದಗಳುಂಟು. ಸ್ತ್ರೀಕಥೆ, ರಾಷ್ಟ್ರಕಥೆ, ಭೋಜನ ಕಥೆ, ರಾಜಕಥೆಗಳೆಂಬ 4 ವಿಕಥೆಗಳೂ, ಕ್ರೋಧ, ಮಾನ, ಮಾಯಾ, ಲೋಭಗಳೆಂಬ 4 ಕಷಾಯಗಳೂ, ಕಣ್ಣು, ಕಿವಿ, ನಾಲಿಗೆ, ಮೂಗು, ಚರ್ಮ ಎಂಬ 5 ಇಂದ್ರಿಯ ವಿಷಯಗಳೂ, ಸ್ನೇಹ, ನಿದ್ರೆ ಎಂಬ ಈ ಎರಡು ಸೇರಿ 15 ವಿಧವಾದ ಸನ್ನಿವೇಶಗಳಲ್ಲಿ ಮನ, ವಚನ, ಕಾಯಗಳು ಕಲುಷಿತವಾಗಿ ಪ್ರಮಾದವುಂಟಾಗುತ್ತದೆ. ಇವುಗಳ ನಿವಾರಣೆಗೆ ಪ್ರತಿಕ್ರಮಣವೇ ಔಷಧಿ.

ಈ ಪ್ರತಿಕ್ರಮಣದ ಭೇದಗಳ ಬಗ್ಗೆ ಆಚಾರ್ಯರ ಹೇಳಿಕೆಯು ಹೀಗಿದೆ -

"ಪಡಿಕ್ಕಮಣಂ ಪಡಿಸರಣಂ ಪರಿಹಾರೋ ಧಾರಣಾಣಿಯತ್ತೀಯ ।
ಣಿಂದಾಗರಹಾ ಸೋ ಹೀ ಅಟ್ಠ ವಿಹೋ ಅಮಯಕುಂಭೋದು ॥"

ಅಂದರೆ - ಪ್ರತಿಕ್ರಮಣ, ಪ್ರತಿಶರಣ, ಪರಿಹಾರ, ಧಾರಣಾ, ನಿವೃತ್ತಿ, ನಿಂದಾ, ಗರ್ಹಾ ಮತ್ತು ಶುದ್ಧಿ ಎಂಬ ಎಂಟೂ ಅಮೃತ ಕುಂಭಗಳಿದ್ದಂತೆ.

೧. ಪೂರ್ವಕೃತ ದೋಷಗಳನ್ನು ನಿವಾರಣೆ ಮಾಡುವ ಕ್ರಿಯೆ, ಚಿಂತನೆಗೆ ಪ್ರತಿಕ್ರಮಣವೆಂದೂ,

೨. ಸಮ್ಯಕ್ತ್ವಾದಿ ಗುಣಗಳಲ್ಲಿ ಪ್ರವೃತ್ತನಾಗುವುದು ಪ್ರತಿಶರಣವೆಂದೂ.

೩. ಮಿಥ್ಯಾತ್ವ, ರಾಗ - ದ್ವೇಷಾದಿಗಳಿಂದ ನಿವೃತ್ತನಾಗುವುದು ಪ್ರತಿಹರಣವೆಂದೂ.

೪. ದೋಷನಿವಾರಣೆಗೆ ಒಂದು ಮಾರ್ಗವನ್ನು ಹುಡುಕುವುದು ಪರಿಹಾರವೆಂದೂ.

೫. ಪಂಚನಮಸ್ಕಾರ ಮಂತ್ರಗಳಿಂದ ಚಿತ್ತಸ್ಥಿರತೆಯನ್ನು ಧರಿಸುವುದು ಧಾರಣೆ ಎಂದೂ.

೬. ಪಂಚೇಂದ್ರಿಯಗಳ ಬಾಹ್ಯ ವಿಷಯ ಕಷಾಯಗಳನ್ನು ತಡೆದು ಮನೋವೃತ್ತಿಯಿಂದ ಮಾಡಿದ ದೋಷಗಳನ್ನು ನೆನೆದು ಆತ್ಮನಿಂದೆ ಮಾಡಿಕೊಳ್ಳುವುದು ನಿಂದಾ ಎಂದೂ.

೭. ಗುರುಗಳ ಹತ್ತಿರ ತನ್ನ ದೋಷಗಳನ್ನು ಪ್ರಕಟಿಸಿ ಮಾಡಿದ ತಪ್ಪುಗಳನ್ನು ಒಪ್ಪಿಕೊಳ್ಳುವುದು ಗರ್ಹಾ ಎಂದೂ.

೮. ದೋಷಗಳಿಗೆ ತಕ್ಕ ಪಾಯಶ್ಚಿತ್ತಾದಿಗಳನ್ನು ತೆಗೆದುಕೊಂಡು ಆತ್ಮಶುದ್ಧಿ ಮಾಡಿಕೊಳ್ಳುವುದು ಶುದ್ಧಿ ಎಂದೂ ಹೇಳಿದ್ದಾರೆ.

ಹೀಗೆ ಮೇಲೆ ಹೇಳಿದ ಸಮಸ್ತ ಸಮ್ಯಕ್ ಕ್ರಿಯೆಗಳು ಪ್ರಮಾದವಶಾತ್ ಮಾಡಿದ ದೋಷಗಳ ನಿವಾರಣೆಗೆ ಅಮೃತ ಸಮಾನವಾದುವುಗಳು. ಈ ಕ್ರಿಯೆಗಳನ್ನು ಆತ್ಮಶುದ್ಧಿಯ ಕಡೆಗೆ ಲಕ್ಷ್ಯವಿಟ್ಟ ಮಾಡುವುದಾದರೆ ಅದು ಮೋಕ್ಷಮಾರ್ಗಕ್ಕೆ ಸಾಧನವೂ ಆಗುತ್ತದೆ. ಶುಭೋಪಯೋಗರೂಪ ಭಾವನೆಯಿಂದ ಈ ಕ್ರಿಯಾಚರಣೆಯನ್ನು ನಿರ್ವಹಿಸುವುದಾದರೆ ಶ್ರೇಷ್ಠತರ ದೇವಗತಿಗೂ ಕಾರಣವಾಗುತ್ತದೆ.

ಯಾರು ವ್ಯವಹಾರನಿರತರಾಗಿದ್ದರೂ ಕಷಾಯ ವಿಕಾರಾದಿಗಳಿಂದ ದೂರವಾಗಲೋಸುಗ ಪ್ರತಿಕ್ರಮಣಾದಿ ಕ್ರಿಯೆಗಳನ್ನು ಮಾಡುತ್ತಾರೋ ಅವರು ಮೋಕ್ಷಮಾರ್ಗದಲ್ಲಿ ಸಾಗುತ್ತಿದ್ದಾರೆಂದು ತಿಳಿಯಬಹುದು.

ವ್ಯವಹಾರವೂ ಕೂಡ ನಿಶ್ಚಯಕ್ಕೆ ಸಹಕಾರವಾಗಿದ್ದರೆ ಅದು ಸದ್ ವ್ಯವಹಾರ. ಹಾಗಲ್ಲದೆ ವ್ಯವಹಾರವೇ ಮುಖ್ಯವಾಗಿ ನಿಶ್ಚಯದ ಕಡೆ ಅಲಕ್ಷ್ಯವಾಗುವುದಾದರೆ ಅದು ದುರ್ವ್ಯವಹಾರವಾಗುತ್ತದೆ. ಈ ಸಾಧನೆಗೆ ಗೃಹಸ್ಥನಾಗಿದ್ದರೂ ಪ್ರತಿಕ್ರಮಣಕ್ರಿಯೆಯ ಆಚರಣೆಯಿಂದ ಆತನ ವ್ಯವಹಾರಶುದ್ಧವಾಗುತ್ತದೆ. ಏಕೆಂದರೆ, ಮಾಡಿದ ಲೋಪವನ್ನು ಸ್ಮರಿಸುವಂತೆಯೂ, ಅವುಗಳನ್ನು ನಿವಾರಿಸಿಕೊಳ್ಳುವಂತೆಯೂ, ಮತ್ತೆ ಅಲೋಪದೋಷಗಳನ್ನು ಮಾಡದಂತೆಯೂ ಈ ಪ್ರತಿಕ್ರಮಣ ಕ್ರಿಯಾಚರಣೆಯು ತಡೆಯುತ್ತದೆ.



ಪ್ರತಿಕ್ರಮಣವು ಭಾವಪ್ರಧಾನವೂ ಮತ್ತು ದ್ರವ್ಯ ಪ್ರಧಾನವೂ ಆಗಿದೆ. ಏಕೆಂದರೆ ಭಾವವಿಲ್ಲದ ದ್ರವ್ಯ ನಿಷ್ಫಲ. ಹಾಗೂ ದ್ರವ್ಯವಿಲ್ಲ ಭಾವ ನಿಲ್ಲುವುದಿಲ್ಲ. ಹೀಗೆ ಇದು ನಿಮಿತ್ತ ನೈಮಿತ್ತಿಕ ಸಂಬಂಧವನ್ನು ಹೊಂದಿದೆ. ದ್ರವ್ಯಪ್ರತಿ ಕ್ರಮಣವು ಭಾವಪ್ರತಿಕ್ರಮಣಕ್ಕೆ ಸಾಧನವೂ, ಭಾವಪ್ರತಿಕ್ರಮಣವು ಸಾಧ್ಯವೂ ಆಗಿದೆ. ಹೀಗೆ ಸಾಧ್ಯ ಸಾಧಕಗಳು ಒಂದಕ್ಕೊಂದು ಪೂರಕಗಳಾಗಿವೆ, ಭಾವ ಸಹಿತವಾದ ಕ್ರಿಯಾಚರಣೆಗೆ ಮಹತ್ವ ಹೆಚ್ಚು.

**ಭಾವಪ್ರತಿಕ್ರಮಣ** - ಪರಾವಲಂಬನೆ ಮತ್ತು ಪರದ್ರವ್ಯಗಳ ನಿಮಿತ್ತದಿಂದ ತನ್ನಲ್ಲಿ ಯಾವ ರಾಗ-ದ್ವೇಷಗಳುಂಟಾಗುತ್ತವೆಯೋ ಅಂದರೆ ಇಷ್ಟವಿಯೋಗ, ಅನಿಷ್ಟ ಸಂಯೋಗಗಳಿಂದ ಕಲುಷಿತವಾದ ಭಾವನೆಯು ಒಳಿತಲ್ಲವೆಂದು ತಿಳಿದು ವಿಪರೀತ ಮನೋವ್ಯಾಪಾರವನ್ನು ನಿಗ್ರಹಿಸುವ ಕ್ರಿಯೆಗೆ ಭಾವಪ್ರತಿಕ್ರಮಣ ವೆಂದು ಹೆಸರು. ಅದು ಚಿಂತನೆ, ಧ್ಯಾನ, ಅನುಪ್ರೇಕ್ಷೆ, ಜಪ ಮುಂತಾದುವುಗಳ ಅಭ್ಯಾಸದಿಂದ ಬರುತ್ತದೆ.

**ದ್ರವ್ಯಪ್ರತಿಕ್ರಮಣ** - ಹಿಂದಾಗಲೀ ಈಗಾಗಲೀ ಅಜ್ಞಾನದಿಂದಾಗಲೀ ಪ್ರಮಾದದಿಂದಾಗಲೀ ಮನ, ವಚನ, ಕಾಯಗಳಿಂದಾಗಲೀ ಕೃತ, ಕಾರಿತ, ಅನುಮೋದನಾದಿಗಳಿಂದಾಗಲೀ ಮಾಡಿದ ಅಕೃತ್ಯಗಳು ತಪ್ಪೆಂದು ತಿಳಿದು ಅರ ಪ್ರಾಯಶ್ಚಿತ್ತಕ್ಕಾಗಿ ವ್ರತ, ನಿಯಮ ಮಾಡಿಕೊಂಡು ಮತ್ತೆ ಅಂತಹ ಲೋಪಗಳು ಒದಗದಂತೆ ಎಚ್ಚರಿಕೆ ವಹಿಸಿ ಬಾಳುವುದೇ ದ್ರವ್ಯಪ್ರತಿಕ್ರಮಣ. ಈ ಪ್ರತಿಕ್ರಮಣದ ಅವಧಿಗಳು ಹೀಗಿವೆ. -

೧. ದೈವಸಿಕ (ಹಗಲು ಸಂಬಂಧಿ)

೨. ರಾತ್ರಿಕ (ರಾತ್ರಿ ಸಂಬಂಧಿ)

೩. ಪಾಕ್ಷಿಕ (ಹದಿನೈದು ದಿನಗಳಿಗೆ ಸಂಬಂಧಿಸಿದ್ದು)

೪. ಚಾತುರ್ಮಾಸಿಕ (4 ತಿಂಗಳಿಗೆ ಸಂಬಂಧಿಸಿದ್ದು)

೫. ಷಣ್ಮಾಸಿಕ (6 ತಿಂಗಳಿಗೆ ಸಂಬಂಧಿಸಿದ್ದು)

೬. ಸಾಂವತ್ಸರಿಕ (ವರ್ಷಕ್ಕೆ ಸಂಬಂಧಿಸಿದ್ದು)

೭. ಈರ್ಯಾಪಥಿಕ ಮತ್ತು

೮. ಔತ್ತಮಾರ್ಥಿಕ ಎಂದು ಮುಖ್ಯವಾಗಿ ಎಂಟು ಬಗೆಗಳುಂಟು. ತ್ಯಾಗಿಗಳು ಇವಷ್ಟನ್ನೂ ನಿಯಮಬದ್ಧವಾಗಿ ಅನುಸರಿಸುತ್ತಾರೆ. ಆದರೆ ಗೃಹಸ್ಥನು ಯಥಾಶಕ್ತಿ ಸಾಧಿಸಬಹುದು.

ಪ್ರತಿಕ್ರಮಣವನ್ನು ಆರಂಭಿಸಿ ಆಚರಿಸುವ ವಿಧಿ –

ದ್ರವ್ಯ ಕ್ಷೇತ್ರ ಕಾಲ ಭಾವಗಳನ್ನು ಅನುಸರಿಸಿ ಮನ ಮತ್ತು ಶರೀರಗಳ ಸ್ಥಿರತೆಯನ್ನು ನೋಡಿಕೊಂಡು ಯಥಾಶಕ್ತಿ ಸಾಧಿಸಬೇಕು. ಪೂರ್ವ ಅಥವಾ ಉತ್ತರಾಭಿ ಮುಖವಾಗಿ ನಿಂತು ಬಾಹ್ಯ ಪರಿಗ್ರಹಗಳ ಮಮತ್ವವನ್ನು ಮರೆಯಬೇಕು. 9 ಸಾರಿ ಪಂಚಪರಮೇಷ್ಠಿಗಳ ಜಪ ಮಾಡಿ ಮನೋ ಮಂದಿರದಲ್ಲಿ ವೀತರಾಗ ದೋಷರಹಿತ ಪರಮಾತ್ಮನನ್ನು ಸ್ಥಾಪಿಸಿಕೊಂಡು ಅದನ್ನೇ ನಿರೀಕ್ಷಿಸುತ್ತ ಸ್ಥಿರಚಿತ್ತನಾಗಬೇಕು. ಕಮ್ಮಿ ಎಂದರೆ 48 ನಿಮಿಷಗಳವರೆಗಾದರೂ ಪೂರ್ವ ಕೃತ ದೋಷಗಳು ಗೊತ್ತಿದ್ದರೆ ಅವುಗಳನ್ನು ಅವಲೋಕಿಸಿ (ಗೊತ್ತಿಲ್ಲದಿದ್ದರೂ ಈ ಗೃಹಸ್ಥನಿಗೆ ದೋಷಗಳು ಬಂದೊದಗಿರುತ್ತವೆ) ಪಶ್ಚಾತ್ತಾಪ ಪಡಬೇಕು. ಮತ್ತೆ ಆ ದೋಷಗಳನ್ನು ಮಾಡಲಾರೆನೆಂಬ ಸ್ಥಿರತೆಗೆ ಬಂದು ಅದರ ಪರಿಹಾರಕ್ಕಾಗಿ ಯಾವುದಾದರೂ ನಿಯಮವನ್ನು ಕೈಗೊಳ್ಳಬೇಕು. (ಮೇಲೆ ಹೇಳಿದ ದೈವಸಿಕದಾದಿ ಅವುಗಳಿಗನುಸರಿಸಿ) ನಂತರ ಹೇ ಭಗವನ್! ನಾನು ಈ 48 ನಿಮಿಷಗಳವರೆಗಾದರೂ ಅಜ್ಞಾನ, ಪ್ರಮಾದ ಮತ್ತು ಬಾಹ್ಯ ಪರಿಗ್ರಹಾದಿ ಮಮತ್ವವನ್ನು ಬಿಟ್ಟು ಆತ್ಮ ಚಿಂತನೆ, ಶುಭಭಾವನೆ ಮತ್ತು ತಮ್ಮ ಗುಣಾನುರಾಗದ ಭಾವಸಮಾಧಿಯಲ್ಲಿ ನಿರತನಾಗಿರುವೆನು. ಈ ಸಂಸಾರದಲ್ಲಿ ಗೃಹವ್ಯವಹಾರದಲ್ಲಿ ಹೊಟ್ಟೆ, ಬಟ್ಟೆ, ಪರಿವಾರ ಪೋಷಣೆಗಾಗಿ ಕಂಡೋ ಕಾಣದೆಯೋ ನನ್ನಿಂದ ಅನೇಕ ಲೋಪ ದೋಷಗಳು ಆಗಿಹೋಗಿವೆ. ಮತ್ತೆ ಅವುಗಳು ಆಗದಂತೆ ಎಚ್ಚರಿಕೆ ವಹಿಸುತ್ತೇನೆ. ಈಗ ಆಗಿರುವ ದೋಷಗಳು ನಿನ್ನ ದಯೆಯಿಂದ ನಿವಾರಣೆಯಾಗಲಿ'' ಎಂದು ಭಾವಿಸಬೇಕು. ಹೀಗೆ ಪ್ರತಿಜ್ಞೆಯನ್ನು ಮಾಡಿ ಕೈಮುಗಿದುಕೊಂಡು ತ್ರಿವಾರ ವಂದನೆಯನ್ನು ಮಾಡಿದ ನಂತರ ಒಂಬತ್ತು ಸಾರಿ ಣಮೋಕಾರವನ್ನು ಹೇಳುತ್ತಾ ಕಾಯೋತ್ಸರ್ಗ ಮಾಡಬೇಕು. ಅಂತ್ಯದಲ್ಲಿ ಹೀಗೆ ಭಾವಿಸಬೇಕು.

ದುಕ್ಖಕ್ಖವೋ ಕಮ್ಮಕ್ಖವೋ ಬೋಹಿಲಾವೋ ಸುಗಇಗಮಣಂ ।
ಸಮಾಹಿಮರಣಂ ಜಿಣಗುಣಸಂಪತ್ತಿ ಹೋಉ ಮಜ್ಝಂ ॥

ಅಂದರೆ "ಹೇ ಭಗವನ್! ನನ್ನ ದುಃಖಗಳು ನಾಶವಾಗಲಿ, ಕರ್ಮಗಳು ನಾಶವಾಗಲಿ, ರತ್ನತ್ರಯ ಪ್ರಾಪ್ತಿಯಾಗಲಿ, ಸುಗತಿ ದೊರಕಲಿ, ಸಮ್ಯಗ್ದರ್ಶನ, ಸಮಾಧಿಮರಣ, ಜಿನಗುಣಸಂಪತ್ತಿಗಳು ಉಂಟಾಗಲಿ, ಇದೇ ನನ್ನ ಪ್ರಾರ್ಥನೆ.''

ಹೀಗೆ ಪ್ರತಿಕ್ರಮಣ, ಆಲೋಚನಾ, ಪ್ರತ್ಯಾಖ್ಯಾನ ಕ್ರಿಯೆಗಳು ದೋಷನಿವಾರಣೋಪಾಯಗಳಾಗಿವೆ. ಇವುಗಳನ್ನು ಶ್ರಾವಕರು ಯಥಾಶಕ್ತಿ ಆಚರಿಸುವ ಪದ್ಧತಿಯನ್ನು ಜಾರಿಯಲ್ಲಿಟ್ಟುಕೊಳ್ಳುವುದು ಉತ್ತಮ.



# 56. ಅಪಧ್ಯಾನದ ಅನಾಹುತ

ಸಕಲ ಜೀವರಾಶಿಗಳಲ್ಲಿ ಮಾನವ ಜನ್ಮವು ಬಹು ಪವಿತ್ರವಾದುದು. ಈ ಮಾನವ ಜನ್ಮದಲ್ಲಿಯೇ ಸಮ್ಯಗ್ ದರ್ಶನ, ಜ್ಞಾನ, ಚಾರಿತ್ರಗಳೆಂಬ ರತ್ನತ್ರಯಗಳನ್ನು ಪಡೆದುಕೊಳ್ಳಲು ಸಾಧ್ಯ. ಈ ರತ್ನತ್ರಯಧಾರಣೆಯಿಂದಲೇ ಸುಖ ಪಡೆದುಕೊಳ್ಳುತ್ತಾನೆ. ಆತ್ಮನಿಗೆ ಪರಾಧೀನತೆಯಿಂದ ದುಃಖವೂ ಸ್ವಾಧೀನತೆಯಿಂದ ಸುಖವೂ ದೊರೆಯುವುದು. ಪರಾಧೀನತೆ ಎಂದರೆ ಆತ್ಮನು ಕರ್ಮದಿಂದ ಆವೃತನಾಗಿ ತನ್ನ ನೈಜತೆಯನ್ನು ಕಳೆದುಕೊಂಡಿರುವುದೂ, ಸ್ವಾಧೀನತೆ ಎಂದರೆ ಆವರಿಸಿರುವ ಕರ್ಮದ ಕಡಿವಾಣವನ್ನು ಕಿತ್ತೊಗೆದು ತನ್ನ ನೈಜತೆಯನ್ನು ಪಡೆದುಕೊಳ್ಳುವುದೂ ಎಂದರ್ಥ. ಆತ್ಮ ಮತ್ತು ಕರ್ಮಗಳ ಪರಿಚಯ ವಾಗುವುದಕ್ಕೂ, ಆತ್ಮನಿಗೆ ಆವರಿಸಿರುವ ಕರ್ಮವನ್ನು ಹೋಗಲಾಡಿಸುವ ರತ್ನತ್ರಯವೆಂಬ ಉಪಾಯವನ್ನು ಬೋಧಿಸುವ ಜಿನಧರ್ಮದ ಆಶ್ರಯವನ್ನು ಪಡೆದುಕೊಳ್ಳುವುದಕ್ಕೂ ಈ ಮಾನವ ಜನ್ಮವೇ ಬೇಕು. ಆದುದರಿಂದ ಮಾನವ ಜನ್ಮವೂ ಮತ್ತು ಜಿನಧರ್ಮವೂ ಬಹು ಶ್ರೇಷ್ಠವಾದುವುಗಳು. ಪಡೆದುಕೊಂಡ ಈ ಜನ್ಮದಿಂದ ಪಾವನವಾದ ಧರ್ಮದ ಆಶ್ರಯ ಹೊಂದದಿದ್ದರೆ ಸಾರ್ಥಕವೇನು? ಅದಕ್ಕಾಗಿ "ಇದೆಲ್ಲವೂ ಅವರವರ ಯೋಗ'' ಎಂದು ಹೇಳುವ ವಾಡಿಕೆಯುಂಟು. ಅಹುದು! ಒಂದು ದೃಷ್ಟಿಯಿಂದ ಈ ಯೋಗದ ನಿಮಿತ್ತದಿಂದಲೇ ಜೀವನದಲ್ಲಿ ಸುಖ ದುಃಖಗಳ ಅನುಭವವಾಗುವುದು. ಇಲ್ಲಿ ಯೋಗ ಎಂದರೆ ಮನಸ್ಸಿನ, ಮಾತಿನ ಮತ್ತು ಶಾರೀರಿಕ ಸಂಬಂಧವಾದ ಕೆಲಸ ಎಂದರ್ಥ. ಅಂದರೆ ಮನೋವಚನ ಕಾಯಗಳ ಕ್ರಿಯೆಯ ಮೂಲಕ ಆತ್ಮಪ್ರದೇಶವು ಬಹು ಸೂಕ್ಷ್ಮವಾಗಿ ಚಲಿಸುವುದು. (ಪರಿಸ್ಪಂದನ) ಇದಕ್ಕೆ ಯೋಗವೆನ್ನುತ್ತಾರೆ. ಈ ಯೋಗದ ಮುಖಾಂತರವೇ ಆತ್ಮನಲ್ಲಿ ಕರ್ಮಾಣುಗಳು ಬಂದು ಮೆತ್ತಿಕೊಳ್ಳುತ್ತವೆ. ಇವುಗಳ ಸಂಯೋಗದಿಂದಾಗಿ ಜೀವನದಲ್ಲಿ ಸುಖ ದುಃಖದ ಅನುಭವವಾಗುವುದು. ಈ ಯೋಗವು ಶುಭವಾಗಿದ್ದರೆ ಸುಖವನ್ನುಂಟುಮಾಡುವ ಪುಣ್ಯಕರ್ಮ ಬಂಧವೂ, ಅಶುಭವಾಗಿದ್ದರೆ ದುಃಖವನ್ನುಂಟುಮಾಡುವ ಪಾಪಕರ್ಮ ಬಂಧವೂ ಆಗುತ್ತದೆ. ಮನ ವಚನ ಮತ್ತು ಕಾಯಗಳಲ್ಲಿ ಮನೋಯೋಗವು ಪ್ರಮುಖವಾದುದು. "ಮನಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ'' ಎಂಬಂತೆ ಪಾಪ ಪುಣ್ಯ ಕರ್ಮಗಳ ಬಂಧನಕ್ಕೂ

ಮತ್ತು ಅವುಗಳಿಂದ ಬಿಡುಗಡೆ ಹೊಂದಿ ನೈಜ ಸುಖವನ್ನು ಪಡೆಯಲಿಕ್ಕೂ ಮನೋಯೋಗವು ಮುಖ್ಯ ಕಾರಣವಾದುದು. ಈ ಮನೋವ್ಯಾಪಾರರೂಪವಾದ ಕ್ರಿಯೆಯನ್ನು ಒಂದೇ ಕಡೆ ಸ್ಥಿರಗೊಳಿಸಿ, ಅದನ್ನೇ ಚಿಂತಿಸುವುದಕ್ಕೆ ಧ್ಯಾನವೆನ್ನುತ್ತಾರೆ.

ಈ ಧ್ಯಾನವು ಅಶುಭಧ್ಯಾನ, ಶುಭಧ್ಯಾನ ಮತ್ತು ಶುದ್ಧಧ್ಯಾನವೆಂದು ವಿಭಾಗಿಸಬಹುದು. ಆತ್ಮನಲ್ಲಿ ದುಃಖದಾಯಕವಾದ ಪಾಪಕರ್ಮಗಳು ಬಂದು ಸೇರುವುದಕ್ಕೆ ಕಾರಣವಾದ ಹಿಂಸೆ, ಅತಿ ಆಸೆ, ಮೋಹ, ಕ್ರೋಧಾದಿ ದುರ್ವಿಷಯಗಳನ್ನು ಚಿಂತಿಸುವುದಕ್ಕೆ ಅಶುಭಧ್ಯಾನವೆಂದೂ, ಪುಣ್ಯಕರ್ಮಗಳು ಬಂದು ಸೇರುವುದಕ್ಕೆ ಕಾರಣವಾದ ಅಹಿಂಸೆ, ಪರೋಪಕಾರ, ಧರ್ಮಪ್ರಭಾವನೆ ಮುಂತಾದ ಒಳ್ಳೆಯ ವಿಷಯಗಳನ್ನು ಚಿಂತಿಸುವುದು ಶುಭ ಧ್ಯಾನವೆಂದೂ, ಪರಮಾನಂದ ರೂಪವಾದ ನೈಜ ಸುಖವನ್ನು ದೊರಕಿಸುವ ಶುದ್ಧಾತ್ಮ ಸ್ವರೂಪವನ್ನು ಚಿಂತಿಸುವುದಕ್ಕೆ ಶುದ್ಧಧ್ಯಾನವೆಂದೂ ಹೆಸರು.

ಮೇಲ್ಕಂಡ ಧ್ಯಾನಗಳಲ್ಲಿ ಅಶುಭಧ್ಯಾನವು ಹೇಯವಾದುದು ಅಂದರೆ ಮಾಡಬಾರದಂಥದೂ, ಶುಭ ಮತ್ತು ಶುದ್ಧ ಧ್ಯಾನಗಳು ಉಪಾದೇಯವೂ ಅಂದರೆ ಮಾಡಬೇಕಾದುವುಗಳೂ ಆಗಿವೆ. ಈ ಕಾಲದಲ್ಲಿ ಶುದ್ಧ ಧ್ಯಾನ ಮಾಡುವಂತಹ ತಾಳ್ಮೆಯೂ, ನಿಷ್ಠೆಯೂ, ಪಟುತ್ವವೂ, ವಾತಾವರಣವೂ ಇಲ್ಲವಾದುದರಿಂದ ಶುಭಧ್ಯಾನವನ್ನು ಮಾಡಲೇಬೇಕು. ಇದೊಂದೇ ಮಾನವ ಜನ್ಮದ ಪಾವಿತ್ರ್ಯತೆಯಾಗಿ ಒಂದಿಲ್ಲೊಂದು ಕಾಲಕ್ಕೆ ಶುದ್ಧಧ್ಯಾನದ ಲಬ್ಧಿಯೊದಗಿ ಸದಾ ಸುಖಿಯಾಗಬಹುದು.

ಅಶುಭಧ್ಯಾನಕ್ಕೆ ಅಪಧ್ಯಾನವೆಂತಲೂ ಹೇಳುತ್ತಾರೆ. ರಾಗ, ದ್ವೇಷ, ಮೋಹ, ಚಿಂತೆ, ಕ್ರೋಧ, ಮಾನ, ಮಾಯ, ಲೋಭ, ಸ್ವಾರ್ಥಾದಿಗಳಿಂದ ಮನೋವ್ಯಾಪಾರವು ವಿಕಾರಗೊಂಡು ಪರರಿಗೆ ದುಃಖ ಕೊಡುವುದಕ್ಕೆ ಪ್ರೇರಕ ವಾದ ಹಿಂಸೆಮಾಡುವ ಸಂಕಲ್ಪ ಉಂಟಾಗುತ್ತದೆ. ಇದರಿಂದ ಪಾಪವೆಂಬ ಪರ್ವತಭಾರದಿಂದ ಅಧೋಗತಿಯನ್ನು ಹೊಂದಬೇಕಾಗುತ್ತದೆ. ಹೀಗೆ ನರಕಾದಿ ದುರ್ಗತಿಗೆ ಸಾಗಿ ಅಗಾಧವಾದ ದುಃಖವನ್ನು ಅನುಭವಿಸುವುದಕ್ಕೆ ಕಾರಣವಾದ ಮಾನಸಿಕ ಚಿಂತನೆಯೇ ಅಪಧ್ಯಾನ. ಈ ಅಪಧ್ಯಾನದಿಂದ ಅನೇಕ ಅನಾಹುತಗಳನ್ನು ಅನುಭವಿಸಿದವರ ಉದಾಹರಣೆಗಳು ಜಿನಾಗಮದಲ್ಲಿ ದೊರೆಯುತ್ತವೆ.

ಸೋಮದೇವನ ಯಶಸ್ತಿಲಕವೆಂಬ ಗ್ರಂಥದಲ್ಲಿ ಹೇಳಿದೆ - ಸಂಕಲ್ಪ ಹಿಂಸೆಯ ನೆಪದಿಂದ ಯಶೋಧರನು ಅನೇಕ ತಿರ್ಯಂಚ ಗತಿಗಳಲ್ಲಿ ತೊಳಲಿ ಬಳಲಿದನು. ಆತನ ರಾಣಿಯಾದ ಅಮೃತಮತಿಯು ಮೋಹವಶಳಾಗಿ, ನಿರ್ಲಜ್ಜೆಯಿಂದ ಒಬ್ಬ



ಮಾವಟಿಗನ ಸಂಗವನ್ನು ಮಾಡಲೂ ಮತ್ತು ತನ್ನ ಪತಿಯನ್ನೇ ವಿಷಕೊಟ್ಟು ಕೊಲ್ಲಲೂ ಹಿಂಜರಿಯಲಿಲ್ಲ.

ಇಂತಹ ಅಪಧ್ಯಾನದಿಂದ ಆದ ಅನಾಹುತವನ್ನು ತಿಳಿಸುವ ಸರಿಯಾದ ಉದಾಹರಣೆಯೊಂದನ್ನ ಶ್ರೀ ಕುಂದಕುಂದಾಚಾರ್ಯರು ತಮ್ಮ 'ಭಾವಪಾಹುಡ' ವೆಂಬ ಗ್ರಂಥದಲ್ಲಿ ಹೀಗೆ ನಿರೂಪಿಸಿದ್ದಾರೆ.-

ಮಚ್ಛೋವಿ ಸಾಲಿಸಿತ್ಥೋ ಅಸುದ್ಧ ಭಾವೋ ಗಓ ಮಹಾನರಯಂ ।
ಇಯ ಣಾಉ ಅಪ್ಪಾಣಂ ಭಾವಹ ಜಿಣ - ಭಾವಣಾ ಣಿಚ್ಚ ॥

ಅಂದರೆ ಅಶುದ್ಧ ಭಾವವಾದ ಅಪಧ್ಯಾನದಿಂದ ಕೂಡಿದ್ದ ಮಾನವನೊಬ್ಬನು ಶಾಲಿಸಿಕ್ಥವೆಂಬ ಮೀನಾಗಿ ಹುಟ್ಟಿ ನಂತರ ಅಲ್ಲಿಂದ ಅದೇ ಅಪಧ್ಯಾನದಿಂದ ಮಹಾನರಕಕ್ಕೆ ಹೋಯಿತು. ಆದುದರಿಂದ ಅಪಧ್ಯಾನವನ್ನು ಯಾರೂ ಮಾಡಬೇಡಿರಿ. ಶುಭ ಮತ್ತು ಶುದ್ಧ ಧ್ಯಾನವನ್ನು ಮಾಡಿರಿ ಏಕೆಂದರೆ ಇದರಿಂದಲೇ ಸುಖ ದೊರೆಯುವುದು ದೊರೆತ ಮಾನವ ಜನ್ಮವನ್ನು ಅಪಧ್ಯಾನದಿಂದ ಹಾಳು ಮಾಡಿಕೊಂಡು ಅನಾಹುತಕ್ಕೆ ಈಡಾದ ಒಂದು ಬೋಧಪ್ರದ ದೃಷ್ಟಾಂತವನ್ನು ಆಚಾರ್ಯರು ನೀಡಿದ್ದಾರೆ.

ಪುಷ್ಪದಂತ ಭಗವಾನರ ಜನ್ಮಭೂಮಿಯಾದ ಕಾಕಂದೀ ನಗರದಲ್ಲಿ ಸೌರಸೇನನೆಂಬ ದೊರೆ ಇದ್ದನು. ಅವನು ಒಮ್ಮೆ ಜಿನಮುನಿಗಳ ಉಪದೇಶ ಕೇಳಿ, ಇನ್ನು ಮುಂದೆ ಮಾಂಸ ಭಕ್ಷಣೆ ಮಾಡುವುದಿಲ್ಲವೆಂದು ವ್ರತ ಮಾಡಿದನು. ಆದರೆ ನಾಲಗೆಯ ರುಚಿಯ ಚಪಲ ಹೆಚ್ಚಿ ಮತ್ತೆ ಮಾಂಸವನ್ನು ತಿನ್ನಬೇಕೆಂದು ಮನಸ್ಸು ಮಾಡಿದನು. ಆದರೆ ಎಲ್ಲರೆದುರಿಗೆ ತಾನು ವ್ರತಮಾಡಿದ್ದು ಈಗ ಅದನ್ನು ಬಿಟ್ಟನೆಂದು ಜನ ಏನೆಂದಾರೆಂದು ನಾಚಿದನು. ಆದರೂ ಮನಸ್ಸು ಯಾವಾಗಲೂ ಮಾಂಸದ ಕಡೆಗೇ ಚಿಂತಿಸುತ್ತಿತ್ತು. ತನ್ನ ಅಡಿಗೆಯವನಾದ ಪ್ರಿಯಕೇತುವನ್ನು ಕರೆದು ತನ್ನ ಅಭಿಪ್ರಾಯವನ್ನು ತಿಳಿಸಿ, ತನಗೆ ಗುಟ್ಟಾಗಿ ಮಾಂಸದ ಅಡಿಗೆಯನ್ನು ಮಾಡಿ ಬಡಿಸಬೇಕು. ಅದಕ್ಕೆ ಬೇಕಾಗುವ ಮಾಂಸವನ್ನು ನೀನೇ ತರಬೇಕು. ಈ ವಿಷಯ ಯಾರಿಗೂ ತಿಳಿಯಬಾರದು, ಎಚ್ಚರಿಕೆ! ಎಂದನು. ಪ್ರಿಯಕೇತುವು ಮಾರನೆಯ ದಿನವೇ ಊರಿಗೆ ದೂರದಲ್ಲಿರುವ ಕಾಡಿಗೆ ಹೋಗಿ ಅಲ್ಲಿನ ಬೇಡರಲ್ಲಿ ವಿಚಾರಿಸಿ ತನಗೆ ಬೇಕಾದ ಮಾಂಸವನ್ನು ತಂದು ಅಡಿಗೆ ಮಾಡಿ ರಾಜನಿಗಾಗಿ ಕಾದನು. ಆದರೆ ಇತ್ತ ಅಂದೇ ಪರರಾಯರ ದಂಡು ಮುತ್ತಿಗೆ ಹಾಕಲು ಬರುತ್ತಿದೆ ಎಂಬ ವದಂತಿ ಮುಟ್ಟಿತು. ಈ ಗಾಬರಿಯಲ್ಲಿ ರಾಜನಿಗೆ ಪ್ರಿಯಕೇತುವಿನ ಹತ್ತಿರ ಹೋಗಿ

ಊಟಮಾಡುವ ಅವಕಾಶವೇ ಸಿಗಲಿಲ್ಲ. ಯುದ್ಧ ಸಿದ್ಧತೆಯಲ್ಲಿ ತೊಡಗಿದನು. ಎರಡು, ಮೂರು, ನಾಲ್ಕು ದಿನಗಳು ಕಳೆದುವು. ಐದನೆಯ ದಿನ ಪ್ರಿಯಕೇತುವು ನಸುಕಿನಲ್ಲಿಯೇ ಎದ್ದು ಮಾಂಸ ತರಲೆಂದು ಕಾಡಿನಲ್ಲಿ ಹೋದಾಗ ಒಂದು ಘಟಸರ್ಪ ಕಚ್ಚಿ ಅಲ್ಲೇ ಸತ್ತನು. ಕೂಡಲೇ ಅವನು ಸ್ವಯಂ ಭೂರಮಣ ಸಮುದ್ರದಲ್ಲಿ ಒಂದು ತಿಮಿಂಗಲದಂತಹ ದೊಡ್ಡ ಮಿನಾಗಿ ಹುಟ್ಟಿದನು. ಇದು ಅಪಧ್ಯಾನದ ಫಲ. ಇತ್ತ ಪರರಾಯರ ದಂಡು ಕಾಕಂದೀ ನಗರವನ್ನು ಮುತ್ತಿ ಘೋರ ಯುದ್ಧ ನಡೆಸಿತು. ರಾಜನು ಯುದ್ಧ ಮಾಡುತ್ತಲೇ ಸೈನಿಕನೊಬ್ಬನ ಏಟಿಗೆ ಸಿಕ್ಕಿ ಹತನಾದನು. ಸಾಯುವಾಗಲೂ ತನ್ನ ಮಾಂಸದ ರುಚಿಯ ಇಚ್ಛೆಯು ಈಡೇರಲಿಲ್ಲ. ಆ ಅಡಿಗೆಯವನು ಎಲ್ಲಿ ಎಲ್ಲವನ್ನೂ ಬಯಲು ಮಾಡುವನೋ ಎಂಬ ಅಪಧ್ಯಾನ ಮಾಡುತ್ತಲೇ ಸತ್ತು ಅದೇ ಸ್ವಯಂಭೂರಮಣ ಸಮುದ್ರದಲ್ಲಿ ಹುಟ್ಟಿದ್ದ ತಿಮಿಂಗಲದ ದೊಡ್ಡ ಕಿವಿರಿನಲ್ಲಿ ಶಾಲಿಶಿಕ್ಥವೆಂಬ ಸಣ್ಣ ಮೀನಾಗಿ ಹುಟ್ಟಿದನು. ಕರ್ಮದ ಕೈವಾಡ ವಿಚಿತ್ರವಾದುದು. ಈ ಪುಟಾಣಿ ಮೀನು ಆ ದೊಡ್ಡ ಮೀನಿನ ಕಿವಿರಿನಲ್ಲಿದ್ದ ಕೊಳೆ ಪಾಚಿಯನ್ನೇ ತಿಂದು ಜೀವಿಸುತ್ತಿತ್ತು. ಆದರೂ ಆ ತಿಮಿಂಗಲದ ಮೈಮೇಲೆಲ್ಲ ಓಡಾಡಿ "ಓಹೋ, ಇದೊಂದು ದೊಡ್ಡ ಮೀನು. ಅಬ್ಬಾ! ಇದರ ಬಾಯಿ ಎಷ್ಟು ದೊಡ್ಡದು! ಇದೇನು ಇದರ ಬಾಯೊಳಗೆ ಅನೇಕ ಮೀನು, ಮೊಸಳೆ, ಆಮೆಗಳು ಓಡಾಡಿದರೂ ಬಾಯಿ ತೆರೆದುಕೊಂಡೇ ಇದೆಯಲ್ಲಾ, ಸುಮ್ಮನೆ ಬಾಯಿ ಮುಚ್ಚಿದರೂ ಅನೇಕ ಪ್ರಾಣಿಗಳು ಇದಕ್ಕೆ ಆಹಾರವಾಗುತ್ತವೆ. ಯಾವಾಗಲೋ ಒಮ್ಮೆ ಮಾತ್ರ ಬಾಯಿ ಮುಚ್ಚುತ್ತದೆ ಇದೆಂತಹ ಸೋಮಾರಿ ತನ್ನೆದುರಿಗೆ ಅನೇಕ ಜಲಚರ ಪ್ರಾಣಿಗಳು ಸುಳಿದಾಡಿದರೂ ಸುಮ್ಮನೇ ಇದೆಯಲ್ಲ. ಇದಕ್ಕೆ ಎಷ್ಟು ಶಕ್ತಿ ಇದ್ದರೇನು, ಎಷ್ಟು ದೊಡ್ಡ ಪ್ರಾಣಿಯಾದರೇನು, ನನ್ನಂತಹ ಹುಮ್ಮಸ್ಸು, ಚಟುವಟಿಕೆ ಇಲ್ಲ. ನನಗೆ ಈ ಶಕ್ತಿಯಿದ್ದರೆ, ಒಮ್ಮೆಲೇ ಈ ಸಮುದ್ರದಲ್ಲಿನ ಎಲ್ಲ ಪ್ರಾಣಿಗಳನ್ನು ನುಂಗಿ ತೃಪ್ತಿ ಪಡುತ್ತಿದ್ದೆ." ಎಂದು ಆ ತಿಮಿಂಗಿಲದ ಬಾಯಿಯ ಬಳಿ ಬಂದಿತ್ತು. ಆಗಲೇ ಆ ತಿಮಿಂಗಲವು ತನ್ನ ಬಾಯಿ ಮುಚ್ಚಿಕೊಂಡಿತು. ಆ ಶಾಲಿಶಿಕ್ಥ ಮೀನಿನೊಂದಿಗೆ ಅನೇಕ ಪ್ರಾಣಿಗಳು ಆ ತಿಮಿಂಗಿಲದ ಹೊಟ್ಟೆಯನ್ನು ಸೇರಿದುವು. ಆ ಸಣ್ಣ ಮೀನಿನ ಶಕ್ತಿ ಅಲ್ಪವಾದರೂ ಆಸೆಯು ಅಪಾರವಾಗಿತ್ತು. ಆ ತಿಮಿಂಗಲದ ಕಿವಿರಿನಲ್ಲಿನ ಕೊಳೆಯನ್ನೇ ತಿಂದು ಜೀರ್ಣಿಸಿಕೊಳ್ಳಲಾರದ ಆ ಸಣ್ಣ ಮೀನು ಸಮುದ್ರವನ್ನೇ ಆಪೋಶನ ಮಾಡುವ ಮನಸ್ಸು ಮಾಡಿತು. ಈ ಅಪಧ್ಯಾನದಲ್ಲೇ ಆ ಶಾಲಿಶಿಕ್ತ ಮೀನು ತಿಮಿಂಗಲದ ಹೊಟ್ಟೆಯಲ್ಲಿ ಸತ್ತು ನೇರವಾಗಿ ಏಳನೇ ನರಕವನ್ನು ಸೇರಿತು. ಅಲ್ಲಿ 33 ಸಾಗರೋಪಮ ಆಯುಷ್ಯ ಹೊಂದಿ ಘೋರ



ದುಃಖವನ್ನು ಅನುಭವಿಸುತ್ತಿತ್ತು. ಕಾಲಕ್ರಮದಲ್ಲಿ ಆ ತಿಮಿಂಗಲವೂ ಸತ್ತು ಅದೇ ಏಳನೇ ನರಕವನ್ನು ಸೇರಿತು. ಯಾವಾಗಲೋ ಆ ಇಬ್ಬರೂ ನಾರಕಿಗಳು ಒಂದೆಡೆ ಸೇರಿದಾಗ ಭವಪ್ರತ್ಯಯ ವಿಭಂಗ ಜ್ಞಾನದಿಂದ ತಮ್ಮ ತಮ್ಮ ಹಿಂದಿನ ಜನ್ಮಾಂತರಗಳನ್ನು ನೆನಪು ಮಾಡಿಕೊಂಡು 'ಎಲಾ ನಿನ್ನಿಂದಾಗಿ ನಾನು ನಿನಗೆ ಅಡಿಗೆ ಮಾಡಲು ಮಾಂಸ ತರಲು ಹೋಗಿ ಹಾವು ಕಚ್ಚಿ ಸತ್ತು ತಿಮಿಂಗಿಲವಾಗಿ ನಂತರ ಈ ನರಕವನ್ನು ಹೊಂದಿ ದುಃಖಪಡಬೇಕಾಯಿತು. 'ಎಂದು ಹಿಂದಿನ ಪ್ರಿಯಕೇತು ಎಂಬ ಅಡಿಗೆಯವನ ಜನ್ಮದ ನಾರಕಿಯು ಹೇಳಿತು. ಅದಕ್ಕೆ 'ಎಲ್ಲಾ ನೀನು ನನ್ನ ಇಚ್ಛೆಯನ್ನು ಪೂರೈಸದೆ ನನಗೆ ಮೋಸಮಾಡಿದೆ. ಅದೇ ಧ್ಯಾನದಲ್ಲಿ ಸತ್ತು ನೀನು ತಿಮಿಂಗಿಲವಾಗಿದ್ದಾಗ ನಿನ್ನ ಕಿವಿರಿನಲ್ಲಿ ಸಣ್ಣ ಮೀನಾದೆ. ಆಗ ನಿನ್ನ ದೇಹದ ಆಕಾರವನ್ನು ನೋಡಲು ನಿನ್ನ ಬಾಯಿಯ ಬಳಿ ಬಂದಾಗ ನನ್ನನ್ನೇ ನುಂಗಿಬಿಟ್ಟೆ. ಅದರಿಂದಾಗಿ ನನಗೀ ಗತಿ ಬಂದಿತು. ನೀನೇ ನನಗೆ ಮೋಸ ಮಾಡಿದೆ. ನಾನು ರಾಜನಾಗಿದ್ದಾಗ ನೀನು ನನ್ನ ಆಜ್ಞೆ ಪಾಲಿಸಲಿಲ್ಲ' ಎಂದು ಹಿಂದೆ ರಾಜನಾಗಿದ್ದು ನಂತರ ಮೀನಾಗಿದ್ದ ನಾರಕಿಯು ಹೇಳಿದನು 'ಏನು ಮಾಡಲಿ, ಅಡಿಗೆಯನ್ನು ಮಾಡಿ ನಿನ್ನನ್ನು ಕಾದೆ. ಯಾವಾಗ ಬಂದು ನೋಡಿದರೂ ಮಂತ್ರಿ, ಸೇನಾಪತಿ ಮತ್ತಿತರರೊಂದಿಗೆ ಆಲೋಚನೆ ಮಾಡುತ್ತಿದ್ದೆ. ನಂತರ ರಾಣಿಯೊಡನೆ ಉಣ್ಣುತ್ತಿದ್ದೆ. ಹೀಗೇ ನಾಲ್ಕು ದಿನ ಕಾದು ಕಲ್ಲಾದೆ. ನಿನ್ನದೇ ತಪ್ಪು.' ಎಂದು ಅಡಿಗೆಯವನ ಜನ್ಮದ ನಾರಕಿಯು ಹೇಳಿದನು. ಹೀಗೇ ಪರಸ್ಪರ ಮಾತಾಡಿಕೊಳ್ಳುತ್ತ ಅನ್ಯಾಯವಾಗಿ ಪವಿತ್ರವಾದ ಮಾನವ ಜನ್ಮ, ಅದರಲ್ಲೂ ರಾಜನಾಗಿ ಪಡೆದ ಪಾವನವಾದ ಧರ್ಮವನ್ನು ಹಾಳುಮಾಡಿ ಅಪಧ್ಯಾನದಿಂದ ಈ ದುರ್ಗತಿಯಾಯಿತೇ ಎಂದು ನೊಂದುಕೊಳ್ಳುತ್ತಿರುವಾಗಲೇ ಅಡಿಗೆಯವನು ಅಡಿಗೆಗಾಗಿ ಕೊಲ್ಲಲ್ಪಟ್ಟ ಅನೇಕ ಪ್ರಾಣಿಗಳೂ ಅಪಧ್ಯಾನದಿಂದ ಮಡಿದು ಇಲ್ಲಿ ನಾರಕಿಗಳಾಗಿದ್ದುವು. ಹಾಗೂ ಮುತ್ತಿಗೆ ಹಾಕಿದ ಸೈನ್ಯದಲ್ಲಿ ಅನೇಕ ಸೈನಿಕರೂ ರಾಜನಿಂದ ಕೊಲ್ಲಲ್ಪಟ್ಟವರೂ ಅಪಧ್ಯಾನದಿಂದ ಮಡಿದು ಅದೇ ನರಕವನ್ನು ಸೇರಿದ್ದರು. ಅವೆಲ್ಲ ಈ ನಾರಕಿಗಳನ್ನು ನೋಡಿದ ಕೂಡಲೇ ಹಿಂದಿನ ವೈರದಿಂದ ಅವರನ್ನು ಇರಿದು, ತಿವಿದು ದುಃಖ ಕೊಡಲಾರಂಭಿಸಿದುವು. ಹೀಗೇ ಪರಸ್ಪರ ದುಃಖ, ರೋದನೆ, ವೇದನೆಗಳಲ್ಲೇ ಅದೆಷ್ಟು ಕಾಲನೊಂದು ಬೆಂದುವೋ ಗೊತ್ತಿಲ್ಲ. ನರಕದಲ್ಲಿನ ಸ್ಥಿತಿಯೇ ಹೀಗೇ ಯಾವುದೋ ಜನ್ಮದ ವೈರತ್ವವು ಅಲ್ಲಿ ನೆನಪು ಬಂದು ಪರಸ್ಪರ ದುಃಖ ಕೊಡುವ ಪರಿಪಾಟ ಇದೆ. ದುಃಖ, ವೇದನೆಯೇ ಆ ನಾರಕಿಗಳಿಗೆ ಅಹಾರ, ಅಬ್ಬಾ! ಆ ಘೋರ ದುಃಖದ ವರ್ಣನೆಯಾರಿಂದ ಮಾಡಲು ಸಾಧ್ಯ.

ಅರಹಂತಾ.... ಸಾಕು....ಸಾಕು. ಈ ಅಪಧ್ಯಾನದಿಂದಾಗುವ ಅನಾಹುತ ಯಾರಿಗೂ ಬೇಡ!...

ಬಹು ಜನ್ಮದ ಪ್ರಯಾಸದಿಂದ ಉಳಿಸಿಕೊಂಡು ಬಂದ ಪುಣ್ಯದಿಂದ ಪಡೆದ ಮಾನವ ಜನ್ಮದಲ್ಲಿ ಮನ, ವಚನ, ಕಾಯಗಳನ್ನು ಶುಭಚಿಂತನೆ, ಶುಭವಾದ, ಹಿತ ಮಿತವಾದ ಮಾತು, ಪವಿತ್ರವಾದ ಕಾರ್ಯಗಳಿಗೆ ಉಪಯೋಗಿಸಿ ಒಳ್ಳೆಯ ಸುಖವನ್ನು ಸಂಪಾದಿಸಬೇಕಲ್ಲದೆ ದೊರೆತ ಪದವಿಯನ್ನು ಅಪಧ್ಯಾನದಿಂದ ಹಾಳುಮಾಡಿ ಕೊಳ್ಳಬಾರದು.

ಈ ಅಪಧ್ಯಾನದಿಂದ ಪಾರಾಗಲು ಶುಭಧ್ಯಾನ, ಶುಭಚಿಂತನೆ, ಪರರ ಹಿತ, ಅಧ್ಯಾತ್ಮ ಭಾವನೆಗಳಲ್ಲಿ ನಿರತರಾಗಬೇಕು, ಹೀಗಾಗಲು ಜಿನದೇವ, ಜಿನಧರ್ಮ ಮತ್ತು ಜಿನಗುರುಗಳ ಆಶ್ರಯ ಬೇಕು. ಅದಕ್ಕಾಗಿಯೇ ಯಾರು ಜಿನೇಂದ್ರನ ಚರಣಕ್ಕೆ ಶರಣು ಹೋಗಿ ಆ ಭಗವಂತನ ಕರುಣೋನ್ನತಿಯನ್ನು ಹೊಂದು ವರೋ ಅದೇ ಅವರಿಗೆ ಯೋಗ ಮತ್ತು ಅದೇ ಅವರಿಗೆ ರಕ್ಷಣೆ. ಅದಕ್ಕಾಗಿ ರತ್ನಾಕರ ಕವಿ ಒಂದೆಡೆ ಹೇಳಿದ್ದಾನೆ-

ಭೂರಿ ಜಿನಧರ್ಮಮಂ ತಿಳಿವುದುಂ ಪಲರಂ ಮತಿದೋರಿ ಧರ್ಮದೋಳ್।  
ಸೇರಿಪುದುಂ ಮಹೋಗ್ರ ತಪದೋಳ್ ಪಟುವಪ್ಪುದುಮಾತ್ಮನಂ ಮನೋ॥  
ರಾಗದೊಳೀಕ್ಷಿಸುತ್ತೆ ಭವಬಂಧಮನಿಕ್ಕುವ ಯೋಗ ಸುಮ್ಮನೆ।  
ಬಾರದದರ್ಕೆ ನಿಮ್ಮ ಕರುಣೋನ್ನತಿ ಬೇಕಪರಾಜಿತೇಶ್ವರಾ॥

ಹೀಗೆ ರತ್ನತ್ರಯಾಂಕಿತವಾದ ಜಿನಧರ್ಮದ ಆಶ್ರಯವೂ, ಧರ್ಮಪ್ರಭಾವನಾ ಸಾಮರ್ಥ್ಯವೂ, ವ್ರತ, ಜಪ, ತಪಾದಿಗಳಲ್ಲಿ ದೃಢತೆಯೂ, ಆಧ್ಯಾತ್ಮ ಭಾವನೆಯೂ, ಶುಭ ಮತ್ತು ಶುದ್ಧ ಧ್ಯಾನದ ಸಿದ್ಧಿಯೂ, ಈ ಮಾನವ ಜನ್ಮದಲ್ಲಿ ಲಭಿಸುವ ಯೋಗ ದೊರೆಯಲು ಜಿನೇಂದ್ರನ, ಜಿನಧರ್ಮದ, ಜಿನಗುರುವಿನ ಕರುಣೋನ್ನತಿ ಬೇಕು. ಅದಕ್ಕಾಗಿ ಮಾನವರು ತಮ್ಮ ಜೀವಿತ ಕಾಲದಲ್ಲಿ ಸ್ವಲ್ಪವಾದರೂ ಪ್ರಯತ್ನಿಸಿದುದಾದರೆ ಅಪಧ್ಯಾನದಿಂದ ಆಗುವ ಅನಾಹುತದಿಂದ ಬಚಾವಾಗಬಹುದು. ಶುಭಧ್ಯಾನ ಸಿದ್ಧಿಸಿ ಉತ್ತರೋತ್ತರ ಲೌಕಿಕ ಮತ್ತು ಪಾರಲೌಕಿಕ ಸುಖಿಸಂಪನ್ನರಾಗಬಹುದು.



# 57. ಶ್ರೀ ವೃಷಭನಾಥ ತೀರ್ಥಂಕರರು

ಈ ವರ್ತಮಾನ ಕಾಲದಲ್ಲಿ ಆಗಿಹೋದ 24 ಮಂದಿ ತೀರ್ಥಂಕರರಲ್ಲಿ ಶ್ರೀ ವೃಷಭನಾಥರೇ ಮೊದಲಿಗರು. ಇವರಿಗೆ ಆದಿನಾಥರೆಂದೂ, ಪುರುಪರಮೇಶರೆಂದೂ ಹೇಳುವರು. ಇವರ ಸಂಕ್ಷೇಪವಾದ ಚರಿತ್ರೆಯನ್ನು ಇಲ್ಲಿ ತಿಳಿಸಲಾಗಿದೆ.

ಆದಿನಾಥರು ಜನ್ಮ-ಜನ್ಮಾಂತರಗಳಲ್ಲಿ ಸಂಸ್ಕಾರ ಹೊಂದುತ್ತಾ ಬಂದವರು. ಅವರ ಭವಾವಳಿಯು ತುಂಬಾ ಬೋಧಪ್ರದವಾಗಿದೆ.

ಆದಿನಾಥರು ತಮ್ಮ ಹಿಂದಿನ ಒಂದು ಭವದಲ್ಲಿ ಪಶ್ಚಿಮ ವಿದೇಹದ ಗಂಧಿಲ ದೇಶದ ಸಿಂಹಪುರದ ರಾಜ ಶ್ರೀಷೇಣ ಮತ್ತು ತನ್ನ ಪತ್ನಿ ಶ್ರೀ ಸುಂದರಿಗೆ ಜಯವರ್ಮನೆಂಬ ಮಗನಾಗಿ ಹುಟ್ಟಿದ್ದರು. ಈತನಿಗೆ ಶ್ರೀ ವರ್ಮ ನೆಂಬ ಓರ್ವ ತಮ್ಮನಿದ್ದನು. ಆತ ತಂದೆ ತಾಯಿಯರಿಗೆ ಪ್ರಿಯನಾಗಿದ್ದನು. ಆದ್ದರಿಂದ ಶ್ರೀಷೇಣನು ಹಿರಿಯ ಮಗನನ್ನು ಬಿಟ್ಟು ಕಿರಿಯನಿಗೇ ಪಟ್ಟ ಕಟ್ಟಿದನು. ಇದರಿಂದ ಜಯವರ್ಮನು ಸಂಸಾರದಲ್ಲಿ ವಿರಕ್ತನಾಗಿ ಮುನಿ ದೀಕ್ಷೆಯನ್ನು ಕೈಗೊಂಡನು. ತಾನು ಕೇಶಲೋಚವನ್ನು ಮಾಡಿಕೊಂಡು ಕೇಶವನ್ನು ಹುತ್ತದಲ್ಲಿ ಹಾಕಲು ಹೋದಾಗ ಒಂದು ಹಾವು ಕಚ್ಚಿತು. ಕಂಠಗತ ಪ್ರಾಣನಾಗಿದ್ದಾಗ ಆಕಾಶದಲ್ಲಿ ಹೋಗುತ್ತಿದ್ದ ವಿದ್ಯಾಧರರನ್ನು ಕಂಡು ನಿಧಾನ ಶಲ್ಯೆಯನ್ನು ಹೊಂದಿ ತನ್ನ ಮುಂದಿನ ಜನ್ಮದಲ್ಲಿ ತನಗೆ ತನ್ನ ತಪಸ್ಸಿನ ಫಲದಿಂದ ಅಂತಹ ಖೇಚರ ವೈಭವ ದೊರೆಯಲಿ ಎಂದುಕೊಂಡು ಮರಣ ಹೊಂದಿದನು. ಅಂತೆಯೇ ಈ ಭರತಕ್ಷೇತ್ರದ ವಿಜಯಾರ್ಧಪರ್ವತದ ಉತ್ತರ ಶ್ರೇಣಿಯ ಅಲಕಾಪುರಿಯದಲ್ಲಿ ಅತಿಬಲನ ಪತ್ನಿ ಮನೋಹರಾದೇವಿಗೆ ಮಹಾಬಲನೆಂಬ ಮಗನಾಗಿ ಜನಿಸಿದನು. ಹಿಂದಿನ ಜನ್ಮದಲ್ಲಿ ದಿಗಂಬರ ಮುನಿಯಾಗಿ ಕೆಲಕಾಲ ತಪಸ್ಸು ಮಾಡಿದ ಫಲದಿಂದ ತಾನು ಅಂದುಕೊಂಡಂತೆ ವಿದ್ಯಾಧರ ವೈಭವವನ್ನು ಪಡೆದು ರಾಜನಾದನು. ಈತನಿಗೆ ನಾಲ್ಕು ಮಂದಿ ಮಂತ್ರಿಗಳಿದ್ದರು. ಅವರಲ್ಲಿ ಸ್ವಯಂ ಬುದ್ಧನೆಂಬುವನು ಸಮ್ಯಗ್ದೃಷ್ಟಿಯಾಗಿದ್ದನು. ಮಿಕ್ಕವರು ಮಿಥ್ಯಾ ದೃಷ್ಟಿಗಳು. ಅವರೆಲ್ಲಾ ಮಹಾಬಲನನ್ನು ಕೆಟ್ಟದಾರಿಗೆ ಎಳೆಯುತ್ತಿದ್ದುದನ್ನು ಕಂಡು ಸ್ವಯಂ ಬುದ್ಧನು ಅವನಿಗೆ ಬುದ್ಧಿ ಹೇಳಿ ಸನ್ಮಾರ್ಗದಲ್ಲಿ ನಡೆಸಿದನು. ಸಂಸಾರದಲ್ಲಿ



## ಭಗವಾನ್ 1008 ಶ್ರೀ ವೃಷಭನಾಥಸ್ವಾಮಿ

ಮಂಗಲಂ ಭಗವಾನ್‌ರ್ಹನ್ । ಮಂಗಲಂ ಭಗವಾನ್ ಜಿನಃ ॥
ಮಂಗಲಂ ಪ್ರಥಮಾಚಾರ್ಯೋ । ಮಂಗಲಂ ವೃಷಭೇಶ್ವರ ಃ ॥



ನಿಮಜ್ಜರಾದವರನ್ನು ಮೇಲೆತ್ತಿ ಕಾಪಾಡುವುದೇ ಧರ್ಮ, ಈ ಧರ್ಮವು ದಯೆ, ಕ್ಷಮೆ, ದಾನ, ಶೀಲ, ತಪ, ಸಂಯಮ ಪೂಜೆ ಸ್ವಾಧ್ಯಾಯಗಳಿಂದ ಕೂಡಿದೆ. ಈ ಧರ್ಮದ ಫಲ ಇಹ ಪರಗಳಲ್ಲಿ ಸುಖವೂ ಅಂತ್ಯದಲ್ಲಿ ಮುಕ್ತಿ ಎಂದು ಉಪದೇಶಿಸಿದನು. ಇದರಿಂದ ಉತ್ತೇಜಿತನಾದ ಮಹಾಬಲನು ತನ್ನ ಅಂತ್ಯ ಸಮಯದಲ್ಲಿ ಸಂಸಾರ, ಶರೀರ ಭೋಗಗಳಿಂದ ವಿರಕ್ತನಾಗಿ ಜಿನದೀಕ್ಷೆಯನ್ನು ಕೈಗೊಂಡು ತಪೋ ನಿರತನಾಗಿ ಸಮಾಧಿ ಹೊಂದಿ ಈಶಾನ್ಯ ಸ್ವರ್ಗದಲ್ಲಿ ಶಶಿ ಪ್ರಭವೆಂಬ ವಿಮಾನದಲ್ಲಿ ಲಲಿತಾಂಗ ದೇವನಾಗಿ ಹುಟ್ಟಿದನು. ಅಲ್ಲಿನ ಅಪಾರ ಸಂಪದಕ್ಕೆ ಒಡೆಯನಾದನು. ಆತನಿಗೆ ಅನೇಕ ಮಂದಿ ದೇವಾಂಗನೆಯರಿದ್ದರು. ಅವರಲ್ಲಿ ಸ್ವಯಂಪ್ರಭೆಯು ಆತನ ಮನವನ್ನು ಸೂರೆಗೊಂಡಿದ್ದಳು. ಆಕೆಯಲ್ಲಿ ಲಲಿತಾಂಗನಿಗೆ ಎಲ್ಲಿಲ್ಲದ ಪ್ರೀತಿ. ಅವನು ಬಹುಕಾಲ ಸ್ವರ್ಗ ಸುಖವನ್ನು ಭೋಗಿಸಿ ಅವನ ಆಯುಷ್ಯ ಇನ್ನು ಆರುತಿಂಗಳಿದೆ ಎನ್ನುವಾಗ ಮರಣದ ಸೂಚನೆಯನ್ನು ಕಂಡು, ಕೇಳಿದ ಲಲಿತಾಂಗನು ಬಹು ದುಃಖಿತನಾದನು. ಆದರೆ ಸ್ವಯಂಪ್ರಭೆಯೇ ಮೊದಲಾದ ದೇವತೆಗಳು ಅವನಿಗೆ ಸಮಾಧಾನ ಮಾಡಿ ಸ್ವರ್ಗಸುಖವೂ ಶಾಶ್ವತವಲ್ಲ. ಆದ್ದರಿಂದ ಶಾಂತಿಯಿಂದ ಇರು ಎಂದು ತಿಳಿಯ ಹೇಳಿ ಧರ್ಮ ಕ್ರಿಯೆ, ಜಿನಪೂಜೆಗಳಲ್ಲಿ ತೊಡಗಿಸಿದರು.

ಲಲಿತಾಂಗನು ತನ್ನ ಆಯುಷ್ಯಾಂತ್ಯದಲ್ಲಿ ಮುಡುಪಿ ಜಂಬೂದ್ವೀಪದ ವಿದೇಹಕ್ಷೇತ್ರದ ಉತ್ಪಲಖೇಟವೆಂಬ ನಗರದ ರಾಜ ವಜ್ರಬಾಹು ಮತ್ತು ಆತನ ಪತ್ನಿ ವಸುಂಧರೆಗೂ ವಜ್ರಜಂಘನೆಂಬ ಮಗನಾಗಿ ಹುಟ್ಟಿದನು.

ಕೆಲಕಾಲಾನಂತರ ಸ್ವಯಂಪ್ರಭೆಯೂ ತನ್ನ ಪತಿಯ ವಿಯೋಗದಿಂದ ನೊಂದು ತನ್ನ ಸ್ವರ್ಗದ ಆಯುವು ಮುಗಿದ ಮೇಲೆ ಪುಂಡರೀಕಿಣೀ ನಗರದ ರಾಜ ವಜ್ರದಂತನ ಪತ್ನಿ ಲಕ್ಷ್ಮೀಮತಿಗೆ ಶ್ರೀಮತಿ ಎಂಬ ಮಗಳಾಗಿ ಜನಿಸಿದಳು. ಈಕೆ ವ್ರಜಜಂಘನ ಸೋದರತ್ತೆಯ ಮಗಳೇ ಆಗಿದ್ದಳು. ವಜ್ರಜಂಘನು ಶ್ರೀಮತಿಯನ್ನು ವಿವಾಹವಾದನು. ಇವರಿಗೆ 49 ಮಂದಿ ಅವಳಿ ಮಕ್ಕಳಾದರು. ಅವರೆಲ್ಲಾ ಬಾಲ್ಯದಲ್ಲೇ ದೀಕ್ಷೆ ಕೈಗೊಂಡು ಹೋಗುತ್ತಿದ್ದರು. ಒಮ್ಮೆ ಶ್ರೀಮತಿ ವಜ್ರಜಂಘರು ತಮ್ಮ ಕೊನೆಯ ಅವಳಿ ಮಕ್ಕಳು ಚಾರಣ ಮುನಿಗಳಾಗಿ ವಿಹರಿಸುತ್ತಿದ್ದಾಗ ಅವರಿಗೆ ಆಹಾರದಾನ ಕೊಟ್ಟು ಪಂಚಾಶ್ಚರ್ಯವನ್ನು ಹೊಂದಿದರು. ಆ ಸಂದರ್ಭದಲ್ಲಿ ಆ ಕಾಡಿನಲ್ಲಿದ್ದ ಒಂದು ಹುಲಿ, ಹಂದಿ, ಕಪಿ ಮತ್ತು ಮುಂಗುಸಿಗಳೂ ಆಹಾರ ದಾನವನ್ನು ನೋಡಿ ಅನುಮೋದನಾ ಪುಣ್ಯ ಹೊಂದಿದರು ಹಾಗೂ ವಜ್ರಜಂಘನ ಮಂತ್ರಿ ಸೇನಾಪತಿ ಪುರೋಹಿತ, ರಾಜಶ್ರೇಷ್ಠಿಯರೂ ಈ ದಾನವನ್ನು ಅನುಮೋದಿಸಿ

ಪುಣ್ಯ ಭಾಗಿಗಳಾದರು.

ಶ್ರೀಮತಿ ವಜ್ರಜಂಘರು ಬಹುಕಾಲ ಸುಖವಾಗಿದ್ದು ಒಂದು ದಿನ ತಾವು ಮಲಗುವ ಕೊಠಡಿಯಲ್ಲಿ ಹಾಕಿದ್ದ ಕಾಲಾಗರು ಧೂಪದ ಹೊಗೆಯಿಂದ ಉಸಿರು ಕಟ್ಟಿ ಒಟ್ಟಿಗೆ ಪ್ರಾಣಬಿಟ್ಟರು. ತಾವು ಮುನಿಗಳಿಗೆ ಆಹಾರದಾನ ಮಾಡಿದ ಪುಣ್ಯದಿಂದ ಉತ್ತರಕುರು ಎಂಬ ಉತ್ತಮ ಭೋಗ ಭೂಮಿಯಲ್ಲಿ ಆರ್ಯ-ಆರ್ಯೆಯರಾಗಿ ಹುಟ್ಟಿದರು. ಆ ಭೋಗ ಭೂಮಿಯ ಸುಖ ಸ್ವರ್ಗಕ್ಕೂ ಮಿಗಿಲಾದುದು. ಅವಳಿಗಳಾಗಿ ಹುಟ್ಟಿದ ಅವರು ಕಲ್ಪವೃಕ್ಷಗಳಿಂದ ತಮಗೆ ಬೇಕಾದ ಸುಖಸಾಮಾಗ್ರಿಗಳನ್ನು ಪಡೆದು ಆನಂದದಿಂದ ಇದ್ದರು. ಹಿಂದೆ ದಾನಾನುಮೋದನ ಪುಣ್ಯದಿಂದ ಹಂದಿ ಮೊದಲಾದ ಪ್ರಾಣಿಗಳೂ, ಅದೇ ಭೋಗ ಭೂಮಿಯಲ್ಲಿ ಹುಟ್ಟಿದರು. ಮತಿವರನೇ ಮೊದಲಾದ ನಾಲ್ವರೂ ಸ್ವರ್ಗದಲ್ಲಿ ಜನಿಸಿದರು. ಅವರೂ ಸುಖಭೋಗವನ್ನು ಅನುಭವಿಸುತ್ತಾ ವಿಹರಿಸುತ್ತಿದ್ದರು.

ಆಗ ಒಮ್ಮೆ ಹಿಂದೆ ಮಹಾಬಲನ ಜನ್ಮದಲ್ಲಿ ಸ್ವಯಂ ಬುದ್ಧನೆಂಬ ಮಂತ್ರಿಯು ಉತ್ತಮ ಗತಿಗಳನ್ನು ಹೊಂದಿ ಕೊನೆಗೆ ಪ್ರೀತಿಂಕರನೆಂಬ ರಾಜಪುತ್ರನಾಗಿದ್ದು ಕಾರಣಾಂತರದಿಂದ ವೈರಾಗ್ಯ ಹೊಂದಿ ಮುನಿದೀಕ್ಷಾಧಾರಿಗಳಾದರು. ಚಾರಣ ವೃದ್ಧಿಯನ್ನು ಹೊಂದಿ ವಿಹರಿಸುತ್ತಿದ್ದಾಗ ತಮ್ಮ ಅವಧಿಜ್ಞಾನದಿಂದ ಹಿಂದಿನ ಜನ್ಮದ ಮಿತ್ರ ಮಹಾಬಲನು ಈ ಭೋಗ ಭೂಮಿಯಲ್ಲಿ ಇರುವುದನ್ನು ತಿಳಿದು, ವಜ್ರಜಂಘ-ಶ್ರೀಮತಿಯರು ಇರುವ ಬಳಿಗೆ ಬಂದರು. ಅವರಿಗೆ ಹಿತವಾದ ಧರ್ಮ ಬೋಧೆ ಮಾಡಿ, ಸಮ್ಯಕ್ತ್ವದ ಮಹಿಮೆಯನ್ನು ತಿಳಿಸಿ ಅವರನ್ನು ಸಮ್ಯಗ್ದೃಷ್ಟಿಗಳನ್ನಾಗಿ ಮಾಡಿದರು. ಅದೇ ಸಂದರ್ಭದಲ್ಲಿ ಅವರ ಸಂಗಾತಿಗರಾದ ಹಿಂದೆ ದಾನಾನುಮೋದನ ಮಾಡಿದ ತಿರ್ಯಂಚರ ಆರ್ಯರೂ ಆಚಾರಣ ಮುನಿಗಳ ಉಪದೇಶದಿಂದ ಸಮ್ಯಗ್ದೃಷ್ಟಿಗಳಾದರು. ಚಾರಣ ಮುನಿಗಳು ಅಲ್ಲಿಂದ ತೆರಳಿ ಕೆಲಕಾಲಾನಂತರ ಕರ್ಮಕ್ಷಯ ಮಾಡಿ ಮುಕ್ತರಾದರು.

ಭೋಗ ಭೂಮಿಯ ಆಯುಷ್ಯವು ಮುಗಿದ ನಂತರ ವಜ್ರ ಜಂಘಾದಿ ಆರ್ಯ-ಆರ್ಯೆಯರೆಲ್ಲಾ ಈಶಾನಸ್ವರ್ಗದಲ್ಲಿ ಹುಟ್ಟಿದರು. ವಜ್ರಜಂಘಾರ್ಯನು ಶ್ರೀಧರ ದೇವನಾಗಿ, ಶ್ರೀಮತಿ ಆರ್ಯೆಯು ಸ್ವಯಂಪ್ರಭ ದೇವನಾಗಿ, ಹುಲಿಯ ಜನ್ಮದ ಆರ್ಯರು ಕ್ರಮವಾಗಿ ಚಿತ್ರಾಂಗದ, ಮಣಿ ಕುಂಡಲ, ಮನೋಹರ ಮನೋರಥರೆಂಬ ದೇವತೆಗಳಾಗಿ ಜನಿಸಿದರು. ಅಲ್ಲಿ ಸುಖಭೋಗಗಳನ್ನು



ಅನುಭವಿಸಿ ಆಯುವು ಮುಗಿದ ಮೇಲೆ ಅಲ್ಲಿಂದ ಚ್ಯುತರಾಗಿ ಶ್ರೀಪ್ರಭಾ-ಸ್ವಂಪ್ರಭಾದೇವತೆಗಳು ಮುಂದೆ ಕ್ರಮವಾಗಿ ಸುವಿಧಿ-ಕೇಶವರಾಗಿ, ಅಚ್ಯುತೇಂದ್ರ ಪ್ರತೀಂದ್ರರಾಗಿ ವಜ್ರನಾಭಿಚಕ್ರಿ-ಧನದೇವ ಗೃಹಪತಿರತ್ನರಾಗಿ ಜನಿಸಿದರು. ವಜ್ರನಾಭಿಯು (ಮಹಾಬಲನ ಜನ್ಮ) ಚಕ್ರವರ್ತಿಯಾಗಿ ಬಹುಕಾಲ ರಾಜ್ಯವಾಳಿ ಕೊನೆಗೆ ವೈರಾಗ್ಯದಿಂದ ದೀಕ್ಷೆ ತೆಗೆದುಕೊಂಡು ಮುನಿಯಾದರು. ಆಗ ಶೋಡಷ ಕಾರಣ ಭಾವನಾರಾಧನೆ ಯನ್ನು ಕೇವಲಿಗಳ ಪಾದಮೂಲದಲ್ಲಿ ಭಾವಿಸಿ-ಆರಾಧಿಸಿ ತೀರ್ಥಂಕರ ಪದವಿಯ ಪುಣ್ಯಕಟ್ಟಿಕೊಂಡು ಸನ್ಯಾಸ ವಿಧಿಯಿಂದ ಸಮಾಧಿಯಾಗಿ ಸರ್ವಾರ್ಥಸಿದ್ಧಿಯ ಅಹಮಿಂದ್ರನಾದನು. ಅಲ್ಲಿ ಸುಖವಾಗಿ 33 ಸಾಗರ ಕಾಲವಿದ್ದನು. ಶ್ರೀಮತಿಯ ಜನ್ಮ ಧನದೇವನೂ, ಹಿಂದೆ ಹುಲಿ ಮುಂತಾದವರ ಜನ್ಮಗಳೂ ಒಟ್ಟಿಗೆ ಸಾಗಿ ಅವರೂ ಸರ್ವಾರ್ಥಸಿದ್ಧಿಯಲ್ಲಿ ಅಹಮಿಂದ್ರರಾದರು.

ಇತ್ತ ಜಂಬೂದ್ವೀಪದ ಭರತ ಕ್ಷೇತ್ರದಲ್ಲಿ ಅವಸರ್ಪಿಣೀಕಾಲದ ನಾಲ್ಕನೆಯ ಭಾಗವಾದ ದುಷಮಸುಷಮಾ ಕಾಲದಲ್ಲಿ ಜಘನ್ಯ ಭೋಗಭೂಮಿಯ ಸ್ಥಿತಿಯು ಕಳೆದು ಕರ್ಮ ಭೂಮಿಯ ಸ್ಥಿತಿಯು ಪ್ರಾರಂಭವಾಯಿತು. ಆಗ ಕ್ರಮವಾಗಿ 14 ಮಂದಿ ಮನುಗಳು ಹುಟ್ಟಿ ಜನರಿಗೆ ಆಯಾಕಾಲದ ಪರಿಸ್ಥಿತಿಯ ಅರಿವು ಮಾಡಿಕೊಡುತ್ತಿದ್ದರು. ಕೊನೆಯ ಮನು ನಾಭಿರಾಯ, ಈತನ ಪತ್ನಿ ಮರುದೇವಿ ಇವರು ಅಯೋಧ್ಯೆಯಲ್ಲಿದ್ದರು.

ಮರುದೇವಿಯು ಒಮ್ಮೆ 16 ರೀತಿಯ ಶುಭ ಸ್ವಪ್ನಗಳನ್ನು ಕಂಡಳು. ಆಗ ಸರ್ವಾರ್ಥ ಸಿದ್ಧಿಯಲ್ಲಿದ್ದ ಅಹಮಿಂದ್ರನು ವಜ್ರನಾಭಿಯ ಜನ್ಮ ಬಂದು ಮರುದೇವಿಯ ಗರ್ಭಸೇರಿದನು. ಅಂದು ಆಷಾಢ ಕೃಷ್ಣ ಬಿದಿಗೆಯ ತಿಥಿಯಾಗಿತ್ತು. ದೇವೇಂದ್ರಾದಿ ಸುರರು ಬಂದು ಗರ್ಭಾವತರಣ ಕಲ್ಯಾಣ ಮಾಡಿದರು. ಈ ಮುಂಚೆಯೇ ತೀರ್ಥಾಧೀಶ ಪುಣ್ಯಾತ್ಮ ಭೂಲೋಕದಲ್ಲಿ ಜನ್ಮ ತಾಳುತ್ತಾನೆಂದು ಅಯೋಧ್ಯೆಯನ್ನು ನಿರ್ಮಾಣ ರತ್ನವೃಷ್ಟಿ ಮುಂತಾದವುಗಳನ್ನು ಮಾಡಿದರು. ಇದು ಆಗ ಜನಿಸುವ ತೀರ್ಥಾಧೀಶನ ಪುಣ್ಯವಿಶೇಷವಾಗಿತ್ತು.

ಮರುದೇವಿಯು ಗರ್ಭ ಧರಿಸಿದಾಗ ಶ್ರೀ ಹ್ರೀ ಮುಂತಾದ ದೇವಿಯರು ಬಂದು ಆಕೆಯ ಸೇವೆಗೆ ತೊಡಗಿದರು. ಚೈತ್ರ ಬಹುಳ ನವಮಿಯಂದು ಮರುದೇವಿಯು ಪವಿತ್ರ ಪುತ್ರನನ್ನು ಹಡೆದಳು. ಕೂಡಲೇ ದೇವತೆಗಳು ಧಾವಿಸಿ ಬಂದು ಆ ಶಿಶುವನ್ನು ಕೊಂಡೊಯ್ದು ದೇವ ಲೋಕದ ಗಜ ಐರಾವತದ ಮೇಲೆ ಕೂರಿಕೊಂಡು ಉತ್ಸವ ಸಹಿತ ಮೇರು ಪರ್ವತದ ಪಾಂಡುಕಶಿಲೆಗೆ ಹೋದರು. ಅಲ್ಲಿ ಆ ಶಿಶುವನ್ನು

ವಿರಾಜಮಾನ ಮಾಡಿ ಕ್ಷೀರ ಸಮುದ್ರ ಜಲದಿಂದ ಅಭಿಷೇಕ ಮಾಡಿದರು. ಇದೇ ವೈಭವದ ಜನ್ಮಾಭಿಷೇಕ ಕಲ್ಯಾಣ. ನಂತರ ಬಾಲಲೀಲೋತ್ಸವ ಪೂರ್ವಕ ಅರಮನೆಗೆ ಬಂದು ಆ ಶಿಶುವಿನ ತಂದೆ ತಾಯಿಯರನ್ನು ಹೊಗಳಿ ಪೂಜಿಸಿದರು. ಇಂತಹ ಪುಣ್ಯ-ಪಾವನ-ತೀರ್ಥಾಧೀಶ ನನ್ನು ಪುತ್ರನನ್ನಾಗಿ ಪಡೆದ ನೀವೇ ಧನ್ಯರೆಂದು ಕೊಂಡಾಡಿದರು. ಆ ಶಿಶುವಿಗೆ ವೃಷಭನಾಥನೆಂದು ನಾಮಕರಣ ಮಾಡಿದರು. ಕಾರಣ ಅವರ ಎಡ ಕಾಲ ಉಂಗುಷ್ಟದಲ್ಲಿ ವೃಷಭ ಚಿಹ್ನೆ ಇತ್ತು. ಆದ್ದರಿಂದ ಇವರ ಲಾಂಛನ ವೃಷಭ ಆಯಿತು.

ವೃಷಭನಾಥರು ಜನ್ಮದಿಂದಲೇ ಮತಿ, ಶ್ರುತಿ, ಅವಧಿ ಜ್ಞಾನಧಾರಿಗಳಾಗಿದ್ದರು. ಲೀಲಾಜಾಲವಾಗಿ ಬಾಲ್ಯವನ್ನು ಕಳೆದರು. ಅವರಿಗೆ 84 ಲಕ್ಷ ಪೂರ್ವ ಆಯುಷ್ಯವಿತ್ತು 500 ಬಿಲ್ಲಿನಷ್ಟು ಎತ್ತರವಿದ್ದರು. ವಜ್ರಕಾಯ ಶರೀರಿಗಳಾಗಿದ್ದರು. ಸಮಚತುರ ಸ್ರವಾದ ದಿವ್ಯ ಸುಂದರ ದೇಹಿಗಳಾಗಿದ್ದರು. ಅವರ ವಂಶ ಇಕ್ಷ್ವಾಕು ಎಂಬ ಪವಿತ್ರವಾದ ವಂಶ.

ಇವರಿಗೆ ಮದುವೆಯ ವಯಸ್ಸು ಬಂದಾಗ ನಾಭಿರಾಜ ಮರುದೇವಿಯರು ಯಶಸ್ವತಿ-ಸುನಂದಾ ಎಂಬ ಯೋಗ್ಯ ವಧುಗಳೊಂದಿಗೆ ವೃಷಭನಾಥರ ವಿವಾಹ ಮಾಡಿದರು. ವೃಷಭನಾಥರಿಗೆ ಆದಿನಾಥರೆಂದೂ, ಪುರುದೇವರೆಂದೂ ಕರೆದರು. ಇವರು ಈ ವರ್ತಮಾನಕಾಲದ ಪ್ರಥಮ ತೀರ್ಥಂಕರು. ಇವರಿಗೆ ಕ್ರಮವಾಗಿ ಯಶಸ್ವತಿ ದೇವಿಯಲ್ಲಿ ಭರತ, ವೃಷಭಸೇನ ಮೊದಲಾಗಿ 99 ಮಂದಿ ಪುತ್ರರೂ, ಬ್ರಾಹ್ಮೀ ಎಂಬ ಓರ್ವ ಪುತ್ರಿಯೂ ಜನಿಸಿದರು. ಹಾಗೆಯೇ ಸುನಂದಾ ದೇವಿಯಲ್ಲಿ ಬಾಹುಬಲಿ ಎಂಬ ಓರ್ವ ಪುತ್ರನೂ, ಸುಂದರಿ ಎಂಬ ಓರ್ವ ಪುತ್ರಿಯೂ ಜನಿಸಿದ್ದರು. ಇವರಿಗೆಲ್ಲಾ ವೃಷಭನಾಥರು ಸುಯೋಗ್ಯ ವಿದ್ಯೆಗಳನ್ನು ಕಲಿಸಿದರು. ಬ್ರಾಹ್ಮಿಗೆ ಅಕ್ಷರ ವಿದ್ಯೆಯನ್ನೂ, ಸುಂದರಿಗೆ ಗಣಿತ ವಿದ್ಯೆಯನ್ನು ಹೇಳಿಕೊಟ್ಟರು.

ಹಿಂದೆ ವಜ್ರಜಂಘನ ಮಂತ್ರಿಯಾಗಿದ್ದ ಮತಿವರನು ಭರತನಾಗಿಯೂ, ಸೇನಾಪತಿಯಾಗಿದ್ದ ಅಕಂಪನನು ಬಾಹುಬಲಿಯಾಗಿಯೂ, ಪುರೋಹಿತನಾಗಿದ್ದ ಆನಂದನೂ ವೃಷಭಸೇನನಾಗಿಯೂ, ರಾಜಶ್ರೇಷ್ಠಿಯು ಅನಂತವೀರ್ಯನೆಂದೂ ವೃಷಭನಾಥರಿಗೆ ಮಕ್ಕಳಾದರು. ಹಾಗೆಯೇ ಹಿಂದೆ ದಾನಾನುಮೋದನದ ಪುಣ್ಯದಿಂದ ದೇವಾದಿ ಗತಿಗಳಲ್ಲಿ ಜೊತೆ ಜೊತೆಗೆ ಸಾಗಿದ್ದ ಹುಲಿ, ಹಂದಿ, ಕಪಿ, ಮುಂಗಸಿಗಳ ಜನ್ಮವು ಈಗ ವೃಷಭನಾಥರಿಗೆ ಕ್ರಮವಾಗಿ ಅನಂತಸೇನ, ಅಚ್ಯುತ, ವೀರ, ಸುವೀರ ಎಂಬ ಮಕ್ಕಳಾಗಿ ಜನಿಸಿದರು. ಈ ಜೀವಿಗಳು ಕ್ರಮವಾಗಿ ಆತ್ಮ ಸಂಸ್ಕಾರ ಹೊಂದಿ



ಮೇಲೇರುತ್ತಿದ್ದವು. ಹಾಗೆಯೇ ಹಿಂದೆ ಶ್ರೀಮತಿಯಾಗಿದ್ದ ಜನ್ಮವು ಈಗ ಹಸ್ತಿನಾಪುರದ ರಾಜ ಸೋಮಪ್ರಭನ ತಮ್ಮನಾದ ಶ್ರೇಯಾಂಸನಾಗಿ ಜನಿಸಿದನು.

ವೃಷಭನಾಥರು ಇಷ್ಟು ದೊಡ್ಡ ಪರಿವಾರದಲ್ಲಿ ಬಹುಕಾಲ ಸುಖವಾಗಿದ್ದರು. ಆ ಕಾಲಕ್ಕೆ ಜನಗಳಿಗೆ ಜೀವನೋಪಾಯವನ್ನು ಕಲಿಸಬೇಕಾಗಿತ್ತು. ಏಕೆಂದರೆ ಆ ಹಿಂದೆ ಕಲ್ಪವೃಕ್ಷಗಳಿಂದ ಅವರಿಗೆ ಬೇಕಾದ ಸಾಮಗ್ರಿಗಳು ದೊರೆಯುತ್ತಿದ್ದವು. ಅವು ಆ ಕಾಲಕ್ಕೆ ಮರೆಯಾದವು. ಆಗ ಕಂಗಾಲಾಗಿದ್ದ ಜನರಿಗೆ ಸಮಾಧಾನ ಹೇಳಿ ಅಸಿ, ಮಸಿ, ಕೃಷಿ, ಶಿಲ್ಪ, ವಾಣಿಜ್ಯ, ವಿದ್ಯೆ ಎಂಬ ಆರು ರೀತಿಯ ಕ್ರಿಯೆಗಳನ್ನು ತಿಳಿಸಿದರು. ಅದರಂತೆ ಜನಗಳು ಸುಖವಾಗಿ ಜೀವನ ಸಾಗಿಸುತ್ತಿದ್ದರು. ಇದರಿಂದ ವೃಷಭನಾಥರಿಗೆ ಆದಿಬ್ರಹ್ಮನೆಂದು ಕರೆದರು. ಭರತ ಖಂಡವನ್ನು ರಾಜ್ಯ-ಉಪ ರಾಜ್ಯ-ಊರುಕೇರಿಗಳಾಗಿ ವಿಂಗಡಿಸಿ ಅಲ್ಲಲ್ಲಾ ರಾಜರುಗಳನ್ನು ನೇಮಿಸಿ ಆಡಳಿತ ನಡೆಸಲು ಬೇಕಾದ ಮಾರ್ಗದರ್ಶನ ನೀಡಿದರು. ಅಂತೆಯೇ ತಮ್ಮ ಮಕ್ಕಳಿಗೆ ರಾಜ್ಯಗಳನ್ನು ನೀಡಿ ರಾಜ್ಯಾಡಳಿತ ನಡೆಸಲು ನೇಮಿಸಿದರು. ಭರತನಿಗೆ ಅಯೋಧ್ಯೆಯನ್ನು ಬಾಹುಬಲಿಗೆ ಪೌದನಾಪುರವನ್ನು ನೀಡಿದರು. ಅವರೆಲ್ಲಾ ಅನ್ಯೋನ್ಯರಾಗಿದ್ದು ಸ್ವತಂತ್ರರಾಗಿ ರಾಜ್ಯಾಡಳಿತ ನಡೆಸುತ್ತಿದ್ದರು. ದೇಶದ ಕಾರ್ಯಗಳು ಸುಗಮವಾಗಿ ಸಾಗಲು ಕೆಲವು ವರ್ಣಾಶ್ರಮಗಳನ್ನು ಮಾಡಿದರು. ರಾಜ್ಯಾಡಳಿತ ಮಾಡುವವರು ಕ್ಷತ್ರಿಯರೆಂದೂ, ವ್ಯಾಪಾರ, ವ್ಯವಸಾಯ ಮಾಡುವುದನ್ನು ವೈಶ್ಯರೆಂದೂ, ಎಲ್ಲರಲ್ಲಿ ಹೊಂದಿಕೊಂಡು ಕೆಲಸ-ಕಾರ್ಯ ಮಾಡುತ್ತಾ ಸೇವಾ ವೃತ್ತಿಯಲ್ಲಿದ್ದವರನ್ನು ಶೂದ್ರರೆಂದೂ ಕರೆದರು. ಇದು ಪಂಗಡ-ಜಾತಿಗಳಾಗಿರಲಿಲ್ಲ ವೃತ್ತಿ ಪ್ರಧಾನವಾದ ವ್ಯವಸ್ಥೆಯಾಗಿತ್ತು.

ಬಹುಕಾಲ ವೃಷಭನಾಥರು ಸುಖವಾಗಿ ಕಾಲಯಾಪನೆ ಮಾಡುತ್ತಿರುವಾಗ ಒಮ್ಮೆ ದೇವೇಂದ್ರನು ವೃಷಭನಾಥರ ಒಡ್ಡೋಲಗದಲ್ಲಿ ದೇವಲೋಕದ ಪ್ರಸಿದ್ಧ ನರ್ತಕಿಯಾಗಿದ್ದ ನೀಲಾಂಜನೆಯ ನೃತ್ಯವನ್ನು ವಿನೋದಕ್ಕಾಗಿ, ಮನೋರಂಜನೆಗಾಗಿ ಏರ್ಪಡಿಸಿದನು. ಆದರೆ ಆ ನೀಲಾಂಜನೆಯ ಆಯುಷ್ಯ ಆಗಲೇ ಮುಗಿದು ಆಕೆ ಅದೃಶ್ಯವಾದಳು. ಆಗ ರಸಭಂಗವಾಗದಿರಲೆಂದು ದೇವೇಂದ್ರನು ಆ ನರ್ತಕಿಯ ಜಾಗದಲ್ಲಿ ಬೇರೊಬ್ಬ ದೇವಿಯನ್ನು ನೇಮಿಸಿ ನೃತ್ಯ ಮುಂದುವರಿಸಿದನು. ಈ ಬದಲಾವಣೆ ಬೇರಾರಿಗೂ ಗೊತ್ತಾಗಲಿಲ್ಲ. ಆದರೆ ಸೂಕ್ಷ್ಮಮತಿಗಳಾದ ವೃಷಭನಾಥರಿಗೆ ಗೊತ್ತಾಯಿತು. ಜೀವಿಗಳ ಜೀವನದ ಅಸ್ಥಿರತೆ-ಸಂಸಾರದ ಅಸಾರತೆ ಗೊತ್ತಾಗಿ ಅದೇ ಅವರಿಗೆ ವೈರಾಗ್ಯಕ್ಕೆ ಕಾರಣವಾಯಿತು. ಕೂಡಲೇ ನಿರ್ವೇಗ ಪಾರಾಯಣರಾಗಿ ರಾಜ್ಯಾಡಳಿತವನ್ನು ಹಿರಿಯ ಮಗ ಭರತನಿಗೆ ವಹಿಸಿ ದೀಕ್ಷೆಗೆ

ಮನಮಾಡಿದರು. ಆಗ ಲೋಕಾಂತಿಕ ದೇವತೆಗಳು ಬಂದು ಅವರ ವೈರಾಗ್ಯವನ್ನು ದೃಢ ಮಾಡುವ ಬೋಧನೆ ಮಾಡಿದರು.

ವೃಷಭನಾಥರು ದೀಕ್ಷಾಬದ್ಧರಾಗಿ ದಿಗಂಬರ ಯತಿಗಳಾದರು ದೇವತೆಗಳು ಬಂದು ದೀಕ್ಷಾಕಲ್ಯಾಣ ಮಾಡಿದರು. ಅಂದು ಚೈತ್ರ ಕೃಷ್ಣನವಮಿತಿಥಿಯಾಗಿತ್ತು.

ಆರು ತಿಂಗಳವರೆಗೂ ಉಪವಾಸವಿದ್ದ ವೃಷಭನಾಥರು ಆಹಾರಕ್ಕೆ ಹೊರಟರು. ಆದರೆ ಆಗ ಆಹಾರದಾನದ ವಿಧಿ ಜನಕ್ಕೆ ಗೊತ್ತಿಲ್ಲದ ಕಾರಣ ಅವರಿಗೆ ಆಹಾರ ಸಿಗಲಿಲ್ಲ. ಮತ್ತೆ ಆರು ತಿಂಗಳ ನಂತರ ಆಹಾರಕ್ಕೆ ಹೊರಟರು. ವಿಹರಿಸುತ್ತಾ ಹಸ್ತಿನಾಪುರಕ್ಕೆ ಬಂದರು. ಅಲ್ಲಿ ಶ್ರೇಯಾಂಸ ರಾಜನು (ಶ್ರೀಮತಿಯ ಜನ್ಮ) ಆಹಾರದಾನದ ವಿಧಿಯನ್ನು ತಿಳಿದಿದ್ದನು. ಅವನು ವೃಷಭನಾಥರಿಗೆ ವಿಧಿಪೂರ್ವಕನಾಗಿ ಇಕ್ಷುರಸದ ಆಹಾರವನ್ನು ನೀಡಿದನು. ಅದರಿಂದ ಅವನಿಗೆ ದಾನ ಶ್ರೇಯಾಂಸನೆಂದೇ ಹೆಸರಾಯಿತು. ಆ ದಿನ ಅಕ್ಷಯತದಿಗೆ ಎಂದು ಪ್ರಸಿದ್ಧವಾಯಿತು. (ವೈಶಾಖಶುದ್ಧ ತದಿಗೆ).

ಬಹುಕಾಲ ಘೋರತಪಸ್ಸು, ಧ್ಯಾನದಲ್ಲಿ ನಿರತರಾಗಿದ್ದ ವೃಷಭನಾಥರು ತನ್ನಾತ್ಮನಿಗೆ ಅನಾದಿಕಾಲದಿಂದಲೂ ಅಂಟಿ ಬಂದಿದ್ದ ಜ್ಞಾನಾವರಣೀಯ, ದರ್ಶನಾವರಣೀಯ ಮೋಹನೀಯ ಅಂತರಾಯವೆಂಬ ಘಾತೀಯ ಕರ್ಮಗಳನ್ನು ಗೆದ್ದು ಕೇವಲಜ್ಞಾನ ಹೊಂದಿದರು. ಅವರು ವೀತರಾಗರೂ, ಸಕಲ ದೋಷರಹಿತರೂ, ಸರ್ವಜ್ಞರೂ ಹಿತೋಪದೇಶಿಗಳೂ ಆಗಿದ್ದರು. ಆಗ ದೇವತೆಗಳು ಧಾವಿಸಿ ಬಂದು ಕೇವಲ ಜ್ಞಾನ ಕಲ್ಯಾಣ ಮಾಡಿ ಸಮವಸರಣವೆಂಬ ಧರ್ಮಸಭಾಭವನದ ನಿರ್ಮಾಣ ಮಾಡಿದರು.

ವೃಷಭನಾಥರು ಸಮವಸರಣದಲ್ಲಿ ವಿರಾಜಮಾನರಾಗಿ ಸಾವಿರ ವರ್ಷಗಳ ಕಾಲ ದೇಶ ದೇಶಗಳಲ್ಲಿ ವಿಹರಿಸಿ ಧರ್ಮಬೋಧೆ ಮಾಡಿದರು. ಅವರ ಸುಪುತ್ರ ಅನಂತವೀರ್ಯರೇ ಮೊದಲಾಗಿ 84 ಮಂದಿ ಗಣಧರರು ಸಮವಸರಣದಲ್ಲಿದ್ದು ಮುನಿಗಳ ಗುಂಪಿನ ಮುಖಂಡರಾದರು. ಇವರಲ್ಲಿ ಸೋಮಪ್ರಭ, ಶ್ರೇಯಾಂಸರೂ ಗಣಧರರಾಗಿದ್ದರು. ಗೋಮುಖ, ಚಕ್ರೇಶ್ವರಿ ಎಂಬ ಯಕ್ಷಯಕ್ಷಿಯರು ಚಾಮರಸೇವೆ ಮಾಡುತ್ತಿದ್ದರು.

ಇತ್ತ ಭರತನಿಗೆ ಅವನ ಪುಣ್ಯದಿಂದ ಆಯುಧ ಶಾಲೆಯಲ್ಲಿ ಚಕ್ರರತ್ನ ಉದ್ಭವವಾಯಿತು. ಅದರಿಂದ ಆತ ಚಕ್ರವರ್ತಿ ಎನಿಸಿ ದಿಗ್ವಿಜಯ ಮಾಡಿದನು. ಆತ ವಾಪಸ್ಸು ಬಂದಾಗ ಚಕ್ರರತ್ನ ಅಯೋಧ್ಯಾಪುರವನ್ನು ಪ್ರವೇಶ ಮಾಡದೇ ನಿಂತ



ಕಾರಣವನ್ನು ತಿಳಿದು ತನ್ನ ತಮ್ಮಂದಿರೆಲ್ಲರೂ ನನ್ನ ಚಕ್ರವರ್ತಿತ್ವವನ್ನು ಒಪ್ಪಿಕೊಂಡು ತನಗೆ ಅಧೀನರಾಗಿ ಕಪ್ಪ ಕಾಣಿಕೆ ಸಲ್ಲಿಸಬೇಕೆಂದು ಸಾರಿದನು. ಅವನ ಸ್ವಂತ ತಮ್ಮಂದಿರಾರೂ ಇದನ್ನು ಒಪ್ಪದೆ ಇದೇ ಕಾರಣವಾಗಿ ವೈರಾಗ್ಯ ಹೊಂದಿ ಮುನಿಗಳಾಗಿ ವೃಷಭನಾಥರ ಸಮವಸರಣ ಸೇರಿದರು. ಆದರೆ ಬಾಹುಬಲಿಯು ಭರತನೊಂದಿಗೆ ಯುದ್ಧ ಮಾಡಲು ಬಂದು ಧರ್ಮಯುದ್ಧದಲ್ಲಿ ಭರತನನ್ನು ಸೋಲಿಸಿದನು. ಕೋಪ-ಅವಮಾನ ಹೊಂದಿದ ಭರತನು ತನ್ನ ಚಕ್ರರತ್ನವನ್ನು ಬಾಹುಬಲಿಯ ಮೇಲೆ ಪ್ರಯೋಗ ಮಾಡಿದನು. ಆದರೆ ಯುದ್ಧದಲ್ಲಿ ಗೆದ್ದ ಬಾಹುಬಲಿಯನ್ನು ಚಕ್ರರತ್ನ ಏನನ್ನೂ ಮಾಡಲಿಲ್ಲ. ಭರತನ ಮಾತನ್ನು ಅದು ಪಾಲಿಸಲಿಲ್ಲ. ಇದರಿಂದ ಭರತನಿಗೆ ಬಹಳ ಅಪಮಾನವಾಗಿ ತಲೆತಗ್ಗಿಸಿ ನಿಂತನು. ಇದನ್ನು ಕಂಡ ಬಾಹುಬಲಿಗೆ ಮನಕರಗಿತು. ತಂದೆಗೆ ಸಮಾನನಾದ ಅಣ್ಣನಿಗೆ ಅಪಮಾನ ಮಾಡಿದ ದ್ರೋಹಿ ನಾನೆಂದು ನೊಂದನು. ಅದೇ ಕಾರಣವಾಗಿ ಆತನಿಗೆ ವೈರಾಗ ಬಂದಿತು. ಕೂಡಲೇ ರಾಜ್ಯಕೋಶಾದಿಗಳನ್ನೆಲ್ಲಾ ಭರತನಿಗೆ ಒಪ್ಪಿಸಿ ತಪೋವನದತ್ತ ಸಾಗಿದನು.

ವೃಷಭನಾಥರಲ್ಲಿ ದಿಗಂಬರ ದೀಕ್ಷೆಯನ್ನು ಕೈಗೊಂಡು ಕೈಲಾಸಗಿರಿಯ ತಪ್ಪಲಲ್ಲಿ ನಿಂತು ತಪಸ್ಸು ಮಾಡಲಾರಂಭಿಸಿದನು. ವರ್ಷ ಪೂರ್ತಿ ಉಪವಾಸವಿದ್ದು ತಪೋಧ್ಯಾನ ನಿರತನಾದನು. ಆತನ ಮೈಮೇಲೆ ಹುತ್ತ ಬೆಳೆಯಿತು. ಹಾವುಗಳು ಹರಿದಾಡಿದವು. ಗಿಡಬಳ್ಳಿಗಳು ಹಬ್ಬಿದವು. ಮಳೆ-ಗಾಳಿ-ಬಿಸಿಲು-ಚಳಿಗಳಿಗೆ ಲೆಕ್ಕಿಸದೆ ಉಗ್ರತಪಸ್ಸು ಮಾಡುತ್ತಿದ್ದ ಬಾಹುಬಲಿಗೆ ವರ್ಷವಾದರೂ ಕೇವಲ ಜ್ಞಾನವಾಗದಿರುವುದಕ್ಕೆ ಕಾರಣವನ್ನು ವೃಷಭನಾಥರಲ್ಲಿ ಕೇಳಿದ ಭರತನು ಬಾಹುಬಲಿಯ ಬಳಿ ಬಂದು ಆ ಮಹಾ ಮುನಿಗೆ ನಮಿಸಿ ಉಪದೇಶ ಮಾಡಿದನು. ಬಾಹುಬಲಿಯ ಮನಸ್ಸಿನಲ್ಲಿ ಇದ್ದ ಸಣ್ಣದೊಂದು ಕ್ಲೇಶವನ್ನು ನಿವಾರಿಸಿದನು (ತಾನು ಸರ್ವಸ್ವವನ್ನು ಭರತನಿಗೆ ಒಪ್ಪಿಸಿ ಬಂದೆನೆಂದು ತಿಳಿದಿದ್ದ ಬಾಹುಬಲಿಯು ತಾನು ನಿಂತು ತಪಸ್ಸು ಮಾಡುತ್ತಿರುವ ನೆಲವನ್ನು ಬಿಡಲಾಗಲಿಲ್ಲ. ಎಲ್ಲವನ್ನು ತ್ಯಾಗ ಮಾಡಿದಂತಾಗಲಿಲ್ಲವೆಂಬ ಕ್ಲೇಶವಿತ್ತು. ಇದರಿಂದ ಬಾಹುಬಲಿಗೆ ಧ್ಯಾನ ಸಿದ್ಧಿಸದೆ ಕೇವಲಜ್ಞಾನವಾಗಿರಲಿಲ್ಲ) ಕೂಡಲೇ ಕೇವಲಜ್ಞಾನವನ್ನು ಹೊಂದಿದರು. ಕೆಲಕಾಲಾನಂತರ ಮುಕ್ತಿಯನ್ನು ಹೊಂದಿದರು. ತನ್ನ ತಂದೆಗಿಂತಾ ಮೊದಲೇ ಮುಕ್ತಾತ್ಮನಾದನು ಈತನ ಕಠೋರ ನಿಲುವು, ತಪಸ್ಸುಗಳಿಂದ ಪ್ರಭಾವಿತನಾದ ಭರತನು ಬಾಹುಬಲಿಯ ಸುವರ್ಣ ಮೂರ್ತಿಯನ್ನು ಮಾಡಿಸಿ ಕೈಲಾಸಗಿರಿಯಲ್ಲಿ ಪ್ರತಿಷ್ಠಾಪಿಸಿ ಪೂಜಿಸಿದನು. ದೇವತೆಗಳು ಭಕ್ತಿಭಾವದಿಂದ ಬಾಹುಬಲಿ ಸ್ವಾಮಿಯ

ನಿರ್ವಾಣ ಕಲ್ಯಾಣವನ್ನು ಮಾಡಿದರು.

ವೃಷಭನಾಥರು ಬಹುಕಾಲ ವಿಹಾರ ಮಾಡಿ ಧರ್ಮೋಪದೇಶಗೈದು ಇನ್ನು ತಮ್ಮ ಆಯುಷ್ಯ 14 ದಿನ ಮಾತ್ರವಿದ್ದಾಗ ಸಮವಸರಣವನ್ನು ಬಿಟ್ಟು ಕೈಲಾಸ ಗಿರಿಯ ಶಿಖರ ಒಂದರಲ್ಲಿ ನಿಂತು ಯೋಗನಿರೋಧ ಮಾಡಿದರು. ಮಾಘಬಹುಳ ಚತುರ್ದಶಿಯ ದಿನ ಅಘಾತೀಯ ಕರ್ಮಗಳಾದ ಆಯುಷ್ಯ, ನಾಮ, ಗೋತ್ರ, ವೇದನಿಯಮಗಳನ್ನು ಕಳೆದುಕೊಂಡು ಮುಕ್ತರಾದರು. ದೇವತೆಗಳು ಅವರ ನಿರ್ವಾಣ ಕಲ್ಯಾಣವನ್ನು ಮಾಡಿ ಕೈಲಾಸ ಗಿರಿಯಲ್ಲಿ ಅವರ ಚರಣಪಾದುಕೆಯನ್ನು ಸ್ಥಾಪಿಸಿ ಪೂಜಿಸಿದರು.

ಇತ್ತ ಭರಚಕ್ರಿಯು ಅಯೋಧ್ಯೆಯಲ್ಲಿ ವೃಷಭನಾಥರ ಪ್ರತಿಮೆ ಮಾಡಿಸಿ ಪ್ರತಿಷ್ಠಾಪಿಸಿ ಪೂಜಿಸಿದನು. ದಾನ-ಸನ್ಮಾನ-ಪೂಜಾಕಾರ್ಯಗಳಿಗೆ ಯೋಗ್ಯರನ್ನು ಆರಿಸಿ ಅವರಿಗೆ ಜನಿವಾರ ಹಾಕಿ ಬ್ರಾಹ್ಮಣರೆಂಬ ವರ್ಣಾಶ್ರಮವನ್ನು ಸ್ಥಾಪಿಸಿದನು. ಒಮ್ಮೆ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಳ್ಳುತ್ತಿದ್ದಾಗ ಕೆನ್ನೆಯಲ್ಲಿ ನರೆಕೂದಲನ್ನು ಕಂಡು ಕೂಡಲೇ ವೈರಾಗ್ಯ ಹೊಂದಿ ಅರ್ಕಕೀರ್ತಿ ಎಂಬ ಮಗನಿಗೆ ರಾಜ್ಯವನ್ನಿತ್ತು ದೀಕ್ಷಾಧಾರಿಯಾದ ಸ್ವಲ್ಪ ಸಮಯದಲ್ಲೇ ಕೇವಲಜ್ಞಾನ ಹೊಂದಿ ಮುಕ್ತನಾದನು.

ಹೀಗೆ ಜಯವರ್ಮ, ಮಹಾಬಲ, ಲಲಿತಾಂಗ, ವಜ್ರಜಂಘ ಆರ್ಯ, ಶ್ರೀಧರ ದೇವ, ಸುವಿಧಿರಾಜ, ಅಚ್ಯುತೇಂದ್ರ, ವಜ್ರನಾಭಿಚಕ್ರವರ್ತಿ, ಸರ್ವಾರ್ಥಸಿದ್ಧಿಯ ಅಹಮಿಂದ್ರನಾಗಿದ್ದ ವೃಷಭನಾಥರು ಈ ಯುಗದ ಆದಿಯಲ್ಲಿ ಸರ್ವೋದಯ ಧರ್ಮವೆಂಬ ತೀರ್ಥವನ್ನು ಹರಿಸಿ ಜಗದೋದ್ಧಾರ ಮಾಡಿ ಮುಕ್ತಿ ಹೊಂದಿ ಪರಮಾತ್ಮರಾಗಿ ಪೂಜ್ಯರಾದರು.

ಶ್ರೀ ವೃಷಭನಾಥರ ಸಂಕ್ಷಿಪ್ತವಾದ ಈ ಚರಿತ್ರೆಯಿಂದ ನಾವು ತಿಳಿಯಬಹುದೇನೆಂದರೆ ಜೀವಿಯು ಕಾಲಲಬ್ಧಿ ಒದಗಿದಾಗ ಜಾಗೃತನಾಗಿ ಪ್ರಯತ್ನ-ಪುರುಷಾರ್ಥಗಳಿಂದ ಸಂಸ್ಕಾರ ಹೊಂದಬಹುದು. ಪತಿತನೂ ಪ್ರಯತ್ನದಿಂದ ಪಾವನನಾಗಿ ಪರಮಾತ್ಮನಾಗಬಹುದು. ಹುಲಿ-ಹಂದಿ ಮುಂತಾದ ತಿರ್ಯಂಚ ಪ್ರಾಣಿಗಳೂ ಕೂಡ ಜಿನಮುನಿಗಳ ದರ್ಶನ ಮಾಡಿ, ಆಹಾರದಾನವನ್ನು ಅನುಮೋದಿಸಿ, ಉಪದೇಶ ಕೇಳಿ ಆತ್ಮಸಂಸ್ಕಾರ ಹೊಂದಿದವು ಉತ್ತರೋತ್ತರ ಆತ್ಮೋನ್ನತಿ ಹೊಂದಿ ಪರಮಾತ್ಮ ಪದವಿಗೇರಿ ಪೂಜ್ಯರಾದವು. ಹೀಗೆ ಯಾರು ಬೇಕಾದರು ಅವಕಾಶ ದೊರೆತಾಗ ಧರ್ಮ ಜಾಗೃತರಾಗಿ ಸಮ್ಯಕ್ತ್ವವನ್ನು ಧರಿಸಿ



ಆತ್ಮೋನ್ನತಿಯನ್ನು ಹೊಂದಬಹುದು. ಪ್ರಯತ್ನದಿಂದ ಧರ್ಮಸಾಧನೆ ಮಾಡಿ ನಿಯಮದಿಂದ ಆತ್ಮಕಲ್ಯಾಣವನ್ನು ಹೊಂದಿ ಈ ಸಂಸಾರದಿಂದ ಪಾರಾಗಿ ನಿತ್ಯಾನಂದ ಸುಖಶಾಂತಿಯನ್ನು ಹೊಂದಬಹುದೆಂಬ ಬೋಧೆ ಈ ಕಥಾಸಾರದಿಂದ ತಿಳಿಯುತ್ತದೆ.

## 58. ಭರತಚಕ್ರಿಯ ಸುಖ-ದುಃಖ ಸಮೀಕ್ಷೆ

ಜನ್ಮ, ಜರಾ, ಮರಣವೆಂಬ ತಾಪತ್ರಯದಿಂದ ಕೂಡಿರುವ ಚತುರ್ಗತಿ ಭವಭ್ರಮಣ ಸಂಸಾರೀ ಜೀವನಿಗೆ ಸುಖದ ಅನುಭವ ಅಲ್ಪವಾಗಿಯೂ, ದುಃಖದ ಅನುಭವ ಹೆಚ್ಚಾಗಿಯೂ ಇದೆ. ದೊರೆಯುವ ಸುಖವಾದರೂ ಇಂದ್ರಿಯಜನಿತವಾದುದರಿಂದ ಅದು ಪರೋಕ್ಷ ಸುಖವೇ ಹೊರತು ಪ್ರತ್ಯಕ್ಷ ಸುಖವಲ್ಲ. ಸಚ್ಚಿದಾನಂದ ಜ್ಞಾನಸ್ವರೂಪಿಯಾದ ಆತ್ಮಾನಂದವೇ ಪ್ರತ್ಯಕ್ಷ ಸುಖ. ನರಕ, ತಿರ್ಯಂಚ ಗತಿಗಳಲ್ಲಿ ದುಃಖವೇ ದುಃಖ. ದೇವಗತಿಯಲ್ಲಿ ಸ್ವಲ್ಪ ಸುಖ ಉಂಟು. ಅದೂ ಆಯಸ್ಸು ಇರುವ ವರೆಗೆ. ಆದರೆ ಮಾನವಗತಿಯಲ್ಲಿ ಸುಖ ದುಃಖ ಮಿಶ್ರಣವುಂಟು. ನಿರಂತರವಾದ ಸುಖವಾಗಲೀ ಅಥವಾ ನಿರಂತರವಾದ ದುಃಖವಾಗಲೀ ಇರುವುದಿಲ್ಲ ಈ ಸುಖ-ದುಃಖಗಳು ಪುಸ್ತಕದ ಹಾಳೆಯನ್ನು ತಿರುವಿಹಾಕಿದಂತೆ ಒಂದಾದ ಮೇಲೊಂದರಂತೆ ಫಲಕ್ಕೆ ಬರುತ್ತವೆ. ಆದರೂ ಈ ಮನುಷ್ಯ ಭವದಲ್ಲಿ ಧರ್ಮದ ಆಶ್ರಯದಿಂದ ನಿರಂತರವಾದ ಸುಖದ ಸಾಧನೆಯನ್ನು ಸಾಧಿಸಿ ಸಿದ್ಧರಾಗಲೂ ಸಾಧ್ಯವಿದೆ. ಈ ಸುಖ-ದುಃಖಗಳನ್ನು ಸಮತೆಯಿಂದ ಅನುಭವಿಸಿ ಸ್ಥಿರವಾದ ಸುಖವನ್ನು ಸಂಪಾದಿಸಿದ ಮಾನವೋತ್ತಮರು ಅನೇಕರು ಆಗಿಹೋಗಿದ್ದಾರೆ.

ಸಂಪತ್ತು, ಬಲ, ಪರಾಕ್ರಮಗಳಿಂದ ಕೂಡಿದ್ದ ಪುಣ್ಯಪುರುಷರಾದ ಚಕ್ರವರ್ತಿಗಳೂ ಕೂಡ ಒಮ್ಮೊಮ್ಮೆ ಮನೋವೇದನೆಯ ದುಃಖವನ್ನನುಭವಿಸಿ ರುವುದನ್ನು ಪುರಾಣಗಳಲ್ಲಿ ಓದಿ ಕೇಳಿದ್ದೇವೆ. ಉದಾಹರಣೆಗೆ ಭರತ ಚಕ್ರವರ್ತಿಯು ಶ್ರೇಷ್ಠನೆನಿಸಿದ್ದ ಪುರಾಣಪುರುಷ. ಅವನ ಜೀವನದಲ್ಲಿಯೂ ಅನೇಕ ಎಡರು ತೊಡರುಗಳು ಬರುತ್ತಿದ್ದವು. ಆತ ಅವುಗಳನ್ನು ಸಹನೆಯಿಂದ ಅನುಭವಿಸಿ, ಕಡೆಗೊಮ್ಮೆ ಈ ಸಾಂಸಾರಿಕ ಸುಖವು ಅಸ್ಥಿರವಾದುದೆಂದು ತಿಳಿದು ನಿಜಸುಖದ

ಮಾರ್ಗದಲ್ಲಿ ನಡೆದು ಅದನ್ನು ಸಾಧಿಸಿ ಸಿದ್ಧಾತ್ಮನಾಗಿ ನಿಜಾನಂದೈಕರೂಪವಾದ ಪ್ರತ್ಯಕ್ಷ ಸುಖವನ್ನು ಪಡೆದನು.ಅವನ ಜೀವನದಲ್ಲಿ ಕಂಡುಬರುವ ಸುಖ-ದುಃಖದ ಘಟನೆಗಳಲ್ಲಿ ಒಂದೆರಡನ್ನು ಇಲ್ಲಿ ನಿರೂಪಿಸಲಾಗಿದೆ.ಭರತಚಕ್ರಿ ಸಾಮಾನ್ಯನೇ? ಅದನ್ನು ರತ್ನಾಕರ ಕವಿ ಹೀಗೆ ಹೇಳಿದ್ದಾರೆ:-

ಪುರುಪರಮೇಶನ ಹಿರಿಯ ಕುಮಾರನು।
ನರಲೋಕಕೊಬ್ಬನೆ ರಾಯ॥
ಮುರಿದು ಕಣ್ಣಟ್ಟರೆ ಕ್ಷಣಕೆ ಮುಕ್ತಿಯ ಕಾಂಬ।
ಭರತಚಕ್ರಿಯ ಹೇಳಲಳವೇ॥
ಹದಿನಾರನೆಯ ಮನು ಪ್ರಥಮ ಚಕ್ರೇಶ್ವರ।
ಸುದತಿಜನಕೆ ರಾಜಮದನ॥
ಚದುರರ ತಲೆಮಣಿ ತದ್ಭವಮೋಕ್ಷಸಂ।
ಪದನ ಬಣ್ಣಿಸಲೆನ್ನ ಹವಣೆ?॥

ಹೀಗೆ ಭರತನ ಗುಣಗಳನ್ನು ಎಷ್ಟು ವರ್ಣಿಸಿದರೂ ತೀರದು.

ಉದಯಾಚಲದಲ್ಲಿ ಉದಿಸುವ ಸೂರ್ಯನು ತನ್ನ ವಿಮಾನದಲ್ಲಿನ ಅಕೃತಿಮ ಚೈತ್ಯಾಲಯದಲ್ಲಿ ವಿರಾಜಮಾನವಾದ ರತ್ನಮಯ ಜಿನಬಿಂಬಕ್ಕೆ ಅರ್ಚನೆ ಮಾಡುತ್ತಿರುವುದನ್ನು ಭರತಚಕ್ರಿಯು ತನ್ನ ಉನ್ನತದ ಮಹಲ್ಲಿನ ಮಹಡಿಯ ಮೇಲೆ ನಿಂತು ನೋಡಿ ತಾನೂ ಭಕ್ತಿಯಿಂದ ಆ ಸೂರ್ಯ ವಿಮಾನದಲ್ಲಿ ಜಿನಬಿಂಬಕ್ಕೆ ವಂದಿಸುತ್ತಿದ್ದನಂತೆ. ಅಂದಾಗ ಆತನ ದೃಷ್ಟಿಬಲ ಎಂತಹುದು ಮತ್ತು ನಿರಂತರ ರಾಜಕೀಯ ಗೊಂದಲದಲ್ಲಿದ್ದು ಆಧ್ಯಾತ್ಮಿಕ ಕ್ರಿಯೆಗಳನ್ನು ಬಿಟ್ಟಿರಲಿಲ್ಲವೆಂಬುದು ಗೊತ್ತಾಗುತ್ತದೆ.

ಇಂತಹ ಪುಣ್ಯಶಾಲಿಗೆ ಒಮ್ಮೆಲೇ ಮೂರು ಸಂತೋಷದ ಸುದ್ದಿಗಳು ಕೇಳಿ ಬಂದವು. ಒಂದು ಕಡೆಯಿಂದ ಭಗವಾನ್ ವೃಷಭದೇವರಿಗೆ ಕೇವಲಜ್ಞಾನವಾಯಿತು ಎಂದೂ, ಇನ್ನೊಂದು ಕಡೆಯಿಂದ ತನ್ನ ಆಯುಧಶಾಲೆಯಲ್ಲಿ ಚಕ್ರರತ್ನ ಉದ್ಭವಿಸಿತೆಂದೂ, ಮತ್ತೊಂದು ಕಡೆಯಿಂದ ತನಗೆ ಪುತ್ರರತ್ನ ಜನನವಾಗಿದೆ ಎಂದೂ ಹರ್ಷವಾರ್ತೆಗಳು ಕೇಳಿಬಂದುವು, ಈ ಮೂರನ್ನೂ ಒಮ್ಮೆಲೇ ಕೇಳಿದ ಭರತನಿಗೆ ಆದ ಆನಂದಕ್ಕೆ ಪಾರವೇ ಇಲ್ಲ.

ಕ್ಷಣಹೊತ್ತು ಆನಂದದಲ್ಲಿ ಮೈಮರೆತಿದ್ದ ಆತನು ಈಮೂರರಲ್ಲಿ ಮೊದಲು ಯಾವ ಕಾರ್ಯ ಮಾಡಬೇಕೆಂದು ಯೋಚಿಸಿದನು. ಧರ್ಮ, ಅರ್ಥ, ಕಾಮ,



ಮೋಕ್ಷ ಎಂಬವು ಪುರುಷಾರ್ಥಚತುಷ್ಟಯಗಳು. ಇವುಗಳಲ್ಲಿ ಧರ್ಮ, ಅರ್ಥ, ಕಾಮ ಪುರುಷಾರ್ಥಗಳಂತೂ ಈಗ ನನಗೆ ಒದಗಿವೆ. ಅರ್ಥ ಮತ್ತು ಕಾಮಗಳು ಧರ್ಮದಿಂದ ಒದಗುತ್ತವೆ. ಅರ್ಥ ಎಂದರೆ ಸಂಪಾದನೆ, ಕಾಮ ಎಂದರೆ ಭೋಗ ಇವು ಧರ್ಮದಿಂದ ಪಡೆದುದಾದರೆ ಮತ್ತು ಇವನ್ನು ಧಾರ್ಮಿಕ ರೀತಿಯಲ್ಲಿ ಪಡೆದು ಅನುಭವಿಸುದಾದರೆ ಮೋಕ್ಷಕ್ಕೆ ಸಾಧನವಾಗುತ್ತವೆ. ಈಗ ಒದಗಿರುವ ಭಗವಾನರ ಕೇವಲಜ್ಞಾನವು ಧರ್ಮಪುರುಷಾರ್ಥದ ಫಲವಾಗಿದೆ. ಪುತ್ರೋತ್ಪತ್ತಿಯು ಕಾಮಪುರುಷಾರ್ಥದ ಫಲವಾಗಿದೆ. ಆದುದರಿಂದ ಈ ಮೂರು ಕಾರ್ಯಗಳಲ್ಲಿ ಪುಣ್ಯಪ್ರದವೂ ಮತ್ತು ಮೋಕ್ಷದಾಯಕವೂ ಆದ ಧರ್ಮಕಾರ್ಯವನ್ನು ಮೊದಲು ಮಾಡತಕ್ಕದ್ದು ಎಂದು ವೃಷಭದೇವರ ಕೇವಲಜ್ಞಾನ ಪೂಜೆ ಮಾಡಲು ಹೋದನು.

ಹೀಗೆ ರಾಜರ್ಷಿಯಂತಿದ್ದ ಭರತನ ದೈಹಿಕ ಬಲವೇನೂ ಸಾಮಾನ್ಯವಾಗಿರಲಿಲ್ಲ. ಈತನು ದಿಗ್ವಿಜಯಕ್ಕೆ ಹೊರಟು ಷಟ್‌ಖಂಡಗಳನ್ನು ಜಯಿಸಿಕೊಂಡು ಹಿಂದಿರುಗಿ ಬರುತ್ತಿದ್ದಾಗ ಒಮ್ಮೆ ಒಂದೆಡೆ ಬೀಡುಬಿಟ್ಟಿದ್ದನು. ಆದಿನ ರಾತ್ರಿ ಎಂದಿನಂತೆ ಯೋಗನಿರತನಾಗಿದ್ದು ಎಚ್ಚೆತ್ತಿದ್ದನು. ಸೈನ್ಯವೆಲ್ಲ ನಿದ್ರಿಸುತ್ತಿತ್ತು. ಬಹು ದೂರದಲ್ಲಿ ಇಬ್ಬರು ಸೈನಿಕರು ಗುಜು ಗುಜು ಗೊಣಗುವ ಸದ್ದು ಚಕ್ರಿಯ ಕಿವಿಗೆ ಬಿತ್ತು. ಅವರಾರೆಂದು ಇವನಿಗೆ ಅರಿವಾಯಿತು. ಹಾಗೆಯೆ ಆಲಿಸಿ ಕೇಳಿದ. 'ಈ ಸೈನ್ಯದ ಸಹಾಯದಿಂದ ಚಕ್ರಿಗೆ ಘನತೆಯುಂಟಾಗಿದೆ ನಮ್ಮಿಂದ ಇವನೂ ಒಬ್ಬ ಚಕ್ರಿ ಎನಿಸಿದ್ದಾನೆ. ಇಲ್ಲದಿದ್ದಲ್ಲಿ ಇವನೂ ಒಬ್ಬ ಸಾಮಾನ್ಯ ಮನುಷ್ಯನೇ ಎಂದ ಒಬ್ಬ. 'ಅಷ್ಟಲ್ಲದೆ ಮತ್ತೇನು?' ಎಂದ ಮತ್ತೊಬ್ಬ. ಅವರಾಡಿದ ಮಾತನ್ನು ಕೇಳಿದ ಚಕ್ರಿಗೆ ತನ್ನ ಪರಾಕ್ರಮದ ಪ್ರದರ್ಶನ ಮಾಡಬೇಕೆಂದು ಮನಸ್ಸಾಯಿತು. ಬೆಳಿಗ್ಗೆ ಪ್ರಾತರ್ವಿಧಿಗಳನ್ನೆಲ್ಲ ಮುಗಿಸಿ, ಸಭೆ ಕರೆದು, ಓಲಗದಲ್ಲಿ ಮಂಡಿಸಿ ತನ್ನ ಕಿರುಬೆರಳಿನ ನರ ಹಿಡಿದು ಡೊಂಕಾಗಿದೆ ಎಂದು ಹುಸಿಯಾಟವನ್ನು ಹೂಡಿದ. ಮುಖವನ್ನು ಸಪ್ಪೆ ಮಾಡಿಕೊಂಡು, 'ನೋವನ್ನು ಸಹಿಸಲಾರೆ. ಇದನ್ನು ನೆಟ್ಟಗೆ ಮಾಡಿ' ಎಂದು ನಟಿಸಿದ. ಔಷಧಿ ಲೇಪನ, ಮಂತ್ರತಂತ್ರಗಳ ಪ್ರಯೋಗಗಳಾವವೂ ಸಫಲವಾಗಲಿಲ್ಲ. ರಾಜ ವೈದ್ಯರೆಲ್ಲ ಕೈಬಿಟ್ಟರು. ಜಟ್ಟಿಗಳು ನೀವಲು ಯತ್ನಿಸಿ ವಿಫಲರಾದರು. ಯೋಚನೆಗೆ ಈಡಾದ ಹಿರಿಯರೆಲ್ಲ ಒಂದು ತೀರ್ಮಾನಕ್ಕೆ ಬಂದು ಬಂಗಾರದ ಒಂದು ದೊಡ್ಡ ಸರಪಳಿಯನ್ನು ತರಿಸಿ ಅದರ ಒಂದು ಕೊನೆಯ ಕೊಂಡಿಯನ್ನು ಕೊಂಕಿದ್ದ ಕಿರುಬೆರಳಿಗೆ ಸಂಧಿಸಿದರು. ತೇರಿನ ಸರಪಳಿಯನ್ನು ಹಿಡಿದು ಎಳೆಯುವಂತೆ ಸೈನಿಕರೆಲ್ಲ ಹಿಡಿದೆಳೆಯಲಾರಂಭಿಸಿದರು. ಆನೆ, ಕುದುರೆಗಳನ್ನು ಕಟ್ಟಿದ್ದರು. ಗಾವುದ ಗಾವುದ ಆಳತೆಯ ಉದ್ದ ನಿಂತು ಎಷ್ಟು

ಬಲ ಬಿಟ್ಟು ಎಳೆದರೂ ಬೆರಳು ಕದಲಲೊಲ್ಲದು. ಚಕ್ರಿಯು ಒಮ್ಮೆ ಬೆರಳನ್ನು ತನ್ನೆಡೆಗೆ ಎಳೆದನು. ಸರಪಳಿ ಹಿಡಿದಿದ್ದ ಸೈನ್ಯವೆಲ್ಲ ಹೊಟ್ಟೆ ಮೇಲಾಗಿ ಬಿದ್ದಿತು ನೋವಿನಿಂದ ತಡವರಿಸಿಕೊಂಡು ಎದ್ದ ಸೈನ್ಯವೆಲ್ಲ ನಿಸ್ಸಹಾಯಕರಾಗಿ ಕೈಕಟ್ಟಿ ನಿಂತಿತು ಆಗ ಭರತನು. 'ನಿಮ್ಮಿಂದಲ್ಲವೇ ನಾನೂ ಒಬ್ಬ ಚಕ್ರಿ? ಅದರಲ್ಲೂ ನಿಮ್ಮಿಬ್ಬರಿಂದಲೇ ನನ್ನ ಘನತೆ' ಎಂದು ರಾತ್ರಿ ಗೋಣಗಿದ್ದವರ ಕಡೆ ಕೈಮಾಡಿ ತೋರಿದನು. ಆಗ ಅವರು ತಲೆ ತಗ್ಗಿಸಿ ಭರತನಲ್ಲಿ ಕ್ಷಮೆ ಕೇಳಿದರು. ಅವರಾರೂ ಬೇರೆಯಲ್ಲ. ಭರತನ ಭಾವಮೈದುನರಾದ ನಮಿ ವಿನಮಿಯರು. ಆಗ ಭರತನ ಮಂತ್ರಿ ಬುದ್ಧಿಸಾಗರನು 'ಪ್ರಭು, ತಮ್ಮ ಬಲಗೆ ಕಿರುಬೆರಳಿನ ಕೊಂಕನ್ನು ಸರಿಪಡಿಸುವ ಸಾಮರ್ಥ್ಯ ತಮ್ಮ ಎಡಗೈ ಬೆರಳಿಗಿದೆಯೇ ಹೊರತು ಹುಲುಮಾನವರಾದ ನಮ್ಮಿಂದ ಸಾಧ್ಯವಿಲ್ಲ.' ಎಂದಾಗ ಚಕ್ರಿಯು ಮುಗುಳುನಗೆ ಬೀರುತ್ತ ಎಡಗೈಯಿಂದ ಕಿರುಬೆರಳನ್ನು 'ಗುರು ಹಂಸನಾಥಾಯ ಸ್ವಾಹಾ' ಎಂದು ಎಳೆದಾಗ ಅದು ಅನಾಯಾಸವಾಗಿ ನೆಟ್ಟಗಾಯಿತು. ಬಿದ್ದು ನೊಂದ ಪಡೆಗೆ ಬಂಗಾರದ ಸರಪಳಿಯನ್ನು ಹರಿದು ಹಂಚಿಕೊಟ್ಟು ಸಂತಸಗೊಳಿಸಿದನು.

ಇಂತಹ ಶಕ್ತಿ ಬಲಸಂಪನ್ನನೂ, ಷಟ್‌ಖಂಡಾಧಿ ಪತಿಯೂ, ಹದಿನಾಲ್ಕು ರತ್ನಗಳಿಗೆ ಒಡೆಯನೂ, ನವನಿಧಿಸಂಪನ್ನನೂ, ತೊಂಭತ್ತಾರು ಸಾವಿರ ಮಂದಿ ಪತ್ನಿಯರ ಸುಖಭೋಗಿಯೂ ಆದ ಭರತಚಕ್ರಿಗೆ ಹಲವಾರು ಮನೋವೇದನೆಯ ಪ್ರಸಂಗಗಳು ಜರುಗಿಹೋಗಿವೆ.

ಸಮಸ್ತ ಭರತಖಂಡವನ್ನು ಜಯಿಸಿದ ಭರತ ಚಕ್ರಿಯು ಹಿಮವತ್ ಪರ್ವತದ ವೃಷಭಾಚಲದ ಸಮೀಪಕ್ಕೆ ಹೋದನು. ಅಲ್ಲಿ ಹೊಳೆಯುವ ಶ್ವೇತ ಸ್ಫಟಿಕ ಶಿಲೆಯನ್ನು ಕಂಡು ಯೋಚಿಸುತ್ತಾನೆ. 'ನಾನು ಈ ಭರತಖಂಡದ ಮೊದಲ ಚಕ್ರವರ್ತಿ. 'ನಾನು ಈ ಭರತಖಂಡದ ಮೊದಲ ಚಕ್ರವರ್ತಿ. ತೀರ್ಥಂಕರರಾದ ಆದಿನಾಥರ ಪುತ್ರ. ನನ್ನ ಹೆಸರು ಈ ಶಿಲೆಯ ಮೇಲೆ ಅಚ್ಚಳಿಯದಂತಿರಲಿ' ಎಂದು ಕಾಕಿಣೀರತ್ನದಿಂದ ತನ್ನ ಹೆಸರನ್ನು ಕೆತ್ತಿಸಲು ಹೋದಾಗ ಅಲ್ಲಿ ಅಪರಿಮಿತ ಚಕ್ರವರ್ತಿಗಳ ಹೆಸರುಗಳು ಆ ಶಿಲೆಯ ಮೇಲೆ ತುಂಬಿಹೋಗಿದ್ದು ತನ್ನ ಹೆಸರನ್ನು ಬರೆಯಲು ಸ್ಥಳವೇ ಇರಲಿಲ್ಲ. ಅದನ್ನು ಕಂಡು ಚಕ್ರಿಯು ಚಕಿತನಾಗಿ ತನ್ನ ಗರ್ವಕ್ಕೆ ನಾಚಿಕೊಂಡು ಖಿನ್ನಮನಸ್ಕನಾದನು. 'ನನಗಿಂತಲೂ ಹಿಂದೆ ಅಸಂಖ್ಯಾತ ಕಲ್ಪ ಕಾಲದಲ್ಲಿ ಅನೇಕಾನೇಕ ಮಂದಿ ಚಕ್ರವರ್ತಿಗಳು ಆಗಿಹೋಗಿದ್ದಾರೆ' ಎಂದುಕೊಂಡು ಕೊನೆಗೆ ಒಬ್ಬ ಚಕ್ರಿಯ ಹೆಸರನ್ನು ಅಳಿಸಿ, ಅಲ್ಲಿ ತನ್ನ ಪ್ರಶಸ್ತಿಯನ್ನು ಬರೆಯಿಸಿ ಬಂದನು.



ದೃಷ್ಟಿಯಲ್ಲಿ ಸೂರ್ಯವಿಮಾನದಲ್ಲಿಯ ಜಿನಬಿಂಬವನ್ನು ನೋಡುವ ಸಾಮರ್ಥ್ಯವುಳ್ಳವನೂ, ಶಕ್ತಿಯಲ್ಲಿ ತನ್ನ ಕಿರುಬೆರಳಿನಿಂದ ತನ್ನ ಸೈನ್ಯವನ್ನೆಲ್ಲ ಆಟವಾಡಿಸಿದವನೂ, ಲವಣ ಸಮುದ್ರದವರೆಗೆ ತನ್ನ ಆಡಳಿತವನ್ನು ವಿಸ್ತರಿಸಿದವನೂ ಆದ ಚಕ್ರಿಯು ತನ್ನ ತಮ್ಮನೇ ಆದ ಬಾಹುಬಲಿಯಿಂದ ದೃಷ್ಟಿಯುದ್ಧ, ಮಲ್ಲಯುದ್ಧ, ಜಲಯುದ್ಧಗಳಲ್ಲಿ ಸೋತು ಅಪಮಾನ ಹೊಂದಿದನು. ಆಗ ಅವನಿಗೆ ಆದ ದುಃಖವನ್ನು ಹೇಳತೀರದು. ಇದೆಲ್ಲ ಕರ್ಮದ ವೈಚಿತ್ರ್ಯವಲ್ಲವೇ? ಇರಲಿ, ಬಾಹುಬಲಿಯು ಸಕಲವನ್ನೂ ತ್ಯಜಿಸಿ ವಿರಾಗಿಯಾಗಿ ತಪಸ್ಸನ್ನು ಮಾಡಿ ಮುಕ್ತಿ ಹೊಂದಿದನು.

ಕೆಲಕಾಲಾನಂತರ ಭರತಚಕ್ರಿಗೆ ತನ್ನ ಪತ್ನಿಯರಲ್ಲಿ ಒಮ್ಮೆಲೇ ಬಹಳಷ್ಟು ಮಂದಿ ಮಕ್ಕಳು ಹುಟ್ಟಿದರು. ಅವರೆಲ್ಲರಲ್ಲೂ ಮಾನವರಲ್ಲಿ ಕಂಡುಬರುವ ಯಾವ ಸಂಸ್ಕಾರವೂ, ರೀತಿ-ನೀತಿಗಳೂ ಕಂಡುಬರಲಿಲ್ಲ. ಅದಿರಲಿ, ಹುಟ್ಟಿದ ದಿನದಿಂದಲೂ ಮೂಗರಾಗಿಯೇ ಇದ್ದರು, ಹಾಲು ಕುಡಿಯುವುದಾಗಲೀ ಬಟ್ಟೆ ತೊಟ್ಟುಕೊಳ್ಳುವುದಾಗಲೀ ಬರುತ್ತಿರಲಿಲ್ಲ. ಅರಮನೆಯ ವೈಭವವನ್ನು ಬಹು ಆಶ್ಚರ್ಯ ಮತ್ತು ಕುತೂಹಲ ರೀತಿಯಲ್ಲಿ ನೋಡುತ್ತ ನಿಂತು ಬಿಡುತ್ತಿದ್ದರು. ಇಂತಹ ಮಕ್ಕಳನ್ನು ಪಡೆದ ಭರತನಿಗೆ ಬಹಳ ಮನೋವ್ಯಥೆಯಾಯಿತು, ನನ್ನಂಥವನಿಗೆ ಇಂತಹ ಮೂಗರೂ ಗಾಗರೂ ಆದ ಮಕ್ಕಳು ಹುಟ್ಟಿದರಲ್ಲ ಇವರನ್ನು ಹೇಗೆ ತಿದ್ದುವುದು? ಎಂದು ಚಿಂತಿಸಿದ. ಹೀಗೇ ಬಹುಕಾಲ ನೊಂದ ಮೇಲೆ ಒಮ್ಮೆ ಆ ಎಲ್ಲ ಮಕ್ಕಳನ್ನು ಕರೆದುಕೊಂಡು ಕೈಲಾಸಗಿರಿಯಲ್ಲಿದ್ದ ಆದಿನಾಥರ ಸಮವಸರಣಕ್ಕೆ ಹೋದನು. ಅಲ್ಲಿ ಬಹು ಪ್ರಯಾಸದಿಂದ ಆ ಮಕ್ಕಳನ್ನು ಮನುಷ್ಯ ಕೋಷ್ಠದಲ್ಲಿ ಕುಳ್ಳಿರಿಸಿದನು. ಅಲ್ಲಿ ಅಷ್ಟು ಜನರೆದುರಿನಲ್ಲಿ ತನ್ನ ಈ ಮಕ್ಕಳು ಮೂಗರು ಗಾಗರು ಏಕಾದರೆಂದು ಹೇಗೆ ಕೇಳುವುದು ಎಂದು ಪರಿ ತಪಿಸುತ್ತಿರುವಾಗಲೇ ಸರ್ವಜ್ಞರಾದ ಆದಿನಾಥರು ಭರತನ ಮನೋಗತವನ್ನು ತಿಳಿದು, 'ಭರತಾ! ನೀನೇಕೆ ಬಂದಿದ್ದೀಯೆ ಎಂದು ಗೊತ್ತಾಯಿತು. ಈ ನಿನ್ನ ಮಕ್ಕಳು ಏಕೆ ಹೀಗೆ ಮೂಗರೂ, ಗಾಗರೂ ಆದರು ಮತ್ತು ಇವರು ಸರಿಹೋಗಬಲ್ಲರೋ? ಎಂದು ಕೇಳಲು ಬಂದಿರುವೆಯಲ್ಲವೇ? ಇವರಿಂದಾಗಿ ಈ ವರೆಗೆ ನೀನು ಒಂದು ರೀತಿಯ ಮನೋವ್ಯಥೆಯನ್ನು ಹೊಂದಿದೆಯಲ್ಲವೇ? ಇದೆಲ್ಲ ಕರ್ಮದ ಕೈವಾಡ ಯಾವುದಕ್ಕೂ ಕಾಲ ಕೂಡಿ ಬರಬೇಕು ಕೇಳು, ಈ ನಿನ್ನ ಮಕ್ಕಳು ನಿಗೋದದಿಂದ ನೇರವಾಗಿ ಮನುಷ್ಯ ಪರ್ಯಾಯ ಪಡೆದು ನಿನಗೆ ಮಕ್ಕಳಾಗಿರುವರು. ನಿಗೋದದಲ್ಲಿ ಅನಂತಕಾಲ ಹುಟ್ಟಿ, ಸತ್ತು ಬರೀ ದುಃಖವನ್ನೇ ಅನುಭವಿಸಿದ ಇವರಿಗೆ ಮಾತಾಗಲೀ

ನಡೆನುಡಿಯಾಗಲೀ, ರೀತಿ-ನೀತಿಯಾಗಲೀ ಮರೆತುಹೋಗಿವೆ. ಕೋಟಿ ಕೋಟಿ ವರ್ಷಗಳ ಹಿಂದೆ ಇವರೂ ಮಾನವರಾಗಿದ್ದವರೇ. ಆಗ ತೀವ್ರವಾದ ಅನಂತಾನುಬಂಧೀಕ್ರೋಧ, ಮಾನ, ಮಾಯಾ, ಲೋಭ ಕಷಾಯಗಳಿಗೆ ಒಳಗಾಗಿ ಅಗ್ನಿ, ಗಾಳಿ, ನೀರು, ಬೆಂಕಿ, ವನಸ್ಪತಿಗಳೆಂಬ ಏಕೇಂದ್ರಿಯ ಸ್ಥಿತಿಯನ್ನು ಹೊಂದಿ ಹುಟ್ಟಿ, ಸತ್ತು, ಬಳಲಿ ಬಂದಿವೆ. ತೀರ್ಥಂಕರರ ತಪಃಸ್ಥಳ, ವಿಹಾರ, ಆಹಾರ ತೆಗೆದುಕೊಂಡಾಗ ಉಂಟಾಗುವ ಪಂಚಾಶ್ಚರ್ಯ ಮುಂತಾದುವುಗಳಿಗೆ ಸಿಲುಕಿ ಆಗ ಉಂಟಾದ ವಿಶೇಷ ಲಬ್ಧಿಯಿಂದ ತಮ್ಮ ನಿಗೋದೀಯ ಆಯು ತೀರಿದ ನಂತರ ನೇರವಾಗಿ ಮಾನವ ಪರ್ಯಾಯವನ್ನು ಹೊಂದಿವೆ. ಈಗ ಇವಕ್ಕೆ ತಮ್ಮ ಬಹುಕಾಲದ ಹಿಂದಿನ ಭವಗಳೆಲ್ಲ ಪರಿಚಯವಾಗುತ್ತಿವೆ. ಇದೀಗ ಮಾತಾಡುವರು. ಅಲ್ಲದೆ ತದ್ಭವ ಮೋಕ್ಷಗಾಮಿಗಳೂ ಕೂಡ ಆಗಿದ್ದಾರೆ'ಎಂದರು ಭಗವಾನರು.

ಇಂತಿಷ್ಟು ಭಗವಾನರ ವಾಣಿಯನ್ನು ಕೇಳಿದ ಆ ಎಲ್ಲ ಮಕ್ಕಳಿಗೂ ತಮ್ಮ ಭವಮಾಲೆಯ ಪರಿಚಯವಾಗಿ ಎಲ್ಲರೂ ಒಮ್ಮೆಲೇ ಎದ್ದು ನಿಂತರು. ಭಗವಾನರಿಗೆ ನಮಸ್ಕರಿಸಿ, 'ಹೇ ಭಗವಾನ್, ನಮಗೆ ನಮ್ಮತನದ ಅರಿವಾಯಿತು. ನಿಮ್ಮಿಂದ ನಾವು ಪುನೀತರಾದೆವು. ನಾವು ದೀಕ್ಷೆತೆಗೆದುಕೊಳ್ಳಲು ಅನುಮತಿ ನೀಡಿರಿ.' ಎಂದು ಒಂದೇ ಒಂದು ಸಲ ಅವರು ಮಾತನಾಡಿದರು. ಕೂಡಲೇ ಎಲ್ಲರೂ ತಮ್ಮ ವಸ್ತ್ರಾಭರಣಗಳನ್ನು ಕಳಚಿ ದಿಗಂಬರ ದೀಕ್ಷಾಬದ್ಧರಾದರು. ಇದನ್ನು ಕೇಳಿ ನೋಡಿದ ಭರತನಿಗೆ ಹರ್ಷ - ವಿಷಾದಗಳೆರಡೂ ಒಮ್ಮೆಲೇ ಆದುವು. ಸಂಸಾರದ ವಿಚಿತ್ರತೆಯನ್ನುಕಂಡು, ಭಗವಾನರಿಗೆ ವಂದಿಸಿ ತನ್ನ ಅರಮನೆಗೆ ಹಿಂದಿರುಗಿದನು. ಆ ದೀಕ್ಷಾನ್ವಿತರಾದ ಮಕ್ಕಳೆಲ್ಲ ಕಠಿಣ ತಪಸ್ಸು ಮಾಡಿ, ಮುಕ್ತಿಯನ್ನು ಪಡೆದರು.

ಬಹುಕಾಲಾನಂತರ ಭರತನು ಮೇಲ್ಕಂಡ ತನ್ನ ಜೀವನದಲ್ಲಿ ಘಟಿಸಿ ಹೋದ ಸುಖ-ದುಃಖಗಳನ್ನು ಸ್ಮರಿಸುತ್ತಿರುವಾಗಲೇ ತನಗೆ ಪಿತರೂ ಮತ್ತು ಅತ್ಯಂತ ಪ್ರಿಯರೂ ಆಗಿದ್ದ ಭಗವಾನ್ ವೃಷಭಸ್ವಾಮಿಯವರು ಮುಕ್ತಿ ಹೊಂದಿದರೆಂಬ ಸುದ್ದಿ ಬಂದಿತು. ಕೂಡಲೇ ಭರತನು ಕೈಲಾಸಗಿರಿಗೆ ಓಡಿದನು. ಅಲ್ಲಿ ಭಗವಾನರ ಅಚೇತನ ಶರೀರವನ್ನು ಕಂಡನು ದೇವತೆಗಳು ಬಂದು ನಿರ್ವಾಣಕಲ್ಯಾಣವನ್ನು ಮಾಡಿದರು. ಅಗ್ನೀಂದ್ರನು ಭಗವಾನರ ದೇಹವನ್ನು ದಹಿಸಿದನು. ಎಲ್ಲರೂ ಭಸ್ಮವನ್ನು ಹಣೆಯಲ್ಲಿ ಧರಿಸಿದರು. ನಂತರ ಭಗವಾನರ ಗುಣಗಾನಗೈದು ದೇವತೆಗಳು ತೆರಳಿದರು. ಇದೆಲ್ಲವನ್ನೂ ನೋಡುತ್ತಿದ್ದ ಭರತನು ತನ್ನ ಪ್ರಿಯ ಪಿತರ ವಿಯೋಗವನ್ನು ಸಹಿಸಲಾರದೆ ತಂದೆಯವರು ಮರಣ ಹೊಂದಿದರೆಂದು ಭ್ರಮಿಸಿ, ಮೋಹನೀಯ ಕರ್ಮದ ದೆಸೆಯಿಂದ ಅಜ್ಞಾನಿಯಂತೆ ಗೋಳಾಡಿದನು. ಭರತೇಶನ



ಜೀವಮಾನದಲ್ಲಿ ಇದೊಂದೇ ಬಾರಿ ಕಣ್ಣಲ್ಲಿ ನೀರು ಹಾಕಿದ ಪ್ರಸಂಗವೆಂದೇ ಹೇಳಬಹುದು. (ಆಗ ಅವನಿಗಾದ ದುಃಖವನ್ನು ವರ್ಣಿಸಲಸದಳವೆಂದು ಮಹಾಪುರಾಣಕರ್ತರುಗಳಾದ ಜಿನಸೇನರು ಹೇಳಿದ್ದಾರೆ.) ತನ್ನ ಪಿತರು ತನ್ನನ್ನು ಹೆತ್ತು, ಹೊತ್ತು, ಸಾಕಿ, ಸಲಹಿ, ಉಪದೇಶ ನೀಡಿ, ಮಾರ್ಗದರ್ಶಕರಾಗಿ, ಅತ್ಯಂತ ಪ್ರಿಯರಾಗಿ, ಉಪಕಾರಿಗಳಾಗಿದ್ದರೆಂದು ನೆನೆ ನೆನೆದು ಗೋಳಾಡುತ್ತಿದ್ದನು. ಇಂತಹ ವಿಷಮ ಪರಿಸ್ಥಿತಿಯಲ್ಲಿ ವೃಷಭಸೇನ ಗಣಧರರು ಭರತನನ್ನು ಸಮಾಧಾನ ಗೊಳಿಸುತ್ತ, 'ಭಗವಾನರು ಮೃತ್ಯುಹೊಂದಲಿಲ್ಲ. ಮೃತ್ಯುವನ್ನು ಗೆದ್ದು ಮುಕ್ತಿಯನ್ನು ಹೊಂದಿದರು' ಎಂದು ಹೇಳಿ ಮತ್ತೊಮ್ಮೆ ವೃಷಭನಾಥರೇ ಅದಿಯಾಗಿ ಅವರ ಎಲ್ಲ ಪರಿವಾರದವರ ಭವಾವಳಿಯನ್ನು ವಿವರಿಸಿದರು. ಮೋಹನೀಯ ಕರ್ಮದ ವೈಚಿತ್ರ್ಯವನ್ನು ತಿಳಿಸಿ ತತ್ತ್ವಬೋಧೆ ಮಾಡುತ್ತ -

ಪ್ರಾಗಕ್ಷಿಗೋಚರಃ ಸಂಪ್ರತ್ಯೇಷ ಚೇತಸಿ ವರ್ತತೇ।
ಭಗವಾಂಸ್ತತ್ರ ಕಃ ಶೋಕಃ ಪಶ್ಯೈನಂ ತತ್ರ ಸರ್ವದಾ॥

ಅಂದರೆ- ಹೇ ಭರತ, ಯಾವ ಭಗವಾನ್ ವೃಷಭರು ಮೊದಲು ನೇತ್ರೇಂದ್ರಿಯಕ್ಕೆ ಕಾಣುತ್ತಿದ್ದರೋ ಅವರು ಈಗ ಜ್ಞಾನಗೋಚರರಾಗಿ ಅಂತಃಕರಣದಲ್ಲಿ ವಿರಾಜಮಾನರಾಗಿದ್ದಾರೆ. ನೀನು ಆ ಭಗವಾನರನ್ನು ನಿನ್ನ ಮನೋಮಂದಿರದಲ್ಲಿ ಸದಾ ನೋಡಬಲ್ಲೆ. ಆದುದರಿಂದ ವೃಥಾ ಶೋಕಿಸಬೇಡ. ಒಳಗಣ್ಣನ್ನು ತೆರೆ' ಎಂದರು

ಆಗ ಭರತೇಶನ ಅಂತರ್ ದೃಷ್ಟಿ ತೆರೆಯಿತು. ಭಗವಾನರು ಸಿದ್ಧ ಪದವಿಯನ್ನು ಪಡೆದರೆಂದು ತಿಳಿದನು. ಅಂತರ್ ಮುಖಿಯಾಗಿ ಭಗವಾನರನ್ನು ಸುತ್ತಿಸಿ, ತೆರಳಿದನು. ಬಹುಕಾಲ ಸುಖವಾಗಿ ರಾಜ್ಯವಾಳಿದನು.

ಒಂದು ದಿನ ಭರತೇಶನು ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಳ್ಳುತ್ತಿದ್ದಾಗ ತಲೆಯಲ್ಲಿ ನರೆಗೂದಲನ್ನು ಕಂಡು ವೈರಾಗ್ಯಪರನಾದನು. ಕೂಡಲೇ ಅರ್ಕಕೀರ್ತಿಗೆ ಪಟ್ಟ ಕಟ್ಟಿ ದೀಕ್ಷೆ ತೆಗೆದು ಕೊಂಡನು. ಭೋಗಿಯಾದರೂ ಜೀವನುದ್ದಕ್ಕೂ ಯೋಗಿಯಂತೆಯೇ ಇದ್ದ ಭರತನು ದೀಕ್ಷೆ ತೆಗೆದುಕೊಂಡ ಕ್ಷಣವೇ ಕ್ರಮವಾಗಿ ಮನಃಪರ್ಯಯ, ಕೇವಲಜ್ಞಾನ ಉಂಟಾಗಿ ನಂತರ ಮೋಕ್ಷವನ್ನೂ ಪಡೆದನು.

ಹೀಗೆ ಅಗಣಿತ ಪುಣ್ಯಪುಂಜನಾದ ಭರತಚಕ್ರವರ್ತಿಯನ್ನು ದುಃಖ ಮತ್ತು ವೇದನೆಗಳು ಬಿಡದೆ ಕಾಡಿದವೆಂದ ಮೇಲೆ ಹುಲುಮಾನವರಾದ ನಮ್ಮಂತಹವರ

ಪಾಡೇನು? ಭರತೇಶನೇನೊ ಕೊನೆಗೂ ಈ ಸಂಸಾರದ ಅಸಾರತೆಯನ್ನು ಕಂಡು ಹೇಸಿ ನಿರ್ವೇಗಪರಾಯಣನಾಗಿ ಚಿರವಾದ ಸುಖಸಾನ್ನಿಧ್ಯವನ್ನು ತಲುಪಿದನು. ಈಗ ಅಂತಹ ತಾಳ್ಮೆ, ನೆಮ್ಮದಿ, ದೈಹಿಕಬಲ, ದೇಶ, ಕಾಲ, ಸ್ಥಿತಿ, ವರ್ತಮಾನಗಳಾವವೂ ಇಲ್ಲವಾದರೂ ಭರತೇಶನಂತಹ ಆದರ್ಶವನ್ನು ಸ್ಮರಿಸುತ್ತ ತೀರ್ಥೇಶರು ಹರಸಿದ ಧರ್ಮತೀರ್ಥ ಗಂಗೆಯಲ್ಲಿ ಮಿಂದು ಮುಂದೆ ಸಾಗಿ ರತ್ನತ್ರಯವೆಂಬ ಮೆಟ್ಟಿಲು ಹತ್ತಿ ಹೋದರೆ, ಮುಂದಿನ ಭವಗಳಲ್ಲಾದರೂ ಸತ್ಯ ಸುಖದಸ್ಥಾನವನ್ನು ತಲುಪಬಹುದಲ್ಲವೇ?

## 59. ಶ್ರೀ ಚಂದ್ರಪ್ರಭಸ್ವಾಮಿಯ ಸಂಕ್ಷಿಪ್ತ ಪುರಾಣ

**ಚಂದ್ರಪ್ರಭಂ ಚಂದ್ರಮರೀಚಿಗೌರಂ।**
**ಚಂದ್ರಂ ದ್ವಿತೀಯಂ ಜಗತೀವ ಕಾಂತಂ॥**
**ವಂದೇಭಿವಂದ್ಯಂ ಮಹತಮೃಷೀಂದ್ರಂ।**
**ಜಿನಂ ಜಿತಸ್ವಾಂತ ಕಷಾಯಬಂಧಂ॥**

ಈ ಪುಣ್ಯಶ್ಲೋಕವನ್ನು ಸ್ವಾಮಿ ಸಮಂತಭದ್ರಾಚಾರ್ಯರು ಕಂಚಿಯ ಶಿವಕೋಟ ರಾಜನ ಭೀಮಲಿಂಗ ದೇವಾಲಯದಲ್ಲಿ ಹೇಳುತ್ತಿದ್ದಾಗ ಶ್ರೀ ಜ್ವಾಲಾಮಾಲಿನೀ ದೇವಿಯ ಚಮತ್ಕಾರದಿಂದ ಶ್ರೀ ಚಂದಪ್ರಭರ ಪ್ರತಿಮೆಯು ಭೀಮಲಿಂಗದಲ್ಲಿ ಉದ್ಭವವಾಯಿತು. ಆಗ ಆಚಾರ್ಯರಿಗೆ ಒದಗಿದ್ದ ಉಪಸರ್ಗ ನಿವಾರಣೆಯಾಗಿ ಧರ್ಮ ಪ್ರಭಾವನೆಯಾಯಿತು.

ಚಂದ್ರನ ಕಿರಣದಂತೆ ಶಾಂತರೂ, ಶ್ವೇತ ವರ್ಣರೂ, ಲೋಕದಲ್ಲಿ ಅದ್ವಿತೀಯ ಚಂದ್ರನಂತಿರುವವರೂ, ಕೇವಲಜ್ಞಾನ ಪ್ರಭೆಯಿಂದ ಯುಕ್ತರೂ, ದೇವೇಂದ್ರಾದಿಗಳಿಂದ ವಂದಿತರೂ, ಗಣಧರ ಪರಮೇಷ್ಠಿಗಳಿಗೆ ಒಡೆಯರೂ, ಕ್ರೋಧಾದಿ ಕಷಾಯಗಳನ್ನು ಜಯಿಸಿದವರೂ, ಎಂಟನೇ ತೀರ್ಥಂಕರರೂ ಆದ ಶ್ರೀ ಚಂದ್ರನಾಥರಿಗೆ ನಮಸ್ಕರಿಸಿ ಅವರ ಸಂಕ್ಷಿಪ್ತ ಪುರಾಣವನ್ನು ಹೇಳುತ್ತೇನೆ.

ಈ ಮಧ್ಯ ಲೋಕದಲ್ಲಿ ಪುಷ್ಕರವರ ದ್ವೀಪದ ಪೂರ್ವ ದಿಕ್ಕಿನ



ಮೇರುಪರ್ವತದ ಪಶ್ಚಿಮ ವಿದೇಹ ಕ್ಷೇತ್ರದಲ್ಲಿ ಸೀತೋದಾ ನದಿಯ ಉತ್ತರ ತೀರದಲ್ಲಿ ಶ್ರೀಪುರವೆಂಬ ಪಟ್ಟಣವಿತ್ತು. ಅಲ್ಲಿನ ಅರಸು ಶ್ರೀಷೇಣ. ಆತನ ಪತ್ನಿ ಶ್ರೀಕಾಂತೆ. ಅವರಿಗೆ ಶ್ರೀವರ್ಮನೆಂಬ ಪುತ್ರನು ಹುಟ್ಟಿದನು. ಅವನು ಬೆಳೆದು ಸಕಲಕಲಾ ಪರಿಪೂರ್ಣನಾಗಿ ತನ್ನ ತಂದೆಯ ನಂತರ ರಾಜನಾಗಿ ಸುಖಭೋಗದಿಂದಿರುವಾಗ ಒಂದು ದಿನ ಆಷಾಢ ಮಾಸದ ಹುಣ್ಣಿಮೆಯ ರಾತ್ರಿ ಬೀಳುತ್ತಿರುವ ನಕ್ಷತ್ರವನ್ನು ಕಂಡು, ಭೋಗವಿಲಾಸದಲ್ಲಿ ವಿರಕ್ತನಾಗಿ, ತನ್ನ ಪುತ್ರನಿಗೆ ರಾಜ್ಯವನ್ನು ವಹಿಸಿ ಜಿನದೀಕ್ಷೆಯನ್ನು ಸ್ವೀಕರಿಸಿದನು. ಆತ ಬಹುಕಾಲ ತಪಸ್ಸು ಮಾಡಿ ಪರಿಣಾಮದಿಂದ ಮಡಿದು ಸೌಧರ್ಮ ಸ್ವರ್ಗದಲ್ಲಿ ಶ್ರೀಧರನೆಂಬ ದೇವನಾಗಿ ಹುಟ್ಟಿದನು. ಅಲ್ಲಿ ಹೊತ್ತು ತಂದ ಪುಣ್ಯಫಲವನ್ನು ಅನುಭವಿಸುತ್ತ ಬಹುಕಾಲವಿದ್ದನು.

ಆಗ ಈ ಧಾತಕೀಖಂಡ ದ್ವೀಪದ ಭರತಕ್ಷೇತ್ರದಲ್ಲಿ ಅಯೋಧ್ಯಾನಗರದಲ್ಲಿ ಅಜಿತಂಜಯನೆಂಬ ರಾಜನಿದ್ದನು. ಆತನ ಪತ್ನಿ ಅಜಿತಸೇನೆ. ಈ ದಂಪತಿಗಳಿಗೆ ಆ ಶ್ರೀಧರದೇವನು ಅಲ್ಲಿನ ಆಯುಷ್ಯ ಪೂರ್ತಿಯಾದ ನಂತರ ಬಂದು ಅಜಿತಸೇನನೆಂಬ ಮಗನಾಗಿ ಹುಟ್ಟಿದನು. ಈತನು ಈ ಕಾಲಕ್ಕೆ ಆ ಕ್ಷೇತ್ರದ ಚಕ್ರವರ್ತಿಯೆನಿಸಿ ಷಟ್ಖಂಡಧಿಪತಿಯಾಗಿ ಬಹುಕಾಲ ದಶವಿಧ ಭೋಗಗಳನ್ನು ಅನುಭವಿಸುತ್ತಿದ್ದನು, ಒಮ್ಮೆ ಮುನಿಗಳೊಬ್ಬರಿಗೆ ಆಹಾರದಾನ ಮಾಡಿ ಪಂಚಾಶ್ಚರ್ಯಗಳನ್ನು ಹೊಂದಿದುದರಿಂದ ಪೂರ್ವಭವದ ಸ್ಮರಣೆಯುಂಟಾಯಿತು. ಆದರಿಂದಲೇ ವೈರಾಗ್ಯವನ್ನು ಹೊಂದಿ ತನ್ನ ಮಗನಿಗೆ ರಾಜ್ಯವನ್ನು ಒಪ್ಪಿಸಿ, ಜಿನದೀಕ್ಷೆಯನ್ನು ಕೈಕೊಂಡು ಘೋರ ತಪಸ್ಸನ್ನು ಮಾಡಿ, ಆಯುಷ್ಯಾವಸಾನದಲ್ಲಿ ಸಮಾಧಿ ಮರಣ ಹೊಂದಿ 16ನೇ ಸ್ವರ್ಗದಲ್ಲಿ ಅಚ್ಯುತೇಂದ್ರನಾಗಿ ಜನಿಸಿದನು. ಅಲ್ಲಿ ಬಹುಕಾಲದ ವರೆಗೆ ದಿವ್ಯ ಭೋಗಗಳನ್ನ ಅನುಭವಿಸಿ,ಆಯುಷ್ಯದ ಕೊನೆಯಲ್ಲಿ ವಿಶುದ್ಧ ಸಮ್ಯಗ್ದರ್ಶನ ಉಳ್ಳವನಾಗಿ ಧಾತಕೀ ಖಂಡ ದ್ವೀಪದ ಮಂಗಲಾವತೀ ದೇಶದಲ್ಲಿ ರತ್ನಸಂಚಯ ನಗರದ ದೊರೆಯಾದ ಕನಕಪ್ರಭನಿಗೂ ಆತನ ಪತ್ನಿ ಕನಕಮಾಲೆಗೂ ಪದ್ಮನಾಭನೆಂಬ ಪುತ್ರನಾಗಿ ಜನಿಸಿದನು.

ಅಲ್ಲಿಯೂ ಮಾನವಜನ್ಮದ ಸಾರ್ಥಕತೆಯನ್ನು ಧರ್ಮಾರ್ಥಕಾಮಗಳನ್ನು ಅನುಭವಿಸಿ, ಮುಪ್ಪಿನ ಕಾಲದಲ್ಲಿ ದೀಕ್ಷೆಯನ್ನು ಕೈಗೊಂಡು ಏಕಾದಶಾಂಗ ಶಾಸ್ತ್ರವನ್ನು ತಿಳಿದು, ಷೋಡಶಭಾವನೆಗಳನ್ನು ಭಾವಿಸಿ ತೀರ್ಥಂಕರನಾಮ ಕರ್ಮವೆಂಬ ಪುಣ್ಯವನ್ನು ಗಳಿಸಿ, ಶುಭ ಪರಿಣಾಮದಿಂದ ಮಡಿದು ವೈಜಯಂತ ವಿಮಾನದಲ್ಲಿ ಅಹಮಿಂದ್ರನಾಗಿ ಜನಿಸಿದನು. ಅಲ್ಲಿಯೂ ದಿವ್ಯ ಸುಖಭೋಗಿಯಾಗಿ

ಆಯುಷ್ಯವನ್ನು ಕಳೆಯುತ್ತಿರುವಾಗ ಈ ಜಂಬೂದ್ವೀಪದ ಭರತವರ್ಷದ ಆರ್ಯಾಖಂಡದಲ್ಲಿ ಚಂದ್ರಪುರವೆಂಬ ಪಟ್ಟಣದಲ್ಲಿ ಇಕ್ಷ್ವಾಕುವಂಶಜನಾದ ಮಹಾಸೇನನು ರಾಜನಾಗಿದ್ದನು. ಆತನ ಪತ್ನಿ ಲಕ್ಷ್ಮಣಾದೇವಿ. ಆಕೆ ಒಮ್ಮೆ ಚೈತ್ರಮಾಸದ ಕೃಷ್ಣಪಕ್ಷದ ಪಂಚಮೀ ತಿಥಿಯಲ್ಲಿ ಬೆಳಗಿನ ಜಾವದಲ್ಲಿ 16 ಸ್ವಪ್ನಗಳನ್ನು ಕಂಡಳು. ಆ ಸಮಯದಲ್ಲಿ ವೈಜಯಂತ ವಿಮಾನದ ಅಹಮಿಂದ್ರನು ಅಲ್ಲಿಂದ ಚ್ಯುತನಾಗಿ ಬಂದು ಈಕೆಯ ಗರ್ಭವನ್ನು ಸೇರಿದನು. ಈತನು ಗರ್ಭಕ್ಕೆ ಬರುವ ಆರು ತಿಂಗಳು ಮುಂಚಿನಿಂದಲೂ ದೇವತೆಗಳು ಮಹಾಸೇನ ರಾಜನ ಅರಮನೆಯ ಅಂಗಳದಲ್ಲಿ ರತ್ನವೃಷ್ಟಿ ಮಾಡುತ್ತಿದ್ದರು. ದೇವಿಯರು ಲಕ್ಷ್ಮಣಾದೇವಿಯ ಗರ್ಭಶೋಧನೆ ಮಾಡಿ ಸೇವೆ ಸಲ್ಲಿಸುತ್ತಿದ್ದರು. ನಂತರ ದೇವತೆಗಳು ಗರ್ಭಕಲ್ಯಾಣವನ್ನೂ ಮಾಡಿದರು. ನವಮಾಸ ತುಂಬಿದ ನಂತರ ಪುಷ್ಯ ಮಾಸದ ಕೃಷ್ಣ ಪಕ್ಷದ ಏಕಾದಶಿ ತಿಥಿಯಲ್ಲಿ ಶುಭಯೋಗದಲ್ಲಿ ಲಕ್ಷ್ಮಣಾದೇವಿಯು ಜಿನಶಿಶುವನ್ನು ಹಡೆದಳು. ಯಥಾಕ್ರಮದಂತೆ ದೇವೇಂದ್ರಾದಿಗಳು ಬಂದು ಜಿನಶಿಶುವಿನ ಜನ್ಮಾಭಿಷೇಕೋತ್ಸವವನ್ನು ಮಾಡಿ ಚಂದ್ರಪ್ರಭನೆಂದು ಹೆಸರಿಟ್ಟು ಹೋದರು. ಚಂದ್ರಪ್ರಭರಿಗೆ ಚಂದ್ರಲಾಂಛನವಿತ್ತು. ಶ್ವೇತವರ್ಣ ಉಳ್ಳವರಾಗಿದ್ದರು. ಪೂರ್ಣಚಂದ್ರನಂತೆ ಸದಾ ಹಸನ್ಮುಖಿಯಾಗಿರುತ್ತಿದ್ದರು. ಆಗ ದೇಶ, ಕಾಲ, ಸ್ಥಿತಿಗಳು ಶುಭವಾಗಿದ್ದವು.

ಸುಪಾರ್ಶ್ವನಾಥರು ಮುಕ್ತರಾಗಿ ಒಂಭೈನೂರು ಕೋಟಿ ಸಾಗರೋಪಮ ಕಾಲವು ಕಳೆದಾಗ ಈ ಚಂದ್ರಪ್ರಭರು ಅವತರಿಸಿದರು. ಇವರು 10ಲಕ್ಷ ಪೂರ್ವ ಆಯುಷ್ಯ ಉಳ್ಳವರೂ, 150 ಧನುಸ್ಸಿನಷ್ಟು ಎತ್ತರವುಳ್ಳವರೂ ಆಗಿದ್ದರು. ಹುಟ್ಟುತ್ತಲೇ ತ್ರಿಜ್ಞಾನಧಾರಿಗಳಾಗಿದ್ದರು. ಬಾಲ್ಯಕಾಲವನ್ನು ಕಳೆದು ಯೌವನಸ್ಥರಾಗಿ ರಾಜ್ಯ ಸುಖವನ್ನು ಅನುಭವಿಸಿ ಆಗಿನ ಪ್ರಜಾಕೋಟಿಗೆ ಹಿತವನ್ನುಂಟುಮಾಡಿದರು. ಕಮಲಪ್ರಭೆ ಎಂಬ ಪಟ್ಟದ ರಾಣಿಯೊಂದಿಗೆ ವಿಲಾಸದಿಂದ ಇರುತ್ತಿದ್ದರು. ಇವರ ಪುಣ್ಯದ ಪ್ರಭಾವದಿಂದ ದೇವೇಂದ್ರನು ನಿತ್ಯವೂ ಇವರ ನಾಟ್ಯಸಭೆಯಲ್ಲಿ ಅಪ್ಸರೆಯರಿಂದ ನರ್ತನ ಮಾಡಿಸುತ್ತಿದ್ದನು. ಚಂದ್ರಪ್ರಭರು ಒಮ್ಮೆ ಪಟ್ಟಣದಲ್ಲಿ ವಿಹರಿಸುತ್ತಿರುವಾಗ ಒಬ್ಬ ಹಣ್ಣು ಹಣ್ಣು ಮುದುಕನನ್ನು ನೋಡಿ ದೇಹಕ್ಕೆ ಉಂಟಾಗುವ ವಿಕಾರ ಅವಸ್ಥೆಯನ್ನೂ ಹುಟ್ಟು, ಮುಪ್ಪು, ಅಳಿವುಗಳ ಅಂತರವನ್ನೂ ಯೋಚಿಸಿ ಮನೆಗೆ ಹಿಂದಿರುಗಿ ನಿರ್ವೆಗ ಪಾರಾಯಣರಾಗಿ ಈ ಸಂಸಾರ ಶರೀರ ಭೋಗಗಳ ನಶ್ವರತೆಯನ್ನೂ, ಹುಟ್ಟಿದ್ದಾಯಿತು; ಮುಪ್ಪು ಬಂದಿದೆ, ಅಳಿವು ಖಂಡಿತ ಬರುವುದು. ಈ ತಾಪತ್ರಯದಿಂದ ಬಿಡುಗಡೆ ಹೊಂದದಿದ್ದರೆ ಮತ್ತೆ ಈ



ಭವಚಕ್ರದಲ್ಲಿ ತೊಳಲಬೇಕಾಗುವುದೆಂದು, ಯೋಚಿಸಿದರು. ಕೂಡಲೇ ತನ್ನ ಹಿರಿಯ ಮಗ ವರಚಂದ್ರ ಎಂಬುವನಿಗೆ ರಾಜ್ಯವನ್ನೊಪ್ಪಿಸಿ ದೀಕ್ಷೆಗಾಗಿ ಹೊರಟರು.

ಆಗಲೂ ದೇವತೆಗಳು ಬಂದು ದೀಕ್ಷಾಕಲ್ಯಾಣವನ್ನು ಮಾಡಿದರು. ಸ್ವಾಮಿಯು ಪುಷ್ಯ ಮಾಸದ ಅನುರಾಧಾ ನಕ್ಷತ್ರದ ಏಕಾದಶಿ ತಿಥಿಯಲ್ಲಿ ಸಾವಿರ ಮಂದಿರಾಜರೊಡನೆ ಜಿನದೀಕ್ಷೆಯನ್ನು ಹೊಂದಿ ಮನಃಪರ್ಯಯ ಜ್ಞಾನವನ್ನು ಹೊಂದಿದರು. ಸೋಮದತ್ತನೆಂಬ ರಾಜನು ಇವರಿಗೆ ಆಹಾರದಾನ ಮಾಡಿ ಪಂಚಾಶ್ಚರ್ಯಗಳನ್ನು ಪಡೆದನು.

ಚಂದ್ರನಾಥರು ತಪೋನಿಷ್ಠರಾಗಿ ಉತ್ಕೃಷ್ಟಯೋಗವನ್ನು ಹೊಂದಿ ಜಿನಕಲ್ಪಿಗಳಾಗಿ ನಾಗವೃಕ್ಷದ ಕೆಳಗೆ ತಪಸ್ಸನ್ನು ಮಾಡಿದರು. ಫಾಲ್ಗುಣ ಮಾಸ, ಕೃಷ್ಣಪಕ್ಷ ಸಪ್ತಮೀ ತಿಥಿಯಲ್ಲಿ ಅನುರಾಧಾ ನಕ್ಷತ್ರದ ಸಾಯಂಕಾಲದಲ್ಲಿ ಸರ್ವ ಘಾತೀಯ ಕರ್ಮಗಳನ್ನು ಗೆದ್ದು ಕೇವಲ ಜ್ಞಾನಿಗಳಾದರು. ಆಗ ದೇವತೆಗಳು ಬಂದು ಸಂಭ್ರಮದಿಂದ ಜ್ಞಾನಕಲ್ಯಾಣೋತ್ಸವ ಮಾಡಿ ಸಮವಸರಣ ಸಭಾಮಂಟಪವನ್ನು ರಚಿಸಿ ಗುಣಗಾನ ಮಾಡಿದರು. ಈ ಸಭಾಭವನದಲ್ಲಿ 93 ಜನ ಗಣಧರರು ಇವರ ಓಂ ಕಾರ ದಿವ್ಯ ಧ್ವನಿಯನ್ನು ಅನುಸರಿಸಿ ಸೇರಿದ ಸಭಿಕರಿಗೆ ಉಪದೇಶ ಮಾಡುತ್ತಿದ್ದರು.

ಶ್ಯಾಮ ಯಕ್ಷ ಮತ್ತು ಜ್ವಾಲಾಮಾಲಿನಿ ಯಕ್ಷಿಯರು ಭಗವಂತನಿಗೆ ಚಾಮರ ಸೇವೆ ಮಾಡುತ್ತಿದ್ದರು. ಚಂದ್ರಪ್ರಭಸ್ವಾಮಿಯು ಧರ್ಮತೀರ್ಥವನ್ನು ಎಲ್ಲ ಕಡೆ ಪ್ರಸಾರ ಮಾಡಿದರು. ಕರ್ಮಕೋಟಲೆಯಿಂದ ಬಿಡುಗಡೆಹೊಂದಿ ಧರ್ಮದ ಬೆಳಕಿನಲ್ಲಿ ಸುಖದ ಸನ್ನಿಧಿಯನ್ನು ತಲುಪಲು ಬೇಕಾದ ಸಾಮಗ್ರಿಯನ್ನು ಜೀವಕೋಟಿಗೆ ಒದಗಿಸಿಕೊಟ್ಟರು. ಇನ್ನು ತನ್ನ ಆಯುಸ್ಸು ಒಂದು ತಿಂಗಳಿದೆ ಎನ್ನುವಾಗ ಸಮವಸರಣವನ್ನು ಬಿಟ್ಟು ಸಮ್ಮೇದಶಿಖರವನ್ನು ಹೊಂದಿ ಸಿದ್ಧಕೂಟದಲ್ಲಿ ಪ್ರತಿಮಾಯೋಗ ಧಾರಣೆ ಮಾಡಿ ಅಘಾತೀಯ ಕರ್ಮಗಳನ್ನು ನಾಶಮಾಡಿ ಫಾಲ್ಗುಣ ಮಾಸದ ಶುಕ್ಲಪಕ್ಷದ ಸಪ್ತಮೀ ತಿಥಿಯಲ್ಲಿ ಸಾಯಂಕಾಲದಲ್ಲಿ ಯೋಗನಿರೋಧವನ್ನು ಮಾಡಿ ಒಂದು ಸಾವಿರ ಮುನಿಗಳೊಡನೆ ಈ ಭವಚಕ್ರದಿಂದ ಬಿಡುಗಡೆ ಹೊಂದಿ ಸಿದ್ಧಪರಮಾತ್ಮರಾಗಿ ಮುಕ್ತಿಮಂದಿರವನ್ನು ತಲುಪಿದರು. ಆಗ ನರಾಮರರೆಲ್ಲ ಸೇರಿ ನಿರ್ವಾಣಕಲ್ಯಾಣ ಪೂಜೆಯನ್ನು ಮಾಡಿದರು.

ಹೀಗೆ ಯಥಾ ಕ್ರಮವಾಗಿ ಶ್ರೀವರ್ಮ ಜನ್ಮದಲ್ಲಿ ದೃಢಸಮ್ಯಕ್ತ್ವಧಾರಿಯಾಗಿ

ಶ್ರೀಧರ ದೇವ, ಅಜಿತಸೇನ, ಅಚ್ಯುತೇಂದ್ರ, ಪದ್ಮನಾಭ, ಅಹಮಿಂದ್ರ, ಚಂದ್ರಪ್ರಭ ಸ್ವಾಮಿಯಾಗಿ ಭವಮಾಲೆಯನ್ನು ಹರಿದು ಜಿನಸಿದ್ಧರಾಗಿ ಜಗದಗ್ರಭಾಗವನ್ನು ತಲುಪಿದರು.

ಓಂ ನಮಃ

# 60. ಶ್ರೀ ಶಾಂತಿನಾಥ ಚರಿತ್ರೆ

## ಮಂಗಳಾಚರಣೆ

ಶ್ರೀಮತ್ಪಂಚಮ ಸಾರ್ವಭೌಮಪದವೀಂ ಪ್ರದ್ಯುಮ್ನ ರೂಪ ಶ್ರೀ ಯಂ।
ಪ್ರಾಪ್ತಃ ಷೋಡಶ ತೀರ್ಥಕೃತ್ತ್ವಮುಖಿಲಂ ತ್ರೈಲೋಕ್ಯ ಪೂಜ್ಯಾಸ್ಪದಂ॥
ಯಸ್ತಾಪತ್ರಯ ಶಾಂತಿತಃ ಸ್ವಯಮಿತಃ ಶಾಂತಿಂ ಪ್ರಶಾಂತಾತ್ಮನಾಂ।
ಶಾಂತಿಂಯಚ್ಛತಿತಂ ನಮಾಮಿ ಪರಮಂ ಶಾಂತಿಂ ಜಿನಂ ಶಾಂತಯೇ॥

ಸಂಪದ್ಯುಕ್ತರೂ ಐದನೇ ಚಕ್ರವರ್ತಿ ಪದವಿಯನ್ನೂ ಮನ್ಮಥರೂಪ ಸಂಪತ್ತನ್ನೂ, ಹದಿನಾರನೇ ತೀರ್ಥಂಕರ ಪದವಿಯನ್ನೂ, ಮೂರು ಲೋಕದ ಪೂಜಾ ಸ್ಥಾನವನ್ನು ಹೊಂದಿದವರೂ, ಜನ್ಮ ಜರಾಮರಣ ರೂಪನಾದ ತಾಪತ್ರಯದಿಂದ ದೂರವಾದವರೂ, ಆತ್ಮ ಶಾಂತಿಯನ್ನು ನೀಡುವವರೂ ಆದ ಶಾಂತಿನಾಥ ಭಗವಂತರನ್ನು ಶಾಂತ ಮನಸ್ಸಿನಿಂದ ನಮಸ್ಕರಿಸುತ್ತೇನೆ.

### ಕೆಲವು ಭವಾವಳಿ

ಈ ಭರತ ಕ್ಷೇತ್ರದಲ್ಲಿ ಬಹುಹಿಂದೆ ರತ್ನಪುರಿ ಎಂಬ ಪಟ್ಟಣದಲ್ಲಿ ಶ್ರೀ ಷೇಣನೆಂಬ ಓರ್ವರಾಜನು ಇದ್ದನು. ಆತ ಉತ್ತಮ ಶ್ರಾವಕನೂ, ಧಾರ್ಮಿಕನೂ, ದಯಾಳುವೂ ದಕ್ಷನೂ, ಪ್ರಜಾವಾತ್ಸಲ್ಯನೂ ಆಗಿದ್ದನು. ಆತ ಒಮ್ಮೆ ಮೇಘರಥರೆಂಬ ಚಾರಣಮುನಿಗಳಿಗೆ ವಿಧಿಪೂರ್ವಕವಾಗಿ ಆಹಾರದಾನ ಮಾಡಿ ಪಂಚಾಶ್ಚರ್ಯಗಳನ್ನು ಕಂಡನು. ಅತಿಶಯವಾದ ಪುಣ್ಯದಿಂದ ಪೂರ್ವ ವಿದೇಹದ ಮಂದರ ಗಿರಿಯ ಉತ್ತರ ಕುರುದೇಶದಲ್ಲಿ ಉತ್ತಮ ಭೋಗ ಭೂಮಿಜನಾಗಿ ಹುಟ್ಟಿದನು. ಅಲ್ಲಿ ಉತ್ತಮ ಸುಖವನ್ನು ಅನುಭವಿಸಿ ಜೀವಿತಾಂತ್ಯದಲ್ಲಿ ಸೌಧರ್ಮ



ಭಗವಾನ್ ೧೦೦೮ ಶ್ರೀ ಪಾರ್ಶ್ವನಾಥ ಸ್ವಾಮಿ
ಜಿನ ಮಂದಿರ, ಚಿಕ್ಕಪೇಟೆ, ತುಮಕೂರು





ಸ್ವರ್ಗದಲ್ಲಿ ಶ್ರೀ ಪ್ರಭನೆಂಬದೇವನಾಗಿ ಜನಿಸಿದನು. ಅಲ್ಲಿಯೂ ಸುಖಾನಂದದಿಂದ ಇದ್ದು ಅಲ್ಲಿನ ಆಯುಷ್ಯ ಮುಗಿದನಂತರ ಭರತ ಖಂಡದ ರಥನೂ ಪುರದಲ್ಲಿ ಅಮಿತ ತೇಜನೆಂಬ ಖೇಚರ ರಾಜನಾಗಿ ಜನಿಸಿದನು. ಅಲ್ಲಿಯು ವಿದ್ಯಾಧರ ಸುಖಭೋಗಗಳನ್ನು ಅನುಭವಿಸಿ ಕೊನೆಗೆ ವೈರಾಗ್ಯಹೊಂದಿ ದಿಗಂಬರ ಮುನಿದೀಕ್ಷೆ ಪಡೆದು ಸಮಾಧಿಯಿಂದ ದೇಹ ತ್ಯಾಗ ಮಾಡಿ ಆನತ ಕಲ್ಪದಲ್ಲಿ ಆದಿತ್ಯ ಚೂಳನೆಂಬ ದೇವನಾಗಿ ಜನಿಸಿದನು. ಅಲ್ಲಿಯೂ ಅಪೂರ್ವವಾದ ಸ್ವರ್ಗಸುಖವನ್ನು ಅನುಭವಿಸಿ ಪೂರ್ವ ವಿದೇಹದ ಪ್ರಭಂಕರಿ ಪಟ್ಟಣದಲ್ಲಿ ಅಪರಾಜಿತನೆಂಬ ಬಲಕೇಶವನಾಗಿ ಜನಿಸಿ ಸಕಲಸುಖವನ್ನು ಅನುಭವಿಸಿದನು. ಮುಂದೆ ವೈರಾಗ್ಯಹೊಂದಿದನು. ಜೀವಿತಾಂತ್ಯದಲ್ಲಿ ಸಮಾಧಿಮರಣಹೊಂದಿ ಅಚ್ಯುತೇಂದ್ರನಾಗಿ ಜನಿಸಿದನು. ಅಲ್ಲಿ ಉತ್ತಮವಾದ ಸ್ವರ್ಗ ಸುಖಾನಂದ ಭೋಗವನ್ನು ಅನುಭವಿಸಿ ತನ್ನ ಜೀವಿತಾಂತ್ಯದಲ್ಲಿ ಅಲ್ಲಿಂದ ಚ್ಯುತನಾಗಿ ಇದೇ ರತ್ನ ಸಂಚಯಪುರದಲ್ಲಿ ವಜ್ರಾಯುಧನೆಂಬ ಚಕ್ರವರ್ತಿಯಾಗಿ ಜನಿಸಿದನು. ಆರೂಖಂಡಗಳಿಗೆ ಒಡೆಯನಾಗಿ ಅಖಂಡ ಸುಖಭೋಗಗಳನ್ನು ಅನುಭವಿಸಿದನು. ಕೊನೆಗೆ ನಿರ್ವೇಗ ಪರಾಯಣನಾಗಿ ಮುನಿದೀಕ್ಷೆ ಕೈಗೊಂಡು ಉಗ್ರೋಗ್ರ ತಪವೆಸಗಿ ಸಮಾಧಿ ಹೊಂದಿ ಊರ್ಧ್ವಗ್ರೈವೇಯಿಕ ಸ್ವರ್ಗದ ಸೌಮನಸವೆಂಬ ವಿಮಾನದಲ್ಲಿ ಅಹಮಿಂದ್ರನಾಗಿ ಜನಿಸಿದನು. ಅಲ್ಲಿ ಇಪ್ಪತ್ತೊಂಭತ್ತು ಸಾಗರೋಪಮಕಾಲ ಸುಖವಾಗಿದ್ದನು. ಅಲ್ಲಿಯ ಆಯುಷ್ಯ ಮುಗಿದಾಗ ಇದೇ ವಿದೇಹ ಕ್ಷೇತ್ರದ ಪುಂಡರೀಕಿಣೀ ಪಟ್ಟಣದಲ್ಲಿ ಅಮೋಘರಥನೆಂಬ ಅರಸನಾಗಿ ಜನಿಸಿದನು. ಉತ್ತಮ ಸಮ್ಯಗ್ದೃಷ್ಟಿಯಾಗಿ ಜೀವನ ಸಾಗಿಸುತ್ತಾ ಕೊನೆಗೆ ವೈರಾಗ್ಯ ಹೊಂದಿ ಮುನಿದೀಕ್ಷಾಧಾರಿಯಾಗಿ ತಪೋ ನಿರತನಾದನು. ಆಗ ಓರ್ವಕೇವಲಿಗಳಪಾದ ಮೂಲದಲ್ಲಿ ಶೋಡಶ ಭಾವನೆ ದಶಧರ್ಮಗಳ ಆರಾಧನೆಗಳನ್ನು ಮಾಡಿ ತೀರ್ಥಂಕರನಾಗುವ ಅರ್ಹತೆಯನ್ನು ಗಳಿಸಿದನು. ಜೀವಿತಾಂತ್ಯದಲ್ಲಿ ಸಲ್ಲೇಖನ ವಿಧಿಯಿಂದ ಸಮಾಧಿ ಮರಣಹೊಂದಿ ಸರ್ವಾರ್ಥಸಿದ್ಧಿ ವಿಮಾನದಲ್ಲಿ ಅಹಮಿಂದ್ರನಾಗಿ ಜನಿಸಿದನು. ಅಲ್ಲಿ ಮೂವತ್ತಮೂರು ಸಾಗರೋಪಮಕಾಲ ಅತ್ಯುತ್ತಮವಾದ ಸ್ವರ್ಗಸುಖವನ್ನು ಅನುಭವಿಸಿದನು.

ಇಂತೀ ರೀತಿಯಲ್ಲಿ ಭವಭವದಲ್ಲಿ ಉತ್ತಮ ಸುಖಶಾಂತಿಯಿಂದ ಜೀವಿಸಿ ಆತ್ಮಕಲ್ಯಾಣಕಾರಿಯಾದ ರತ್ನತ್ರಯವನ್ನು ಧರಿಸಿ ತೀರ್ಥಂಕರನಾಗುವ ಸಾತಿ ಶಯಪುಣ್ಯ ಭಾಗಿಯಾಗುವುದಕ್ಕೆ ಕಾರಣ ಅಂದು ಶ್ರೀಷೇಣನ ಭವದಲ್ಲಿ ಓರ್ವಚಾರಣಮುನಿ ಮಹಾರಾಜರಿಗೆ ಅತ್ಯಂತ ಶುಭ ಭಾವದಿಂದ ನವಧಾಭಕ್ತಿ

ಪೂರ್ವಕವಾಗಿ ಆಹಾರದಾನ ಮಾಡಿದ ಫಲವೇ ಆಗಿದೆ. ಆದ್ದರಿಂದ ತಮ್ಮ ಜೀವಿತಕಾಲದಲ್ಲಿ ದಾನ ಪೂಜೆ, ಶೀಲ, ಉಪವಾಸಾದಿ ಉತ್ತಮ ಕ್ರಿಯಾ ಶೀಲನಾದರೆ ಸ್ವರ್ಗಾದಿ ಮೋಕ್ಷಗಳಿಗೆ ಭಾಗಿಯಾಗಬಹುದು.

## ಶ್ರೀ ಶಾಂತಿನಾಥ ತೀರ್ಥಂಕರರು

ಈ ಜಂಬೂದ್ವೀಪದ ಭರತ ಖಂಡದ ಕುರುಜಾಂಗಣವೆಂಬ ದೇಶದ ರಾಜಧಾನಿ ಹಸ್ತಿನಾಪುರ. ಅಲ್ಲಿ ವಿಶ್ವಸೇನ ಮಹಾರಾಜ ಆಳುತ್ತಿದ್ದನು. ಆತನ ಪಟ್ಟದ ರಾಣಿ ಐರಾದೇವಿ ಈ ದಂಪತಿಗಳು ತುಂಬಾ ಧಾರ್ಮಿಕರೂ ಶ್ರಾವಕ ಷಟ್ ಕ್ರಿಯಾ ನಿರತರೂ ಆಗಿದ್ದರು,

ಭಾದ್ರಪದ ಬಹುಳ ಸಪ್ತಮಿಯ ಶುಭದಿನದಂದು ಐರಾದೇವಿಯು ಬೆಳಗಿನ ಝಾವದಲ್ಲಿ ಹದಿನಾರು ಉತ್ತಮವಾದ ಸ್ವಪ್ನಗಳನ್ನು ಕಂಡಳು. ಆಗ ಸರ್ವಾರ್ಥಸಿದ್ಧಿಯಲ್ಲಿ ಅಹಮಿಂದ್ರನಾಗಿದ್ದ ಶ್ರೀಷೇಣನ ಆತ್ಮ ಐರಾದೇವಿಯ ಗರ್ಭಕ್ಕೆ ಬಂದು ಸೇರಿದನು. ದೇವತೆಗಳು ಗರ್ಭಾವತರಣಕಲ್ಯಾಣ ಮಾಡಿದರು. ಒಂಭತ್ತು ತಿಂಗಳನಂತರ ಜೇಷ್ಠಬಹುಳ ಚತುರ್ದಶಿಯ ಬೆಳಗಿನ ಝಾವ ಭರಣೀ ನಕ್ಷತ್ರದ ಶುಭಯೋಗದಲ್ಲಿ ಐರಾದೇವಿಯು ತೀರ್ಥಂಕರ ಶಿಶುವಿಗೆ ಜನ್ಮವಿತ್ತಳು. ಆಗ ಸೌಧರ್ಮ ಈಶಾನಾದಿ ಇಂದ್ರರು ತಮ್ಮ ಪರಿವಾರ ಸಹಿತ ಹಸ್ತಿನಾಪುರಕ್ಕೆ ಬಂದು ಆ ಜಿನಶಿಶುವನ್ನು ಕೊಂಡೊಯ್ದು ಪಾಂಡುಕ ಶಿಲೆಯಲ್ಲಿ ವಿರಾಜಮಾನ ಮಾಡಿ ಕ್ಷೀರ ಸಾಗರದ ಪವಿತ್ರ ಜಲದಿಂದ ಜನ್ಮಾಭಿಷೇಕ ಮಾಡಿ ಬಹುವೈಭವದಿಂದ ಐರಾವತದಲ್ಲಿ ಕೂರಿಸಿ ಕೊಂಡು ಬಾಲಲೀಲೋತ್ಸವ ಮಾಡಿ ಆ ಶಿಶುವಿನ ಮುದ್ದಾದ ಸುಂದರವಾದ ಶಾಂತಿ ಮುಖ ಮುದ್ರೆಯನ್ನುಕಂಡು ಶಾಂತಿನಾಥನೆಂಬ ನಾಮಕರಣ ಮಾಡಿ ಜನ್ಮಕಲ್ಯಾಣವನ್ನು ವೈಭವದಿಂದ ಮಾಡಿ ಹೋದರು.

ಶಾಂತಿನಾಥರು ಸ್ವಭಾವದಿಂದಲೇ ಶಾಂತಿ ಗುಣಹೊಂದಿದವರಾಗಿ ಬೆಳೆದರು. ಅವರಿಗೆ ಒಂದು ಲಕ್ಷ ಆಯುಷ್ಯವಿತ್ತು ಅವರು ನಲವತ್ತು ಬಿಲ್ಲು ಎತ್ತರವಿದ್ದರು. ಜಿಂಕೆಯ ಲಾಂಛನ ಹೊಂದಿದ್ದರು. ಸುವರ್ಣ ಮೈಕಾಂತಿ ಹೊಂದಿದ್ದರು. ಸುಖಶಾಂತಿ ನೆಮ್ಮದಿಯಿಂದ ಬಾಳಿ ಚಕ್ರವರ್ತಿಯಾಗಿ ನಿರಾಯಾಸವಾಗಿ ಆರೂಖಂಡಗಳನ್ನು ಜಯಿಸಿದರು. ಇವರ ಕಾಲದಲ್ಲಿ ದೇಶದಲ್ಲಿ ತುಷ್ಟಿ ಪುಷ್ಟಿ ಮಳೆಬೆಳೆ ಸಮೃದ್ಧವಾಗಿದ್ದವು. ಎಲ್ಲರೂ ಶಾಂತಿ ನೆಮ್ಮದಿಯಿಂದ ಬಾಳಿದರು, ಎಲ್ಲಾ ಕಡೆ ಸುಭಿಕ್ಷವಿತ್ತು. ಧರ್ಮದ ವಾತಾವರಣವಿತ್ತು. ಬಹುಕಾಲ ರಾಜ್ಯವಾಳಿ ಒಂದು ದಿನ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಂಡಾಗ ತನ್ನಪ್ರತಿಬಿಂಬವು



ಎರಡಾಗಿ ಕಂಡಿತು. ಅವಧಿಜ್ಞಾನಿಗಳಾದ ಶಾಂತಿನಾಥರು ಇದೇ ವೈರಾಗ್ಯಕ್ಕೆ ಕಾರಣವೆಂದು ತಿಳಿದು ಸಂಸಾರ ಶರೀರ ಭೋಗದಿಂದ ವಿರಕ್ತರಾದರು. ಕೂಡಲೇ ನಾರಾಯಣನೆಂಬ ತನ್ನ ಮಗನಿಗೆ ರಾಜ್ಯವನ್ನು ವಹಿಸಿ ಸರ್ವಾರ್ಥಸಿದ್ಧಿ ಎಂಬ ಪಲ್ಲಕ್ಕಿಯನ್ನೇರಿ ಸಹಾಸ್ರಾಮ್ರವನವೆಂಬ ಉದ್ಯಾನದಲ್ಲಿ ನಿಂದು ಜೇಷ್ಠ ಬಹುಳ ಸಾಯಂಕಾಲ ದಿಗಂಬರ ಮುನಿದೀಕ್ಷಾಧಾರಿಗಳಾದರು. ಆಗ ದೇವತೆಗಳು ತಪಃಕಲ್ಯಾಣ ಪೂಜೆ ಮಾಡಿದರು. ಹದಿನಾರು ವರ್ಷಗಳ ಕಾಲ ಧ್ಯಾನ ಮಗ್ನರಾಗಿದ್ದು ಘಾತಿಯ ಕರ್ಮಗಳನ್ನು ಗೆದ್ದು ಪುಷ್ಯಮಾಸದ ದಶಮೀತಿಥಿಯ ಸಂಜೆಯಲ್ಲಿ ಕೇವಲ ಜ್ಞಾನ ಹೊಂದಿದರು. ಆಗ ದೇವತೆಗಳು ಕೇವಲ ಜ್ಞಾನ ಕಲ್ಯಾಣ ಮಾಡಿ ಸಮವಸರಣವನ್ನು ರಚಿಸಿದರು. ಶಾಂತಿನಾಥ ಜಿನೇಂದ್ರರು ಸಮವಸರಣದಲ್ಲಿ ವಿರಾಜಮಾನರಾದರು ಅವರ ಆ ಸಭೆಯಲ್ಲಿ ಮೂವತ್ತಾರು ಗಣಧರರೂ, ಮೂರುಸಾವಿರ ಅವಧಿಜ್ಞಾನಿ ಮುನಿಗಳೂ, ನಾಲ್ಕು ಸಾವಿರ ಕೇವಲ ಜ್ಞಾನಿಗಳು. ಎರಡುಸಾವಿರದ ನಾಲ್ಕು ನೂರು ಸಮಾನ್ಯ ಸಾಧುಗಳೂ, ಅರವತ್ತು ಸಾವಿರದ ಮುನ್ನೂರು ಮಂದಿ ಆರ್ಯಿಕೆಯರೂ, ಎರಡು ಲಕ್ಷಶ್ರಾವಕರೂ, ನಾಲ್ಕು ಲಕ್ಷಶ್ರಾವಿಕೆಯರೂ ಇದ್ದರು.

ಶಾಂತಿನಾಥ ಭಗವಾನರು ಹದಿನಾರು ವರ್ಷ ಕಡಿಮೆಯಾದ ಇಪ್ಪತ್ತೈದು ಸಾವಿರ ವರ್ಷಪರ್ಯಂತ ವಿಹರಿಸಿ ಧರ್ಮ ಪ್ರಭಾವನೆಮಾಡಿದರು. ಗರುಡ ಯಕ್ಷ ಮಹಾಮಾನಸಿ ಯಕ್ಷಿಯರೇ ಮೊದಲಾದ ಅರವತ್ತನಾಲ್ಕು ಮಂದಿ ಯಕ್ಷ ಯಕ್ಷಿಯರು ಭಗವಂತನ ಸೇವೆಮಾಡಿದರು.

ಶಾಂತಿ ಜಿನೇಂದ್ರರು ತಮ್ಮ ಆಯುಷ್ಯವು ಇನ್ನು ಒಂದು ತಿಂಗಳು ಇದೆ ಎನ್ನುವಾಗ ಸಮ್ಮೇದ ಶಿಖರದ ಕುಂದ ಪ್ರಭಾವೆಂಬ ಕೂಟದಲ್ಲಿ ನಿಂದು ಯೋಗ ನಿರೋಧ ಮಾಡಿ ಅಘಾತೀಯ ಕರ್ಮಗಳನ್ನು ಕ್ಷಯ ಮಾಡಿ ಜೇಷ್ಠ ಬಹುಳ ಚತುರ್ದಶಿಯ ಸಾಯಂಕಾಲ ಭರಣಿ ನಕ್ಷತ್ರದ ಶುಭ ವೇಳೆಯಲ್ಲಿ ಮೋಕ್ಷ ಹೊಂದಿ ಲೋಕದ ತುತ್ತ ತುದಿಯಲ್ಲಿರುವ ಸಿದ್ಧಲೋಕದಲ್ಲಿ ನೆಲೆಸಿ ಸಿದ್ಧಾತ್ಮರಾದರು. ಆಗ ದೇವತೆಗಳು ಭಕ್ತಿ ಭಾವದಿಂದ ಭಗವಂತನ ನಿರ್ವಾಣಕಲ್ಯಾಣವನ್ನು ಮಾಡಿದರು.

ಶಾಂತಿನಾಥರು ತೀರ್ಥಂಕರೂ, ಚಕ್ರವರ್ತಿಗಳೂ, ಮನ್ಮಥರೂ ಆಗಿದ್ದು ದೇಶದಲ್ಲಿ ಜನರಲ್ಲಿ ಶಾಂತಿ ನೆಮ್ಮದಿಗಳನ್ನುಂಟು ಮಾಡಿ ತಮ್ಮಾತ್ಮಕಲ್ಯಾಣ ಹೊಂದಿ ಪರಮಪೂಜ್ಯರಾದರು.

-ಜೈ ಬೋಲೋ ಶಾಂತಿನಾಥ ಭಗವಾನಕೀ -ಜೈ-ಜೈ- ಜೈ-

# 61. ಶ್ರೀ ಪಾರ್ಶ್ವನಾಥ ಚರಿತೆ

ಶ್ರೀ ಸುರ ನರ ನಾಗರಾಜ ಪೂಜಿತಪಾದ । ಭಾಸುರ ಜ್ಞಾನ ಪ್ರಕಾಶ॥
ಸಾಸಿರ ನಾಮದೊಡೆಯ ಪಾರಿಶ್ವೇಶ। ಲೇಸನಿತ್ತೆಮ್ಮ ರಕ್ಷಿಪುದೂ॥

**ಹಿನ್ನಲೆ** : ಜೈನಾಗಮದಲ್ಲಿ ಪ್ರಥಮಾನುಯೋಗವು (ಮಹಾಪುರಾಣ) ಮುಖ್ಯವಾದುದು. ಇದರಲ್ಲಿ ಅರವತ್ಮೂರು ಮಂದಿ ಮಹಾ ಪುರುಷರ ಜೀವನಚರಿತ್ರೆ ಇವೆ. ಇವೆಲ್ಲಾ ಅವರವರ ಭವಾವಳಿಯೊಂದಿಗೆ ವಿವರಿಸಲ್ಪಟ್ಟಿವೆ. ಭವಾವಳಿಯ ವರ್ಣನೆಯೆಂಬುದು ಜಿನಾಗಮದಲ್ಲಿ ಹೆಚ್ಚುಗಾರಿಕೆಯಾಗಿದೆ. ಇದು ಓದುಗರ ಕುತೂಹಲವನ್ನು ಹೆಚ್ಚಿಸಿ ಭಗವದ್ಭಕ್ತಿಗೆ ಪ್ರೇರಕವಾಗಿದೆ. ಈ 63 ಮಂದಿ ಮಹಾಪುರುಷರಲ್ಲಿ 24 ಮಂದಿ ಮಹಾಮಹಿಮರು ತಮ್ಮ ಉತ್ತಮವೂ ಆದರ್ಶವೂ ಆದ ಬಾಳ್ವೆಯಿಂದ ಮೇಲೆ ಮೇಲೇರಿ ಪೂಜ್ಯರಾಗಿದ್ದಾರೆ. ಇವರು ತಮ್ಮ ಆತ್ಮ ಕಲ್ಯಾಣದೊಂದಿಗೆ ಇತರರಿಗೂ ಸುಖ ಶಾಂತಿಯ ಮಾರ್ಗವನ್ನು ತೋರಿಸಿದ್ದಾರೆ. ಈ ಪವಿತ್ರಾತ್ಮರೇ ತೀರ್ಥಂಕರರು, ಜಗತ್ತಿನಲ್ಲಿ ಧರ್ಮತೀರ್ಥವನ್ನು ಹರಿಸಿದವರು. ಇವರ ಆದರ್ಶವನಿಟ್ಟುಕೊಂಡು ನಮ್ಮ ಜೀವನವನ್ನು ಸುಧಾರಿಸಿಕೊಳ್ಳುತ್ತಾ ಸುಖ ಶಾಂತಿಯನ್ನು ಹೊಂದಬಹುದು.

ಈ ವರ್ತಮಾನ ಕಾಲಕ್ಕೆ 24 ಮಂದಿ ತೀರ್ಥಾಧೀಶರಲ್ಲಿ ಭಗವಾನ್ ವೃಷಭನಾಥರು ಮೊದಲಿಗರು ಶ್ರೀ ವರ್ಧಮಾನರು ಕೊನೆಯವರು. ಎಲ್ಲರೂ ಆಯಾ ಕಾಲದಲ್ಲಿ ಮಾಸಿಹೋದ ಧರ್ಮದ ಪುನರುತ್ಥಾನ ಮಾಡುತ್ತಾ ಲೋಕ ಕಲ್ಯಾಣಕರವಾದ ಅಹಿಂಸಾಧರ್ಮಬೋಧೆಯನ್ನು ಮಾಡಿದ್ದಾರೆ.

ಭಗವಾನ್ ಮಹಾವೀರರಿಗಿಂತ ಮೊದಲಿನವರು ಅಂದರೆ 23ನೇ ತೀರ್ಥಂಕರರೇ ಭಗವಾನ್ ಪಾರ್ಶ್ವನಾಥ ಸ್ವಾಮಿಯವರು. ಇವರ ಜೀವನ ಚರಿತ್ರೆಯು ಬಹು ಕುತೂಹಲಕಾರಿಯೂ, ರೋಮಾಂಚನಕಾರಿಯೂ, ಪರಿಣಾಮಕಾರಿಯೂ ಆದ ಭಾವಗಳಿಂದ ವರ್ಣಿತವಾಗಿದೆ. ಕರ್ಮವ್ಯಾಪಾರ ಎಂತಹುದು, ಧರ್ಮ ಅಧರ್ಮಗಳಿಂದ ಆಗುವ ಪರಿಣಾಮವೇನು? ಕೋಪಿಷ್ಠ-ಸಹನಾಶೀಲ ಇವರ ಏಳು-ಬೀಳುಗಳೇನು ಎಂಬುದು ಈ ತೀರ್ಥೇಶನ ಚರಿತ್ರೆಯಿಂದ ತಿಳಿಯುತ್ತದೆ.



ಇಲ್ಲಿ ಸಂಕ್ಷಿಪ್ತವಾಗಿ ಭವಾವಳಿಯೊಂದಿಗೆ ಶ್ರೀ ಪಾರ್ಶ್ವನಾಥರ ಜೀವನ ಚರಿತ್ರೆಯನ್ನು ತಿಳಿಸಲು ಪ್ರಯತ್ನಿಸಲಾಗಿದೆ.

**ಮರುಭೂತಿ** : ಪೌದನಪುರದಲ್ಲಿ ಅರವಿಂದನೆಂಬ ಅರಸನಿದ್ದ. ಆತನ ಮಂತ್ರಿ ವಿಶ್ವ ಭೂತಿ ಪ್ರಜಾನುರಾಗಿಯಾಗಿ ರಾಜನ ಹಿತವನ್ನು ಸಾಧಿಸಿಕೊಂಡು ಧರ್ಮ ಪಾರಾಯಣನಾಗಿ ಬಾಳಿ ರಾಜ್ಯದ ಕಲ್ಯಾಣವನ್ನು ಸಾಧಿಸಿದ ಈತನಿಗೆ ಅನುರೂಪಳಾದ ಅನುಂಧರಿ ಎಂಬ ಪತ್ನಿಯಿದ್ದಳು. ಈ ದಂಪತಿಗಳಿಗೆ ಕಮಠನೂ, ಮರುಭೂತಿಯೂ ಮಕ್ಕಳಾಗಿ ಹುಟ್ಟಿದರು. ಕಮಠ ಮಹಾ ದುಷ್ಟ, ಮುಂಗೋಪಿ, ದೌರ್ಜನ್ಯಕಾರಿ, ಸ್ವಾರ್ಥಪರ, ಜೂಜುಗಾರ ಹಾಗೂ ವಿಷಯಲಂಪಟನಾಗಿ ತಂದೆತಾಯಿಗಳ ಹೆಸರಿಗೆ ಕಳಂಕ ತರುತ್ತಿದ್ದನು. ಮರುಭೂತಿಯಾದರೋ ದಯಾಪರನಾಗಿ, ಧರ್ಮನುರಾಗಿಯಾಗಿ ಗುರುಹಿರಿಯರಿಗೆ ತಗ್ಗಿ ಬಗ್ಗಿ ವಿನಯದಿಂದ ನಡೆದು ಕಮಠನ ನಡೆತೆಯಿಂದ ನೊಂದ ತನ್ನ ತಂದೆ ತಾಯಿಗಳ ಮನಸ್ಸಿಗೆ ಸಂತೋಷವನ್ನುಂಟು ಮಾಡುತ್ತಿದ್ದನು. ಕಮಠನಿಗೆ ವಾರುಣಿಯೊಡನೆ ವಿವಾಹವಾಯಿತು. ಮರುಭೂತಿ ವಸುಂಧರೆ ಎಂಬುವಳನ್ನು ವರಿಸಿದ. ಒಟ್ಟಿಗೇ ಎಲ್ಲರೂ ಬಾಳಿ ಕೊಂಡಿರುವಾಗ ಒಂದುದಿನ ವಿಶ್ವಭೂತಿ ತನ್ನ ತಲೆಯಲ್ಲಿ ನೆರೆಗೂದಲಿರುವುದನ್ನು ಕಂಡು ಚಿಂತಾಕ್ರಾಂತನಾಗಿ ಆತ್ಮೋನ್ನತಿಯನ್ನು ಮರೆತ ಮೂಢನಾದೆನೆಂದು ತನ್ನನ್ನು ತಾನೇ ನಿಂದಿಸಿಕೊಂಡು ತಪೋಭಿಮುಖನಾದನು. ಇದಕ್ಕೆ ಮೊದಲು ತನ್ನ ಮಂತ್ರಿ ಪದವಿಯನ್ನು ಅರ್ಹನಾದ ಮರುಭೂತಿಗೆ ಕೊಟ್ಟು ಮಹಾರಾಜನ ಅನುಮತಿಯನ್ನೂ ಪಡೆದು ತಾನು ತಪಕ್ಕೆ ನಡೆದನು. ಇತ್ತ ಮರುಭೂತಿ ಮಂತ್ರಿಯಾಗಿ ರಾಜ್ಯದ ಯೋಗಕ್ಷೇಮವನ್ನೂ ನೋಡಿಕೊಳ್ಳುತ್ತಾ, ತನ್ನ ಮನೆಯ ಯೋಗಕ್ಷೇಮವನ್ನೂ ನೋಡಿಕೊಳ್ಳುತ್ತಿದ್ದನು. ಕಮಠ ದಿನ ದಿನಕ್ಕೂ ಕೆಡುತ್ತಲೇ ಇದ್ದ. ಆತನಿಂದ ಯಾರೊಬ್ಬರಿಗೂ ಸುಖವಿರಲಿಲ್ಲ. ಮರುಭೂತಿ ತನ್ನಣ್ಣನಾದ ಕಮಠನನ್ನು ಪೂಜ್ಯನೆಂದೇ ತಿಳಿದುಕೊಂಡು ಗೌರವಿಸುತ್ತಿದ್ದನು. ತಂದೆ ಸತ್ತನಂತರ ತನಗೆ ಹಿರಿಯನಾಗಿರುವ ಕಮಠನನ್ನೇ ತಂದೆಯೆಂದು ತಿಳಿದು ವಿಧೇಯತೆಯಿಂದ ನಡೆದುಕೊಳ್ಳುತ್ತಿದ್ದನು.

ವಿಶ್ವಭೂತಿ ಮಂತ್ರಿಯಾಗಿರುವ ತನಕ ಪರರಾಯರು ಅಂಜಿಕೆಯಿಂದ ತೆಪ್ಪಗಿದ್ದರು. ಮರುಭೂತಿ ಮಂತ್ರಿಯಾದಮೇಲೆ ಅವರೆಲ್ಲ ಚೇತರಿಸಿಕೊಂಡು ಪೌದನಪುರವನ್ನು ಮುತ್ತಲು ಹೊಂಚು ಹಾಕುತ್ತಿದ್ದರು. ಮಹಾರಾಜನಾದ ಅರವಿಂದ ಮುದುಕ, ಮಂತ್ರಿ ಮರುಭೂತಿ ಹುಡುಗ, ಎಂದು ನಿರ್ಲಕ್ಷ್ಯದಿಂದ ವಜ್ರವೀರನೆಂಬ ರಾಜ ಕಾಲ್ಕೆರೆದು ಕದನಕ್ಕೆ ಬಂದನು. ಈ ಸಂದರ್ಭದಲ್ಲಿ ಮರುಭೂತಿ ತನ್ನ

ಕರ್ತವ್ಯವನ್ನರಿತುಕೊಂಡು ಸಮರಕ್ಕೆಸಿದ್ಧನಾಗಿ, ತನ್ನ ತಾಯಿಯನ್ನೂ ಅಣ್ಣನನ್ನೂ ಸಂಧಿಸಿ, ಭಕ್ತಿಯಿಂದ ಅವರಿಬ್ಬರಿಗೂ ನಮಸ್ಕರಿಸಿ ಆಶೀರ್ವಾದವನ್ನು ಪಡೆದನು. ಅಣ್ಣನನ್ನು ಕುರಿತು 'ಅಣ್ಣಾ ನೀನು ನನಗೆ ತಂದೆಯ ಸಮ ; ತಂದೆಯು ತಮ್ಮನ್ನು ನಿಶ್ಚಿಂತನನ್ನಾಗಿರಿಸಿ ನನ್ನ ಮೇಲೆ ರಾಜ್ಯದ ಭಾರವನ್ನು ಹೊರಿಸಿದರು. ತಾವು ಹಿರಿಯರು, ಆದ್ದರಿಂದ ಹಾಯಾಗಿ ಮನೆಯ ಕಡೆ ನೋಡಿ ಕೊಂಡಿರಿ. ಈಗ ತಾವೇ ನನ್ನನ್ನು ಆಶೀರ್ವದಿಸಿ ಸಮರಕ್ಕೆ ಕಳುಹಿಸಿಕೊಡಿ, ತಮ್ಮ ಆಶೀರ್ವಾದವೇ ನನಗೆ ವಜ್ರಕವಚ'! ಎಂದು ಮರುಭೂತಿ ನುಡಿದು ಅಣ್ಣನಿಗೆ ಮಂತ್ರಿ ಪದವಿಕೊಟ್ಟು ಸೈನ್ಯ ಸಮೇತ ಯುದ್ಧ ರಂಗಕ್ಕೆ ಮಹಾ ರಾಜನೊಡನೆ ತಾನೂ ಹೋದನು. ಈಗ ರಾಜ್ಯ ಸೂತ್ರಗಳೆಲ್ಲ ಕಮಠನ ಕೈಗೆ ಬಂದುವು.

ಅರವಿಂದ ಮಹಾರಾಜನೂ ಮರುಭೂತಿ ಮಂತ್ರಿಯೂ ಸಮರಕ್ಕೆ ನಡೆದ ನಂತರ ಕಮಠನು ತಾನೇತಾನಾಗಿ, ಸ್ವೇಚ್ಛಾಪರನಾಗಿ ವರ್ತಿಸಿ ಅರಮನೆಯಲ್ಲೂ ಅನೇಕ ದೌರ್ಜನ್ಯ ಕೃತ್ಯಗಳನ್ನು ಮಾಡಿ, ರಾಜ್ಯದಲ್ಲೂ ನೀಚ ಕೃತ್ಯಗಳನ್ನೆಸಗಿದನು. ಬಾಹ್ಯ ಶತ್ರುಗಳನ್ನು ಗೆಲ್ಲುವ ಆತುರದಲ್ಲಿ ಗೋಮುಖವ್ಯಾಘ್ರವನ್ನು ಪ್ರಜಾಪರಿಪಾಲನೆಗೆ ನೇಮಿಸಿದಂತಾಯಿತು! ವಿಷಯಲಂಪಟನಾಗಿದ್ದ ಕಮಠನ ಕೈಗೆ ಅಧಿಕಾರ ಸೂತ್ರಗಳೂ ದೊರೆತು ದ್ರವ್ಯರಾಶಿಯೂ ಸಿಕ್ಕಿ ಅವನ ವಿಷಯವಾಸನೆಗೆ ಅಡೆತಡೆಯಿಲ್ಲದಂತಾಯಿತು. ನಾನಾ ವ್ಯಸನಕ್ಕೆ ಸಿಕ್ಕಿದ ಕಮಠ ಸದಾ ಜೂಜಿನಲ್ಲಿ ಮಗ್ನನಾಗಿ ಪರನಾರಿಯರ ಶೀಲವನ್ನು ಕೆಡಿಸುತ್ತಾ, ತನ್ನ ವಿಷಯಲಂಪಟತನಕ್ಕೆ ನೆರವಾಗುವವರಿಗೆ ಹೇರಳವಾಗಿ ದ್ರವ್ಯವನ್ನು ಚೆಲ್ಲುತ್ತಾ, ಪರಮ ನೀಚನಾಗಿ ಬಾಳಿದ. ಈ ಕಾಮುಕನ ಕಣ್ಣು ತನ್ನ ನಾದಿನಿಯೂ, ಮರುಭೂತಿಯ ಮಡದಿಯೂ ಆದ ವಸುಂಧರೆಯ ಮೇಲೆ ಬಿದ್ದಿತು. ಆಕೆಯನ್ನೂ ತನ್ನ ಕಾಮ ಪಿಪಾಸೆಗಾಗಿ ಉಪಯೋಗಿಸಿಕೊಂಡನು. ಈ ಮಧ್ಯೆ ಈತನ ಪತ್ನಿಯೂ ಎಷ್ಟೋ ಬಾರಿ ಹಿತವಚನಗಳನ್ನಾಡಿದರೂ ಅದಕ್ಕೆಲ್ಲಾ ಕಿವಿಗೊಡದೆ, ಕಮಠ ರಾಜ್ಯಕ್ಕೂ ಅನ್ಯಾಯವೆಸಗಿ ತನ್ನ ತಮ್ಮನ ಸಂಸಾರವನ್ನೂ ಮುರಿದನು. ಇವನ ನೀಚ ವರ್ತನೆಗೆ ಪ್ರಜೆಯೆಲ್ಲ ಬೇಸತ್ತು ಹೋಗಿತ್ತು. ಎಂದಿಗೆ ಮಹಾರಾಜ ತನ್ನ ಮಂತ್ರಿಯೊಡನೆ ಹಿಂದಿರುಗುವನೋ ಎಂಬ ಕಾತುರದಿಂದ ಕಾಯುತ್ತಿತ್ತು.

ಎದುರಾಳಿಯೊಡನೆ ಧೈರ್ಯವಾಗಿ ಹೋರಾಡಿದುದರಿಂದ ಅರವಿಂದನಿಗೆ ಜಯಲಕ್ಷ್ಮಿಯೊಲಿದಳು. ಗೆಲುವನ್ನು ಕಂಡು ಸಂತಸದಿಂದ ರಾಜನೂ ಮಂತ್ರಿಯೂ ಪೌದನಪುರಕ್ಕೆ ಹಿಂದಿರುಗಿದರು. ಜನಸ್ತೋಮ ಇವರಿಬ್ಬರನ್ನೂ ಸಂತೋಷದಿಂದ ಬರಮಾಡಿಕೊಂಡು ಕಮಠನಿಂದ ತಾವುಂಡ ನೋವನ್ನೆಲ್ಲಾ



ಹೇಳಿಕೊಂಡರು. ಇದನ್ನು ಕೇಳಿ ಅವರಿಬ್ಬರಿಗೂ ಪ್ರಜೆಗಳ ಮೇಲೆ ಮರುಕವಾಯಿತು. ಗೆಲುವಿನ ಆನಂದವನ್ನೆಲ್ಲಾ ಮರೆತು, ಕಮಠನ ಅನ್ಯಾಯವನ್ನು ನೆನೆದು ಅವರಿಬ್ಬರೂ ಸಂಕಟಪಟ್ಟರು. ಮರುಭೂತಿ ತನ್ನಣ್ಣ ಮಾಡಿದ ನೀಚಕೃತ್ಯವನ್ನು, ಕೇಳಿಯೂ ಬೇರೊಬ್ಬ ಪತ್ನಿಯನ್ನು ಮತ್ತೆ ಪಡೆಯಬಹುದು ಆದರೆ ಸಹೋದರನನ್ನು ಮತ್ತೊಮ್ಮೆ ಪಡೆಯಲಸಾಧ್ಯ. ಪತ್ನಿಯ ನೀಚ ಕೃತ್ಯಕ್ಕೆ ಅಣ್ಣ ಬೆಂಬಲಿಗ ನಾಗಿರಬಹುದು. ಈಗ ಆಕೆಯನ್ನು ತೊರೆದರೆ ನನಗೂ ನನ್ನ ಅಣ್ಣನಿಗೂ ದ್ವೇಷಕ್ಕೆ ಅವಕಾಶವಿರುವುದಿಲ್ಲ. ಎಂದುಕೊಂಡು ವಸುಂಧರೆಯ ಮೇಲೆ ಉದಾಸೀನ ಭಾವವನ್ನು ತಳೆದನು. ಮರುದಿನ ಮಹಾರಾಜನ ಸನ್ನಿಧಿಗೆ ಮರುಭೂತಿ ಬಂದು ನಮಸ್ಕರಿಸಿ ಮನೆಯಲ್ಲಿ ನಡೆದ ಹಗರಣವನ್ನು ತಿಳಿಸಿದನು. ಕುಪಿತನಾದ ಕಮಠನಿಗೆ ತಕ್ಕ ಶಾಸ್ತಿ ಮಾಡಲು ಬಯಸಿದನು. ಆದರೆ ಕರುಣೆಯಿಂದ ಮಾನವರ ತಪ್ಪನ್ನು ಕಂಡುಕರಗುವ ತಾಯ್ಕರುಳಾಗಿ ಮರುಭೂತಿ ತನ್ನಣ್ಣನ ತಪ್ಪನ್ನೂ ಮುಚ್ಚಲು ಪ್ರಯತ್ನಿಸಿದನು. ಮಹಾರಾಜನು ಮರುಭೂತಿಯ ಮನವನ್ನರಿತು ನೀನು ಮೋಹ ಪರವಶನಾಗಿ ನಿನ್ನಣ್ಣನ ದುರ್ವರ್ತನೆಯನ್ನು ಸಹಿಸುತ್ತಿರುವೆ ಇದು ಸಲ್ಲದು. ಎಂದು ನುಡಿದು, ಜೂಜಿನಲ್ಲಿ ಮಗ್ನನಾಗಿದ್ದ ಕಮಠನನ್ನು ಹಿಡಿತರಿಸಿ ತನ್ನ ರಾಜ್ಯದಿಂದ ಹೊರದೂಡಿದನು, ಇದನ್ನು ಸಹಿಸಲಾರದೆ ಮರುಭೂತಿ ಒಳಗೊಳಗೆ ನೊಂದುಕೊಂಡು ಕೊರಗಿದನು. ಕಮಠನಾದರೋ ತನ್ನ ಈ ಅವಸ್ಥೆಗೆಲ್ಲಾ ತನ್ನ ತಮ್ಮನ ಪಿತೂರಿಯೇ ಕಾರಣವೆಂದು ಒಳಗೊಳಗೇ ಕುದಿದನು. (ಇಲ್ಲಿ ನಾವು ಗಮನಿಸಬೇಕಾದುದು ಮರುಭೂತಿಯ ಮೋಹ, ಅಂತಯೇ ಕಮಠನ ದ್ವೇಷ, ಇದರಿಂದ ತಮ್ಮ ನಾಶವನ್ನು ತಾವೇ ತಂದುಕೊಂಡರು, ಮರುಭೂತಿಯ ಮೋಹವೇ ಮರುಕವಾಗಿ ಮಾರ್ಪಾಟಾಗುವ ಮನೋಹರ ಚಿತ್ರವನ್ನು ಇವರ ಪ್ರತಿ ಜನ್ಮದಲ್ಲೂ ಗಮನಿಸಬಹುದು.)

ಕಮಠ ಊರನ್ನು ತೊರೆದು ಭೂತಗಿರಿಗೆ ಬಂದು ಊರ್ಧ್ವಬಾಹುವಾಗಿ ನಿಂತು ತಪಸ್ಸನ್ನು ಮಾಡಲಾರಂಭಿಸಿದ, ಈ ಸುದ್ದಿ ಮರುಭೂತಿಗೆ ಗೊತ್ತಾಗಿ ನಿಜವಾಗಿಯೂ ತನ್ನಣ್ಣನ ಮನಸ್ಸು ಪರಿವರ್ತನೆಗೊಂಡು ಆತ್ಮೋನ್ನತಿಯ ಮಾರ್ಗವನ್ನು ತುಳಿದನೆಂದು ಸಂತಸಗೊಂಡು ಆತನಿರುವೆಡೆಗೆ ಧಾವಿಸಿ ಸಾಷ್ಟಾಂಗವೆರಗಲು ಕಾತುರಪಟ್ಟನು. ಇದನ್ನರಿತ ಅರವಿಂದ ಮಹಾರಾಜ "ಮನೆಯ ಹಾವನು ಆಚೆಗೆಸೆದುದಾಯಿತು. ಮತ್ತೂ ಅದನ್ನರಿಸಿಕೊಂಡು ಹೋದರೆ ಅದರಿಂದ ಕೇಡೇ ವಿನಃ ಉಪಕಾರವಾಗದು" ಎಂದು ಮರುಭೂತಿಗೆ ತಿಳಿಸಿದನು. ಆದರೆ ಮರುಭೂತಿ ತನ್ನಣ್ಣನ ಮೇಲಿನ ಮಮತೆಯಿಂದ ಭೂತಗಿರಿಗೆ ಬಂದು ನೋಡುವಾಗ್ಗೆ

ಕಮಠನಾದರೂ ದೊಡ್ಡ ಕಲ್ಲನ್ನು ಹೊತ್ತುಕೊಂಡು ನಿಂತು ತಪವೆಸಗುವುದನ್ನು ಕಂಡನು, ಈ ದೃಶ್ಯವನ್ನು ಕಂಡಾಕ್ಷಣ ಮರುಭೂತಿಗೆ ಸಂಕಟವುಕ್ಕಿ ತನ್ನಣ್ಣನ ಸ್ಥಿತಿಗೆ ಮರುಗುತ್ತಾ, ಎಂತಾದರೂ ಒಡಂಬಡಿಸಿ ಆತನನ್ನು ಮನೆಗೆ ಕೊಂಡೊಯ್ಯಬೇಕೆಂದು ಯೋಚಿಸಿ, ವಿನಯಪೂರ್ವಕವಾಗಿ ಆತನಿಗೆರಗಿ, ತನ್ನ ಅಭಿಲಾಷೆಯನ್ನು ತಿಳಿಸಿದಾಗ, "ಈ ಪಾಪಿ, ರಾಜನಿಂದ ನನ್ನನ್ನು ದಂಡಿಸಿ ಈಗ ಮತ್ತೆ ನಾನಿರುವೆಡೆಯನ್ನು ಕಂಡುಕೊಂಡು ಬಂದಿದ್ದಾನೆ, ಇನ್ನೇನು ತೊಂದರೆ ಕೊಡುವನೋ", ಎಂದು ಕಮಠ ಕೋಪೋದ್ರೇಕಗೊಂಡು ತಾನು ಹೊತ್ತಿದ್ದ ಬಂಡೆಯನ್ನು ತನ್ನ ಕಾಲ ಮೇಲೆ ಬಿದ್ದಿದ್ದ ಮರುಭೂತಿಯ ತಲೆಗಿಕ್ಕಿದನು, ತಕ್ಷಣವೇ ಮರುಭೂತಿಯ ತಲೆಯೊಡೆದು ನುಚ್ಚು ನೂರಾಯಿತು. (ಇಲ್ಲಿ ನಾವು ಗಮನಿಸಬೇಕಾದುದು ಮರುಭೂತಿಯ ದುರ್ಮೋಹವೂ, ಕಮಠನ ಕಠೋರ ವರ್ತನೆಯನ್ನೂ, ಅವರವರ ಮನೋವಿಕಾರಗಳೂ ಅವರ ಮುಂದಣ ಜನ್ಮಕ್ಕೆ ಮೂಲವಾಯಿತು ಎಂದು ತಿಳಿಯಬೇಕು.)

**ವಜ್ರಘೋಷ :** ಸತ್ತ ಮರುಭೂತಿ ಮಲಯಪರ್ವತದ ಬಳಿ ವಜ್ರಘೋಷವೆಂಬ ಗಂಡಾನೆಯಾಗಿ ಹುಟ್ಟಿದ. ಕಮಠನ ಪತ್ನಿಯಾದ ವಾರುಣಿ ಸತ್ತು ಹೆಣ್ಣಾನೆಯಾಗಿ ಹುಟ್ಟಿದ್ದಳು. ಇತ್ತ ಕಮಠ ದುರ್ನಡತೆಯಲ್ಲಿ ಬಾಳಿ ದುರ್ಭಾವನೆಯಿಂದ ಸತ್ತು ಮಲಯಪರ್ವತದ ಬಳಿಯೇ ಕುಕ್ಕುಟ ಸರ್ಪವಾಗಿ ಹುಟ್ಟಿದನು. (ಅವರವರ ಮನೋವಿಕಾರಗಳನ್ನು ಈ ಜನ್ಮಗಳಲ್ಲೂ ಗಮನಿಸಬಹುದು), ಅರವಿಂದ ಮಹಾರಾಜ ರಾಜ್ಯವನ್ನು ತೊರೆದು ಜಿನಮುನಿಯಾಗಿ ಮಲಯಪರ್ವತಕ್ಕೇ ಬಂದು ತಪವೆಸಗುತ್ತಿರಲು, ಒಂದು ದಿನ ವಜ್ರಘೋಷವೆಂಬ ಈ ಆನೆ, ಮುನಿಯನ್ನು ನೋಡಿ ಕ್ಷಣಕಾಲ ಮದೋದ್ರೇಕದಿಂದ ಆತನಿಗೆ ಕೇಡೆಸಗಲು ಆತನೆಡೆಗೆ ನುಗ್ಗಿ ಬರುವಾಗ್ಗೆ ಅದಕ್ಕೆ ಜಾತಿ ಸ್ಮರಣೆಯಾಯಿತು. (ಹಿಂದಣ ಜನ್ಮದ ನೆನಪು) ತಾನಾರೆಂಬುದನ್ನೂ, ಈ ಮುನಿಯಾರೆಂಬುದನ್ನೂ ಅರಿತು ಮನೋವ್ಯಾಕುಲದಿಂದ ಮುನಿಗಳ ಪಾದಗಳ ಮೇಲೆ ಬಿದ್ದು ಗೋಳಾಡಿತು. ಆನೆಯನ್ನು ಕಂಡಾಕ್ಷಣ ಮುನಿಗಳೂ ಮರುಭೂತಿಯ ನೆನಪಾಗಿ ಜೈನಧರ್ಮವನ್ನು ಅದಕ್ಕೆ ಬೋಧಿಸಿದರು. ಕಮಠನಿಂದ ಮುಂದೂ ಕೂಡ ಮರುಭೂತಿಯಾತ್ಮಕ್ಕೆ ಆಗಬಹುದಾದ ಅಪಘಾತಗಳನ್ನೂ ವಿವರಿಸಿ ಎದೆಗುಂದದೆ ಎಲ್ಲ ಉಪಸರ್ಗಗಳನ್ನೂ ಸಹಿಸು ಎಂದು ಗಂಡಾನೆಯ ಕಿವಿಯಲ್ಲಿ ಣಮೋಕಾರ ಮಂತ್ರವನ್ನು ಹೇಳಿದರು. ಇಷ್ಟಾದ ಮೇಲೆ ಆನೆಯ ಮನಸ್ಸು ತಿಳಿಯಾಯಿತು. ಒಮ್ಮೆ ಈ ಗಂಡಾನೆ ಕೆಸರಿನಲ್ಲಿಳಿದು ಮೇಲೇಳಲಾರದೆ ಸಿಕ್ಕಿ ಬಿದ್ದಾಗ ಕುಕ್ಕುಟ ಸರ್ಪವಾಗಿ ಅಲೆಯುತ್ತಿದ್ದ



ಕಮಠನ ಕಣ್ಣಿಗೆ ಈ ಬಡಪ್ರಾಣಿ ಬೀಳಲು ತಕ್ಷಣ ಅಲ್ಲಿಗೆ ಬಂದು ಅದನ್ನು ಕಚ್ಚಿಕೊಂದಿತು. ವಜ್ರಘೋಷ ಆನೆ ಸದ್ಭಾವನೆಯಿಂದ ಮರಣವನ್ನಪ್ಪಿ ಸದ್ಗತಿ ಹೊಂದಿತು.

**ಶಶಿಪ್ರಭ – ರಶ್ಮಿವೇಗ – ಅಚ್ಯುತೇಂದ್ರ, – ವಜ್ರನಾಭಿ :** ಧ್ಯಾನಾಸಕ್ತನಾಗಿ ವಜ್ರಘೋಷವೆಂಬ ಆನೆ ಸಾವನ್ನಪ್ಪಿದುದರಿಂದ ಸಗ್ಗಕ್ಕಡರಿ ಶಶಿಪ್ರಭನೆಂಬ ದೇವನಾಗಿ ಹುಟ್ಟಿತು. ಸಗ್ಗದ ಸುಖದಲ್ಲಿ ಶಶಿಪ್ರಭನು ಅಸಂಖ್ಯಾತಕಾಲ ಓಲಾಡಿ ಕೊನೆಗೆ ಪೂರ್ವವಿದೇಹದಲ್ಲಿ ವಿದ್ಯುದ್ಗತಿ ಮಹಾರಾಜನರಸಿಯಾದ ವಿದ್ಯುನ್ಮಾಲೆಯ ಬಸಿರಿಂದ ರಶ್ಮಿವೇಗನಾಗಿ ಹುಟ್ಟಿದನು. ಬಾಲ್ಯದಲ್ಲೇ ಈತನಿಗೆ ಆತ್ಮೋನ್ನತಿಯ ಕಡೆ ಗಮನವಾಯಿತು. ಅಷ್ಟೈಶ್ವರ್ಯ ತೊರೆದು ದಿಗಂಬರ ಮುನಿಯಾಗಿ ತಪವೆಸಗಿದನು, ವಿಷಸರ್ಪವಾಗಿದ್ದ ಕಮಠ ಸತ್ತು ಧೂಮಪ್ರಭೆಯೆಂಬ ನರಕದಲ್ಲಿ ಹುಟ್ಟಿ ಬಹುಕಾಲ ನೋವುಂಡಾನಂತರ ಹಿಮಗಿರಿಯಲ್ಲಿ ಮತ್ತೆ ಹೆಬ್ಬಾವಾಗಿ ಹುಟ್ಟಿದನು, ಒಮ್ಮೆ ತಪವೆಸಗುತ್ತಿದ್ದ ರಶ್ಮಿವೇಗನನ್ನು ಕಂಡು ಈ ಸರ್ಪ ಕೋಪಗೊಂಡು ಅವನನ್ನು ನುಂಗಿತು. ಅದು ನುಂಗುತ್ತಿದ್ದರೂ ಕೂಡ ರಶ್ಮಿವೇಗ ಧ್ಯಾನದಿಂದ ವಿಚಲಿತನಾಗಲಿಲ್ಲ. ಆತನ ದೇಹವನ್ನೇನೋ ಈ ಸರ್ಪ ನುಂಗಿತು. ಆದರೆ ಪವಿತ್ರ ಧ್ಯಾನದಿಂದ ಆತನ ಆತ್ಮವು ದೇಹವೆಂಬ ಪಂಜರದಿಂದ ಪಾರಾಗಿ ಸ್ವರ್ಗದಲ್ಲಿ ಅಚ್ಯುತೇಂದ್ರನಾಗಿ ಹುಟ್ಟಿತು.

ಅಚ್ಯುತೇಂದ್ರನು ಬಹುಕಾಲ ಅಚ್ಯುತ ಕಲ್ಪದಲ್ಲಿ ನಾನಾ ರೀತಿಯ ಸುಖವನ್ನನುಭವಿಸಿದನು. ಆದರೂ ಆತನ ಮನಸ್ಸು ಮುಕುತಿಸುಖವನ್ನು ಬಯಸಿ ಹಾತೊರೆಯುತ್ತಿತ್ತು. ಅಶ್ವಪುರದರಸನಾದ ವಜ್ರವಿಜಯನ ಮನೋವಲ್ಲಭೆ ವಿಜಯೆಯ ಹೊಟ್ಟೆಯಲ್ಲಿ ಅಚ್ಯುತೇಂದ್ರನ ಆತ್ಮ ಬಂದು ನೆಲಸಿ ವಜ್ರನಾಭಿಯಾಗಿ ಹುಟ್ಟಿದನು. ಹರೆಯಕ್ಕೆ ಬಂದಮೇಲೆ ವಜ್ರಾನಾಭಿ ತಾನೇ ಚಕ್ರವರ್ತಿಯಾಗಿ ಧರ್ಮದಿಂದ ರಾಜ್ಯ ಪರಿಪಾಲನೆಮಾಡುತ್ತಿರಲು ಒಂದು ದಿನ ಕ್ಷೇಮಂಕರ ಭಟ್ಟಾರರಲ್ಲಿ ಧರ್ಮೋಪದೇಶವನ್ನು ಪಡೆದು ವಿರಾಗಿಯಾಗಿ ರಾಜ್ಯವನ್ನು ತನ್ನ ಮಗನಿಗಿತ್ತು ಸನ್ಯಾಸಿಯಾಗಿ ತಪವೆಸಗಿದನು.

ಮುನಿಯನ್ನು ನುಂಗಿದ ವಿಷಸರ್ಪಕ್ಕೆ ಸಿಡಿಲೆರಗಲು ಅದೂ ಸತ್ತು ತಮಃ ಪ್ರಭೆಯೆಂಬ ನರಕದಲ್ಲಿ ಹುಟ್ಟಿ ಅನಂತಕಾಲ ನರಕದ ಮಹಾ ದುಃಖವನ್ನುಂಡು ಕೊನೆಯಲ್ಲಿ ಸತ್ತು ಕುರಂಗನೆಂಬ ಬೇಡನಾಗಿ ಹುಟ್ಟಿದನು. ಆಗಲೂ ಕೂಡ ಆತನ ಆತ್ಮ ಚೇತರಿಸಿಕೊಳ್ಳಲಿಲ್ಲ. ಸದಾ ನೀಚ ಕೃತ್ಯಗಳಲ್ಲೇ ಕುರಂಗನು ತಲ್ಲೀನನಾಗಿದ್ದನು.

ಅವನ ಅವಾಂತರದಿಂದ ಭೂಮಿ, ಆಕಾಶ, ನೀರು ಈ ಮೂರು ಕಡೆಯ ಜೀವಿಗಳು ನಿತ್ಯವೂ ಸಾಯುತ್ತಿದ್ದವು. ಕುರಂಗ ಒಂದು ದಿನ ವಜ್ರನಾಭಿ ಮುನಿಯನ್ನು ಕಂಡು ಭವಾಂತರ ದ್ವೇಷ ಕೆರಳಿದುದರಿಂದ ಬಾಣಗಳಿಂದ ಮುನಿಪತಿಯನ್ನು ಹೊಡೆದನು. ದೇಹದಿಂದ ಆತ್ಮನನ್ನು ಬೇರ್ಪಡಿಸಲೆಂದೇ ತಪವೆಸಗುತ್ತಿದ್ದ ಮುನೀಂದ್ರನು ಕುರಂಗನ ನೀಚ ಕೃತ್ಯಕ್ಕೆ ಅಂಜಲಿಲ್ಲ, ಜೊತೆಗೆ ಅವನ ಮೇಲೆ ಯಾವ ಪ್ರತಿಕಾರವನ್ನೂ ನೆನೆಯದೆ ಪ್ರಶಾಂತ ಚಿತ್ತನಾಗಿ ಪ್ರಾಣ ಬಿಟ್ಟನು.

**ಅಹಮಿಂದ್ರ–ಆನಂದ–ಆನತೇಂದ್ರ :**—ವಜ್ರನಾಭಿಮುನಿ ನಿರ್ಮಲಾಂ ತರಂಗ ಧ್ಯಾನದಿಂದ ಸತ್ತು ಮಧ್ಯಮ ಗ್ರೈವೇಯಿಕವೆಂಬ ಸ್ವರ್ಗದಲ್ಲಿ ಅಹಮಿಂದ್ರ ದೇವನಾಗಿ ಹುಟ್ಟಿದನು. ಸಗ್ಗದ ಸುಖವನ್ನು ಬಹುಕಾಲ ಅನುಭವಿಸಿ ಅನಂತರ ಅಲ್ಲಿಂದ ಚ್ಯುತನಾಗಿ ಅಯೋಧ್ಯೆಯಲ್ಲಿ ಇಕ್ಷ್ವಾಕು ವಂಶದ ವಜ್ರಬಾಹು ಮಹಾರಾಜನಿಗೂ ಆತನ ಮಡದಿ ಪ್ರಭಂಕರೆಗೂ ಆನಂದನೆಂಬ ಮಗನಾಗಿ ಹುಟ್ಟಿದನು, ಈ ಆನಂದನು ಮಹಾ ಮಂಡಳಿಕನಾಗಿ ರಾಜ್ಯಭಾರ ಮಾಡುತ್ತಿದ್ದನು. ವಿಪುಳಮತಿ ಎಂಬ ಗಣಧರರ (ಜಿನವಾಣಿಯ ವ್ಯಾಖ್ಯಾನಕಾರ) ಬಳಿ ಧರ್ಮೋಪದೇಶವನ್ನು ಕೇಳಿ ಧರ್ಮಾನುರಾಗಿಯಾಗಿ ಬಾಳುತ್ತಿದ್ದನು. ಒಮ್ಮೆ ತನ್ನ ತಲೆಯಲ್ಲಿ ನೆರೆಗೂದಲನ್ನು ಕಂಡು ಆನಂದನಿಗೆ ವೈರಾಗ್ಯ ಉದಯವಾಗಿ, ರಾಜ್ಯವನ್ನು ಮಗನಿಗಿತ್ತು, ದಿಗಂಬರ ಮುನಿಯಾಗಿ ಶುಭ ಭಾವನೆಯಿಂದ ಆರಾಧನಾ ಚತುಷ್ಟಯವನ್ನು ಆರಾಧಿಸಿ, ಏಕಾದಶಾಂಗ ಜ್ಞಾನವನ್ನು ಸಂಪಾದಿಸಿ, ತೀರ್ಥಂಕರನಾಗುವುದಕ್ಕೆ ಬೇಕಾದ ದರ್ಶನ ವಿಶುದ್ಧಿಯೇ ಮುಂತಾದ ಶೋಡಶ ಭಾವನೆಗಳನ್ನು ಭಾವಿಸುತ್ತಾ ಘೋರ ತಪದಲ್ಲಿ ತಲ್ಲೀನನಾದನು. ಅತ್ತ ಕುರಂಗನೆಂಬ ಬೇಡನು ದುರ್ಭಾವನೆಯಿಂದ ಸತ್ತು ನರಕದ ನೋವುಂಡು ಅನಂತರ ಸಿಂಹನಾಗಿ ಜನಿಸಿದನು. ಅದು ಅನೇಕ ಪ್ರಾಣಿಗಳನ್ನು ಕೊಂದು ಪಾಪದ ಪರ್ವತವನ್ನೇರಿ ವಿಜೃಂಭಿಸುತ್ತಿತ್ತು. ಈ ಸಿಂಹ ಹಿಂದಣಭವದ ದ್ವೇಷವನ್ನು ನೆನೆದು ಮತ್ತೆ ಆನಂದ ಮುನಿಯ ಮೇಲೆ ಬಿದ್ದಿತು, ಆಗಲೂ ಆ ಮುನಿ ತನ್ನ ಧ್ಯಾನದಿಂದ ವಿಚಲಿತನಾಗದೆ ಕ್ಷಮಾ ಶೀಲನಾಗಿ ಆತ್ಮಧ್ಯಾನದಲ್ಲೇ ತಲ್ಲೀನನಾಗಿ ಸತ್ತು ಆನತಕಲ್ಪವೆಂಬ ಸ್ವರ್ಗದಲ್ಲಿ ಆನತೇಂದ್ರನಾಗಿ ಜನಿಸಿದನು. ಈ ಸ್ವರ್ಗದಲ್ಲಿ ಬಹುಕಾಲ ಆನತೇಂದ್ರ ಅಪಾರ ಸುಖವನ್ನುಂಡು ತಣಿದನು. ಆದರೂ ಈ ಸುಖ ಅವನ ಮನಸ್ಸಿಗೆ ಅಲ್ಪವಾಗಿ ಕಂಡು ಚಿರ ಸುಖವನ್ನುಣ್ಣಲೋಸುಗ ಮುಕ್ತಿ ಹೊಂದುವ ವಿಧಾನವನ್ನೇ ಚಿಂತಿಸುತ್ತಿದ್ದನು.

**ಪಾರ್ಶ್ವನಾಥರ ಜನನ – ಬಾಲ್ಯ :** ಕಾಶಿಯಲ್ಲಿ ಉಗ್ರವಂಶದ ಕಾಶ್ಯಪ ಗೋತ್ರದ ವಿಶ್ವಸೇನನೆಂಬ ಮಹಾರಾಜನಿದ್ದನು, ಆತನ ಮನೋವಲ್ಲಭೆ



ಬ್ರಾಹ್ಮಿಲಾದೇವಿ ಅಥವಾ ವಾಮಾದೇವಿ ಪತಿವ್ರತೆಯಾಗಿ ಪತಿಯ ಹಿತವನ್ನು ಸಾಧಿಸುತ್ತಿದ್ದಳು. ಈ ರಮಣೀಯ ಗರ್ಭದಲ್ಲಿ ತೀರ್ಥೇಶನಾಗುವ ಕೂಸು ಜನಿಸುವುದನ್ನರಿದು ದೇವೇಂದ್ರ ತನ್ನ ಮಡದಿ ಶಚಿದೇವಿಯಿಂದ ಬ್ರಾಹ್ಮಿಲೆಯ ಗರ್ಭವನ್ನು ಶುಚಿಗೊಳಿಸಿದನು, ವಾಮಾದೇವಿ ಹದಿನಾರು ಶುಭ ಸ್ವಪ್ನಗಳನ್ನು ಕಂಡಳು, ದೇವತೆಗಳು ಬಂದು ದೇವಿಯ ಸೇವೆಗೆ ತೊಡಗಿದರು, ಆನತೇಂದ್ರನು ಸ್ವರ್ಗದಿಂದ ಚ್ಯುತನಾಗಿ ಬ್ರಾಹ್ಮಿಲೆಯ ಗರ್ಭಕ್ಕೆ ಬಂದು ಸೇರಿದನು. ಆಗ ದೇವತೆಗಳು ಬಂದು ಮಾತೆಯ ಪೂಜೆ ಮಾಡಿದರು. 'ಈ ಕ್ರಿಯೆಗೆ ಗರ್ಭಾವತರಣ ಕ್ರಿಯೆ', ಎನ್ನುವರು. ಸ್ವಾಮಿಯು ತಾಯಿಯ ಗರ್ಭಕ್ಕೆ ಬರುವ ಆರು ತಿಂಗಳ ಮುಂಚಿನಿಂದಲೇ ದೇವೇಂದ್ರನು ರಾಜನ ಅರಮನೆಯ ಅಂಗಳದಲ್ಲಿ ರತ್ನವೃಷ್ಟಿಯನ್ನು ಮಾಡಿಸಿದನು, ಈ ವೃಷ್ಟಿಯು ಶಿಶು ಜನನವಾಗುವವರೆಗೂ ಆಯಿತು, ನವಮಾಸ ತುಂಬಿದ ಮೇಲೆ ಪುಷ್ಯ ಬಹುಳ ಏಕಾದಶಿಯ ಶುಭದಿನದಲ್ಲಿ ಬ್ರಾಹ್ಮಿಲಾದೇವಿಯು ಜಿನ ಶಿಶುವನ್ನು ಹಡೆದಳು. ಈ ಮಗುವನ್ನು ದೇವತೆಗಳು ಮೇರು ಪರ್ವತಕ್ಕೆ ಕೊಂಡು ಹೋಗಿ ಪಾಂಡುಕಶಿಲೆಯ ಮೇಲಕೂರಿಸಿ ಕ್ಷೀರಸಾಗರದ ಜಲದಿಂದ ಅಭಿಷೇಕಮಾಡಿ ಆನಂದದಿಂದ ನರ್ತಿಸಿದರು. ಇದಕ್ಕೆ ಜನ್ಮಾಭಿಷೇಕ ಎಂದು ಕರೆವರು. ಮತ್ತೆ ಉತ್ಸವಪೂರ್ವಕ ಮಗುವನ್ನು ತಂದು ತಾಯಿ ಬಳಿ ಬಿಟ್ಟು ಆದಕ್ಕೆ ಪಾರ್ಶ್ವನಾಥ ಎಂದು ಹೆಸರನ್ನಿಟ್ಟು ದೇವತೆಗಳು ತಮ್ಮ ಲೋಕಕ್ಕೆ ಹೋದರು. ಪಾರ್ಶ್ವನಾಥರು ಬಾಲ್ಯದಿಂದಲೂ ದಯಾಪರರಾಗಿ ಬೆಳೆಯುತ್ತಿದ್ದರು, ಇವರಿಗೆ ಹುಟ್ಟಿನಿಂದಲೇ ಅವಧಿ ಜ್ಞಾನವಿತ್ತು. ಬಹು ದಯಾಳುವೂ ಶಾಂತ ಸ್ವಭಾವಿಗಳೂ ಆಗಿದ್ದರು.

**ಧರಣೇಂದ್ರ ಪದ್ಮಾವತಿಯರು :** ಹಿಂದಿನ ಕಮಠನ ಆತ್ಮವೇ ಬ್ರಾಹ್ಮಿಲೆಯ ತಂದೆ ಮಹೀಪಾಲ ರಾಜನಾಗಿದ್ದನು. ಮಹೀಪಾಲ ಕೆಲಕಾಲ ರಾಜ್ಯಭಾರವನ್ನೆಸಗಿ, ತನ್ನ ಮಡದಿ ಸತ್ತುದನ್ನು ಕಂಡು ನಿರ್ವೇಗದಿಂದ ತಪಸ್ವಿಯಾದನು. ಒಂದು ದಿನ ಈ ತಪಸ್ವಿ ಪಂಚಾಗ್ನಿಗಳ ನಡುವೆ ನಿಂತು ಧ್ಯಾನಮಗ್ನನಾಗಿದ್ದನು. ಈ ಸ್ಥಳಕ್ಕೆ ಪಾರ್ಶ್ವನಾಥರು ಒಮ್ಮೆ ಬಂದು ತನ್ನ ತಾತನು ಮಾಡುತ್ತಿದ್ದ ಪಂಚಾಗ್ನಿ ತಪವನ್ನು ಕಂಡು ಅಗ್ನಿಗೆ ಸಿಕ್ಕಿ ಸಾಯುತ್ತಿದ್ದ ಪ್ರಾಣಿಗಳನ್ನು ಕಂಡು ಮರುಗಿದರು. ಆ ತಪಸ್ವಿಯು ನಂದುತ್ತಿದ್ದ ಉರಿಯನ್ನು ಮತ್ತೆ ಹೆಚ್ಚಿಸುವ ಸಲುವಾಗಿ ಒಂದು ಕಟ್ಟಿಗೆಯನ್ನು ಕೊಡಲಿಯಿಂದ ಸೀಳಲು ತೊಡಗಿದನು, ಇದನ್ನು ಕಂಡ ಪಾರ್ಶ್ವನಾಥರು ಈ ಕಟ್ಟಿಗೆಯನ್ನು ಸೀಳಬೇಡಿ, ಮತ್ತು ಬೆಂಕಿ ಉರಿಸಬೇಡಿ, ಈ ಎರಡು ಕಾರ್ಯಗಳಿಂದಲೂ ಪ್ರಾಣಿ ಹಿಂಸೆಯಾಗುವುದು. ಎಂದು ತನ್ನ ತಾತನಿಗೆ

ಹೇಳಿದರೂ ಆತ ನಿರ್ಲಕ್ಷ್ಯದಿಂದ ಕೊರಡಿಗೆ ಕೊಡಲಿಯಿಂದ ಹೊಡೆದನು. ಕೊರಡಿನಲ್ಲಿದ್ದ ನಾಗ ದಂಪತಿಗಳು (ಸರ್ಪಗಳು) ತುಂಡು ತುಂಡಾಗಿ ಸಂಕಟದಿಂದ ಒದ್ದಾಡುವುದನ್ನು ಕಂಡು ಪಾರ್ಶ್ವನಾಥರು ಕೂಡಲೇ ಅವಕ್ಕೆ ಣಮೋಕಾರವನ್ನು ಉಪದೇಶ ಮಾಡಿದರು. ನಂತರ ಆ ತಪಸ್ವಿಯ ಕಡೆ ತಿರುಗಿ, ''ಈ ತಪಸ್ಸಿನ ಗುರಿಯಾದರೂ ಏನು? ಪಾಪಕರ್ಮದಿಂದ ವಿಮುಕ್ತನಾಗಬೇಕೆಂದಲ್ಲವೇ? ಆದರೆ ಈ ತಪವೆಸಗುವಾಗಲೂ ಅನೇಕ ಜೀವಿಗಳಿಗೆ ಚಿತ್ರಹಿಂಸೆ ಕೊಡುತ್ತಿರುವೆ! ಅಜ್ಞಾನದಿಂದ ನೀನೆಸಗುತ್ತಿರುವ ಈ ಕಾಯಕ್ಲೇಶವು ನೀರನ್ನು ಬೆಣ್ಣೆಗಾಗಿ ಕಡೆಯುವಂತಿದೆ'', ಎಂದು ತನ್ನ ತಾತನಿಗೆ ತಿಳಿಸಿದನು. ಇತ್ತ ವಿಲಿ ವಿಲಿ ಒದ್ದಾಡುತ್ತಿದ್ದ ನಾಗದಂಪತಿಗಳ ಮೇಲೆ ಪಾರ್ಶ್ವನಾಥರ ಕರುಣಾದೃಷ್ಟಿ ಬೀಳುತ್ತಿರುವಾಗಲೇ ಅವುಗಳ ಮನಸ್ಸಿನ ಕ್ರೋಧ ಉಪಶಮವಾಗಿ ಶುಭಭಾವನೆಯಿಂದ ಅವೆರಡು ಸತ್ತು ನಾಗಲೋಕದಲ್ಲಿ ಧರಣೇಂದ್ರ, ಪದ್ಮಾವತಿ ಎಂಬ ಯಕ್ಷದೇವತೆಗಳಾಗಿಹುಟ್ಟಿದವು. ಮಹೀಪಾಲನು ಪಾರ್ಶ್ವನಾಥರ ಮೇಲೆಸಿಟ್ಟುಕೊಂಡು ಬಹುಕಾಲ ತಪ್ಪು ಮಾರ್ಗದಲ್ಲೇ ಚರಿಸಿದ, ಈತ ಕ್ರೋಧದಿಂದಲೇ ಬೆಳೆದು ಕ್ರೋಧದಲ್ಲೆ ಸತ್ತು ಜ್ಯೋತಿರ್ಲೋಕದಲ್ಲಿ ಶಂಬರನೆಂಬ ಕ್ಷುದ್ರ ದೇವತೆಯಾದನು.

**ವೈರಾಗ್ಯ – ಕೇವಲ ಜ್ಞಾನ :** ಪಾರ್ಶ್ವನಾಥರು ಹುಟ್ಟಿದಾಗಿನಿಂದ ಸಂಸಾರಸುಖದಲ್ಲಿ ವಿರಾಗಿಯಾಗಿದ್ದರು. ಆದ್ದರಿಂದ ಮದುವೆಗೆ ಒಡಂಬಡಲಿಲ್ಲ. 30ನೇ ವಯಸ್ಸಿನಲ್ಲಿ ವೈರಾಗ್ಯ ಹೊಂದಿ ಸಂಸಾರವನ್ನು ತೊರೆದರು. ಇದನ್ನರಿತು ದೇವೇಂದ್ರನು ಧಾವಿಸಿಬಂದು ಪಾರ್ಶ್ವನಾಥರನ್ನು ಸುತ್ತಿಸಿ ಆನಂದ ನೃತ್ಯವನ್ನೆಸಗಿ ಸನ್ಯಾಸಿಯಾದ ಪಾರ್ಶ್ವನಾಥರಿಗೆ ಪೂಜೆಯನ್ನೆಸಗಿ ದೇವಲೋಕಕ್ಕೆ ಮರಳಿದನು. ಈ ಕ್ರಿಯೆಗೆ ಪರಿನಿಷ್ಕ್ರಮಣ ಕಲ್ಯಾಣವೆನ್ನುವರು. ಸನ್ಯಾಸಿಯಾದ ಮೇಲೆ ಈತ ಕೆಲಕಾಲ ಕಠಿಣ ವ್ರತದಾರಿಯಾಗಿತಪವೆಸಗಿದರು. ಒಮ್ಮೆ ಎಂಟು ದಿವಸ ಉಪವಾಸವಿದ್ದು ಶುದ್ಧ ಭಾವನೆಯಿಂದ ತಪವೆಸಗುತ್ತಿರುವಾಗ ಶಂಬರ ದೇವ (ಕಮಠ) ವಿಮಾನವೇರಿ ವಿಪುಲಾದ್ರಿಗೆ ಬರುವಾಗ ಆತನ ವಿಮಾನವು ಇದ್ದಕ್ಕಿದ್ದಂತೆ ನಿಂತು ಹೋಯಿತು. ಕೆಳಗಡೆ ಪಾರ್ಶ್ವನಾಥರು ತಪವೆಸಗುತ್ತಿರುವುದನ್ನು ಕಂಡಾಕ್ಷಣ ಈತನಿಗೆ ಹಿಂದಣ ದ್ವೇಷಉಕ್ಕಿ ಮುನಿಯ ಮೇಲೆ ಬೆಂಕಿಯ ಮಳೆ ಸುರಿಸಿದನು. ಮುನಿಯ ಸುತ್ತಲೂ ಭಕ್ತಿಯಿಂದ ಮಂಡಿಸಿದ್ದ ಕಾಡು ಪ್ರಾಣಿಗಳು ಇದನ್ನು ಕಂಡು ಮರುಗಿದವು. ಬೆಂಕಿಯ ಮಳೆಗೆರೆಯುತ್ತಿದ್ದರೂ ಮುನಿಯು ತದೇಕ ಚಿತ್ತದಲ್ಲಿ ಮಗ್ನನಾಗಿಯೇ ಇದ್ದರು. ನಾಗಲೋಕದ ಯಕ್ಷದಂಪತಿಗಳೂ ಅವಧಿ ಜ್ಞಾನದಿಂದ ಮುನಿಗಾಗುತ್ತಿರುವ



ಉಪಸರ್ಗವನ್ನರಿತು ತಕ್ಷಣ ಅಲ್ಲಿಗೆ ಬಂದು ಮಂದರ ಪರ್ವತದಂತೆ ಅಚಲನಾಗಿದ್ದ ಪಾರ್ಶ್ವನಾಥರನ್ನು ಕಂಡು ಅಚ್ಚರಿಗೊಂಡು, ತಮ್ಮ ವಜ್ರದ ಹೆಡೆಯನ್ನು ಕೊಡೆಯಂತೆ ಹರಡಿ ಬೆಂಕಿಯ ಮಳೆ ಮುನಿಗೆ ತಾಗದಂತೆ ತಡೆದರು. ಪೂರ್ವಭವದಲ್ಲಿತಿರ್ಯಕ್ ಪ್ರಾಣಿಗಳಾಗಿದ್ದು ಯಾವ ಮಹಾಪುರಷನ ದಿವ್ಯೋಪದೇಶದಿಂದ ಧರಣೇಂದ್ರ ಪದ್ಮಾವತಿಯರೆಂಬ ದೇವತೆಗಳಾಗಿ ಜನಿಸಿದರೋ ಅವರೇ ಈ ಮಹಾಪುರುಷನ ಉಪಕಾರ ಸ್ಮರಣೆಯಿಂದ ಹೀಗೆ ಸೇವೆ ಸಲ್ಲಿಸಿ ತಮ್ಮ ಕೃತಜ್ಞತೆಯನ್ನು ಪ್ರದರ್ಶಿಸಿದರು. ಸತ್ಪುರುಷರು ಉಪಕಾರವನ್ನೆಂದೂ ಮರೆಯುವುದಿಲ್ಲ. ಪಾರ್ಶ್ವನಾಥರು ಇವೊಂದನ್ನೂ ಗಮನಿಸಿದೆ ಧ್ಯಾನಮಗ್ನರಾಗಿದ್ದು ಕರ್ಮದೊಂದಿಗೆ ಹೋರಾಡಿ ಘಾತೀಯ ಕರ್ಮವನ್ನು ಜಯಿಸಿ ಜಿನರಾದರು. ಅವರಿಗೆ ಲೋಕಾ ಲೋಕವನ್ನರಿಯುವ ಕೇವಲಜ್ಞಾನ ಉಂಟಾಯಿತು. ಅವರು ಸರ್ವಜ್ಞರಾದರು. ಅವರ ಪರಮೌದಾರಿಕ ದಿವ್ಯ ದೇಹವು ಭೂಮಿಯಿಂದ ಮೇಲೇರಿ ಅಂಬರದಲ್ಲಿ ನಿಂತಿತು. ದೇವಗಣ ಬಂದು ಕೇವಲ ಜ್ಞಾನ ಪೂಜೆಯನ್ನು ಮಾಡಿದರು. ದೇವೇಂದ್ರನು ಕುಬೇರನಿಂದ ಸಮವಸರಣವೆಂಬ ಮಹಾ ಸಭಾಮಂಟಪವನ್ನು ನಿರ್ಮಾಣ ಮಾಡಿಸಿದನು. ಅದರ ನಡುವೆ ಗಂಧಕುಟಿಯಲ್ಲಿ ಸ್ವಾಮಿ ವಿರಾಜಮಾನರಾದರು. ಹನ್ನೆರಡು ಸಭೆಗಳೂ ಭರ್ತಿಯಾದವು. 10 ಜನ ಗಣಧರರು ಬಂದು ಸೇರಿದರು. ಸರ್ವರೂ ಭಗವಂತನ ಬೋಧನೆಯನ್ನು ಕೇಳಲು ಸಿದ್ಧರಾದರು. ಇದೇ ಕೇವಲ ಜ್ಞಾನ ಕಲ್ಯಾಣ.

**ನಿರ್ವಾಣ :** ಭಗವಾನರು ತಮ್ಮ ದಿವ್ಯ ಧ್ವನಿಯ ಮೂಲಕ ಐದು ತಿಂಗಳು ಕಡಿಮೆಯಾದ 70 ವರ್ಷಗಳವರೆಗೂ ಧರ್ಮೋಪದೇಶ ಮಾಡಿದರು. ಪತಿತನು ಪಾವನನಾಗುವ, ನರನು ನಾರಾಯಣನಾಗುವ ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಅಪರಿಗ್ರಹಗಳೇ ಆದಿಯಾದ ಅನೇಕ ನೀತಿ, ಧರ್ಮ, ನ್ಯಾಯ ಸಿದ್ಧಾಂತ, ಪುರಾಣಗಳನ್ನು ಬೋಧಿಸಿದರು. ಅವರ ಬೋಧಾಮೃತ ತೀರ್ಥದಲ್ಲಿ ಸ್ನಾನಮಾಡಿದ ಜೀವಿಗಳಿಗೆ ನೆಮ್ಮದಿ ದೊರೆಯಿತು.

ಇನ್ನು ತಮ್ಮ ಆಯುಷ್ಯವು ಒಂದು ತಿಂಗಳಿದೆ ಎನ್ನುವಾಗ ಸಮವಸರಣವನ್ನು ಬಿಟ್ಟು ಸಮ್ಮೇದಗಿರಿಯ ಸುವರ್ಣಭದ್ರ ಕೂಟವೆಂಬ ಶಿಖರವನ್ನು ಸೇರಿ ಯೋಗ ನಿರೋಧವನ್ನು ಮಾಡಿ, ಇದ್ದ ಅಘಾತೀಯ ಕರ್ಮವನ್ನು ಗೆದ್ದರು. ಅವರ ಆತ್ಮವು ಜಡದೇಹದಿಂದ ಬಿಡುಗಡೆ ಹೊಂದಿ ಅಕ್ಷಯ ಸುಖ ಶಾಂತಿಯ ಶಾಶ್ವತ ಸ್ಥಾನವಾದ ಸಿದ್ಧಶಿಲೆಯನ್ನು ಸೇರಿ ನಿತ್ಯನೂ, ನಿರಂಜನನೂ, ಶುದ್ಧನೂ, ಸಿದ್ಧನೂ, ಅಜರನೂ, ಅಮರನೂ, ಪವಿತ್ರನೂ, ಪರಂಜ್ಯೋತಿಯೂ ಆದ ಪರಮ ಪಾವನ

ಪರಮಾತ್ಮನೆನಿಸಿದರು.

ವೈರವನ್ನೇ ಸಾಧಿಸಿದ ಕಮಠನು ಕಷ್ಟ ಕಾರ್ಪಣ್ಯಗಳಲ್ಲಿ ಪರದಾಡಿದನು, ಶಾಂತಿ, ಕ್ಷಮೆ, ದಯೆ, ತಾಳ್ಮೆ, ಸಹನೆ, ಅಹಿಂಸೆಯನ್ನೇ ಸಾಧಿಸಿದ ಮರುಭೂತಿಯು ಮುಕ್ತಿಯನ್ನು ಹೊಂದಿದನು. ಕಷ್ಟಾ-ಕಷ್ಟಾ ದುರ್ಗತಿಗೆ ಈಡು ಮಾಡುವ ಹಠ, ಕೋಪ, ಛಲ, ದುರ್ನಡತೆ, ಯಾರಿಗೂ ಬೇಡ, ಸದ್ಗತಿಗೆ ಸಾಗಿಸುವ ಶಾಂತಿ, ಸಹನಶೀಲತೆ, ಅಹಿಂಸೆಯ ಆಚರಣೆ ಎಲ್ಲರಿಗೂ ಬೇಕು.

ಶ್ರೀಪಾರ್ಶ್ವನಾಥ ತೀರ್ಥಂಕರರು ಮುಕ್ತರಾದುದನ್ನು ತಿಳಿದು ಇಂದ್ರಾದಿ ದೇವತೆಗಳು ಸಮ್ಮೇದಗಿರಿಗೆ ಬಂದರು, ಅಲ್ಲಿದ್ದ ಭಗವಾನರ ಭೌತಿಕ ದೇಶವನ್ನು ದಹನ ಸಂಸ್ಕಾರ ಮಾಡಿ ನಿರ್ವಾಣ ಕಲ್ಯಾಣ ಪೂಜೆಯನ್ನು ಮಾಡಿ ಹೋದರು. ಅಂದು ಶ್ರಾವಣ ಶುಕ್ಲಸಪ್ತಮಿ. ಅದೇ ಮುಕುಟಸಪ್ತಮಿ.

ಶ್ರೀ ಪಾರ್ಶ್ವನಾಥ ತೀರ್ಥಂಕರರು ಭಗವಾನ್ ಶ್ರೀ ಮಹಾವೀರರು ಹುಟ್ಟುವ 250 ವರ್ಷಗಳ ಮುಂಚೆಯೇ ಮುಕ್ತರಾದರು. ಆಗಿನಿಂದಲೂ ಅವರ ಪ್ರತಿಕೃತಿ (ಪ್ರತಿಮೆ)ಯನ್ನು ಮಾಡಿ ಅದಕ್ಕೆ ಪಂಚಕಲ್ಯಾಣ ವಿಧಿಗಳನ್ನು ಮಾಡಿ ಸಮವಸರಣದ ಪ್ರತಿಕೃತಿಯಾದ ಜಿನ ಮಂದಿರದಲ್ಲಿ ಪ್ರತಿಷ್ಠಾಪಿಸಿ ಪೂಜಿಸುತ್ತಾ ಬಂದಿರುವ ಭವ್ಯಭಕ್ತಾಧಿಗಳು ಈ ಭವಬಂಧನದಿಂದ ಬಿಡುಗಡೆ ಹೊಂದುವುದರಲ್ಲಿ ಸಂದೇಹವಿಲ್ಲ.

ನಮಸ್ತೇ ಪಾರ್ಶ್ವನಾಥಾಯ । ಘಾತಿಕರ್ಮ ವಿನಾಶಿನೇ ॥
ನಾಗರಾಜೇಂದ್ರ ವಿಸ್ತೀರ್ಣ । ಫಣಾಲಂಕೃತ ಮೂರ್ತಯೇ ॥



# ಶ್ರೀ ಪಾರ್ಶ್ವನಾಥ ಸ್ತುತಿ

ಪರಮಾತ್ಮ ಭಕ್ತಪಾಲ ಪಾರ್ಶ್ವನಾಥ ಪಾಲಿಸೋ ।
ಸುರಸೇವ್ಯ ನಿನ್ನ ನುತಿಪೆ ಮುಕ್ತಿಪಥವ ತೋರಿಸೋ ॥ಪ॥

ವಾರಣಾಸಿಪುರದ ಪುಣ್ಯ ಜನ್ಮ ಜಿನೇಶ ।
ಪಾರುಮಾಡೊ ದುಃಖ ಶರಧಿಯಿಂದ ಮಹೇಶ ॥೧॥

ವಿಶ್ವಸೇನರಾಜ ವಾಮಾದೇವಿಯ ಕಂದ ।
ವಿಶ್ವಶಾಂತಿ ಕೋರಿ ಪಡೆದೆ ಮುಕ್ತಿಯಾನಂದ ॥೨॥

ಘೋರಕಮಠೋಪಸರ್ಗ ವಿಜಯಿ ವಿಶೇಷ ।
ಶ್ರೀರಮೇಶ ಸರ್ಪಲಾಂಛನೇಶ ಜಿನೇಶ ॥೩॥

ಉರಗರಾಜನರಸಿ ಪದ್ಮಾಂಬೆಯೊಂದಿತಾ ।
ಧರೆಯೊಳಧಿಕರಾದಜೈನ ಭಕ್ತ ಪೂಜಿತಾ ॥೪॥

ಕಾಮಬಾಣ ನಾಶ ನಿನ್ನ ಪಾದ ಪಾವನ।
ಸ್ವಾಮಿ ನಿನ್ನ ನಾಮಧ್ಯಾನ ಮುಕ್ತಿ ಸಾಧನ ॥೫॥

ಜ್ಞಾನಪೂರ್ಣ ಪೊರೆಯೋ ಪಾರ್ಶ್ವನಾಥ ಜಿನೇಶ।
ಜೈನಮತೋದ್ಧಾರಕ ಸಮ್ಮೇದಗಿರೀಶ ॥೬॥